ಡಾ. ಗೌರಿ ಪೈ ೮೦

ಕರ್ಮಣ್ಯೇ
ವಾದಿಕಾರಸ್ತೇ
ಮಾ ಫಲೇಶು
ಕದಾಚನ...



ಅಭಿನಂದನಾ ಗ್ರಂಥ

ಕರ್ಮಣ್ಯೇ ವಾಧಿಕಾರಸ್ತೇ
ಮಾ ಫಲೇಶು ಕದಾಚನ...



ಅಭಿನಂದನಾ ಗ್ರಂಥ

ಪ್ರಕಾಶಕರು

ಡಾ. ಗೌರಿ ಷೈ ಅಭಿನಂದನಾ ಸಮಿತಿ

ಬೆಲೆ : ರೂ. 250/-


ಡಾ. ಗೌರಿ ಪೈ-80 ಅಭಿನಂದನಾ ಸಮಾರಂಭ

21.08.2018

ಸಂಪಾದಕೀಯ ಮಂಡಳಿ



ಕೆ. ಸಿ. ಪ್ರಭು
ಅಧ್ಯಕ್ಷರು - ಅಭಿನಂದನಾ ಸಮಿತಿ
ಮೊ : 98806 77841



ಪಿ ಶ್ರೀನಿವಾಸ ಪೈ
ಉಪಾಧ್ಯಕ್ಷರು-ಅಭಿನಂದನಾ ಸಮಿತಿ
ಮೊ : 9448120576



ಅರೆಹೊಳೆ ಸದಾಶಿವ ರಾವ್
ಪ್ರಧಾನ ಸಂಪಾದಕರು
ಮೊ : 98803 53917



ಪಿ. ವಾಮನ್ ಪೈ
ಸದಸ್ಯರು
ಮೊ : 94481 20787



ಭಾರತಿ ಕಾಮತ್
ಸದಸ್ಯರು
ಮೊ : 99016 58271



ಶಾಂತೇರಿ ಪ್ರಭು
ಸದಸ್ಯರು
ಮೊ : 96112 01895



ಬಿ. ಪುರಂದರ ಭಟ್
ಸಲಹೆಗಾರರು
ಮೊ : 98803 53917



ಡಾ. ಕಾಸರಗೋಡು ಅಶೋಕ್ ಕುಮಾರ್
ಸಹಕಾರ
ಮೊ : 90082 19394

ಪರಿವಿಡಿ

ನಾವು ಕೃತಜ್ಞರು,

ಡಾ. ಗೌರಿ ಪೈ 80 ಅಭಿನಂದನಾ ಸಮಾರಂಭದಲ್ಲಿ ಅಭಿನಂದನಾ ಗ್ರಂಥದ ಮೂಲಕ ಅಕ್ಷರ ತೋರಣ ಕಟ್ಟಿದ ಎಲ್ಲಾ ಬರಹಗಾರರಿಗೆ ಅಭಿನಂದನಾ ಸಮಿತಿ, ಸಂಪಾದಕೀಯ ಮಂಡಳಿ ಹಾಗೂ ಗೌರಿ ಪೈಯವರ ಕುಟುಂಬ ವರ್ಗ ಸದಾ ಆಭಾರಿ.



ಅರೆಹೊಳೆ ಸದಾಶಿವ ರಾವ್
ಪ್ರಧಾನ ಸಂಪಾದಕರು



ಕೆ.ಸಿ. ಪ್ರಭು
ಅಧ್ಯಕ್ಷರು, ಅಭಿನಂದನಾ ಸಮಿತಿ

ಸಂಪಾದಕೀಯ...



ಆಪ್ಯಾಯಮಾನವಾದ ಅವಕಾಶ

✍ ಅರೆಹೊಳೆ ಸದಾಶಿವ ರಾವ್
ಪ್ರಧಾನ ಸಂಪಾದಕರು

ಅನಿರೀಕ್ಷಿತವಾದ ಕೆಲವು ಆಪ್ಯಾಯಮಾನವೂ ಆಗಿ ಬಿಡುತ್ತವೆ - ಇದಕ್ಕೊಂದು ಉದಾಹರಣೆ ನಮ್ಮ ಗೌರಕ್ಷ!

ಸದಾ ಕಾಲ ವಿಶೇಷ ಚಿಂತನೆಗಳೊಂದಿಗೇ ಇರುವವರು ಕೆ ಸಿ ಪ್ರಭು. ಅವರಿಗಿರುವ ಸಾಮಾಜಿಕ ಕಾಳಜಿಯೇ ಅವರನ್ನು ಸದಾ ಲವಲವಿಕೆಯಿಂದ ಇರುವಂತೆ ಮಾಡುತ್ತದೆ. ಅವರ ಬಗ್ಗೆ ಬರೆಯಲೂ ಒಂದು ಪುಸ್ತಕವಾಗಿಯೂ ಮಿಕ್ಕುವಷ್ಟಿದೆ!. ಇದನ್ನೇ ಅವರನ್ನು ಭೇಟಿಯಾದಾಗೊಮ್ಮೆ ಹೇಳಿದೆ- ಅವರು ಆಗ ತೋರಿದ್ದು ಗೌರಕ್ಷನವರನ್ನು ಮತ್ತು ಅವರ ಪುತ್ತೂರಿನ ಮನೆಗೆ ಕರೆದೊಯ್ದೇ ಬಿಟ್ಟರು.

ಮೊದಲ ಭೇಟಿಯ ವೇಳೆಗೆ ಏನೋ ಆತಂಕ. ನಾಡಿನ ಪ್ರತಿಷ್ಠಿತ ವೈದ್ಯ. ಸಮಾಜದ ಕಣ್ಣಿನಂತೇ ಇರುವವರು, ಗಣ್ಯರು...ಒಂದು ರೀತಿಯ ಗೌರವ ಮಿಶ್ರಿತ ಭಯ....

ಆದರೆ...ಭಯ ಕ್ಷಣಾರ್ಧದಲ್ಲೇ ಮಾಯ!. ಅಲ್ಲಿ ದುಪ್ಪಟ್ಟಾದ ಗೌರವ. ಗೌರಕ್ಷನೇ ಹಾಗೆ...ಇಂದು ನನಗನಿಸುವುದು ಇದು....

ಗಂಭೀರ ಮುಖ ಮುದ್ರೆ. ಸಿರಿವಂತಿಕೆಯನ್ನು ಸೂಚಿಸುವ ಉಡುಗೆ-ತೊಡುಗೆ, ಕೈಗೊಂದು ಕಾಲಿಗೊಂದು ಆಳು-ಕಾಳು. ಹೋಗಿ ಕಾದು ಕುಳಿತು ಮಾತಾಡಬೇಕಾದ ಅನಿವಾರ್ಯತೆ....ಇದೆಲ್ಲವನ್ನೂ ನಾನು ನಿರೀಕ್ಷಿಸಿದ್ದೆ!

ಆದರೆ...ಸರಳತೆಗೊಂದು ಮಾದರಿ. ಹೋಗುತ್ತಲೇ ಮನೆಯ ಬಾಗಿಲಿಗೆ ಬಂದು ಬನ್ನಿ ಬನ್ನಿ ಎಂಬ ಬಾಯ್ತುಂಬಾ ನಗುವಿನ ಆತ್ಮೀಯತೆ. ಎಲ್ಲೂ ಕಾಣದ ಆಡಂಬರ.... ಬಹುಶಃ ಗೌರಕ್ಷ ಬೇರೆಯವರೇ ಇರಬೇಕು. ಅವರೊಳಗೆಲ್ಲೋ ಇರಬೇಕು ಎಂಬ ಭಾವದಿಂದ ಮುದುಡಿ ಕುಳಿತಿದ್ದೆ...ಆಗಲೇ ಕೆ ಸಿ ಪ್ರಭು ಹೇಳಿದರು...ಅವರು ಅರೆಹೊಳೆ.....ಮತ್ತು ಇವರು ಗೌರಕ್ಷ...ನನಗೋ...ಅಚ್ಚರಿ!

ಇಂತಹ ದೊಡ್ಡ ಹೆಸರು ಮಾಡಿದ ವ್ಯಕ್ತಿ ಹೀಗೂ ಇರುತ್ತಾರಾ...ನನ್ನೊಳಗಿನ ಪ್ರಶ್ನೆಗೆ ಇರುತ್ತಾರೆ..ಗೌರಕ್ಷನಂತವರು ಎಂಬ ಉತ್ತರ ಎದುರಿಗೇ ಇತ್ತು!

ಅವರ ಬಗ್ಗೆ ಅಭಿನಂದನಾ ಗ್ರಂಥ ಮಾಡುವ ಮಾತಾಯ್ತು. ಅದಕ್ಕೆ ಗೌರಕ್ಷ ಎಂತಕ್ಕೆ ಇದೆಲ್ಲಾ. ಕೆಲಸ ಇಲ್ಲವಾ' ಎಂದೂ ಆಯ್ತು. ಈ ಕೆಲಸ ಆಗಲೇ ಬೇಕೆಂಬ ನಿರ್ಧಾರ ಹೊಂದಿದ್ದ ಶ್ರೀಮತಿ ಶಾಂತೇರಿ ಪ್ರಭು ಬಿಡಬೇಕಲ್ಲಾ?.. ಆಗಲೇ ಬೇಕು ಎಂದರು... ಪರಿಣಾಮವಾಗಿ ಈ ಹೊತ್ತಗೆ...ನಿಮ್ಮ ಮಡಿಲಲ್ಲಿ

ಗೌರಕ್ಷನವರ ಬಗ್ಗೆ ಈ ಪುಸ್ತಕದಲ್ಲಿ ಅನೇಕರು ತಮಗನಿಸಿದ್ದನ್ನು ಬರೆದಿದ್ದಾರೆ. ಈ ನೆಲೆಯಲ್ಲಿ ನನ್ನ ಅವರ ಸಂಪರ್ಕ ಇತ್ತೀಚಿನದ್ದು. ಆದರೆ ಇತ್ತೀಚಿನದ್ದು ಎಂಬುದಕ್ಕೆ ಯಾವುದೇ ಪುರಾವೆ ಸಿಗದಷ್ಟು ಅವರು ಆತ್ಮೀಯರಾಗಿದ್ದಾರೆ. ಅದಕ್ಕೆ ಬಿರಖುಣಿ.

ಗೌರಕ್ಷನವರ ಪರಿಚಯವನ್ನು ಬರೆಯುವುದೇ ಒಂದು ದೊಡ್ಡ ಕೆಲಸ ಅಂದುಕೊಂಡಿದ್ದೆ. ಆದರೆ ಅವರು ಅದನ್ನು ಸುಲಲಿತಗೊಳಿಸಿದರು. ತಮಗೆ ನೆನಪಾದ ಹಾಗೆ ಟಿಪ್ಪಣಿಗಳನ್ನು ದಾಖಲಿಸುತ್ತಲೇ ಹೋದರು. ಅದಕ್ಕೊಂದು ಬರಹ ರೂಪ ನೀಡಿದ್ದಷ್ಟೇ ಸಂಪಾದಕೀಯ ಮಂಡಳಿ.

ಡಾ। ಗೌರಿ ಪೈ -೮೦ ವಿಶೇಷ ಹೊತ್ತಗೆ ನಿಮ್ಮ ಮಡಿಲಿನಲ್ಲಿದೆ. ಸಮಾರಂಭವಾದಾಕ್ಷಣವೇ ಹೊರ ಬರಬೇಕಾಗಿದ್ದ ಪುಸ್ತಕ ಅನಿವಾರ್ಯವಾದ ಕಾರಣಗಳಿಂದ ವಿಳಂಬವಾಗಿ ನಿಮ್ಮ ಕೈ ಸೇರುತ್ತಿದೆ. ಈ ವಿಳಂಬಕ್ಕೆ ನಾನು ಮತ್ತು ನನ್ನನ್ನು ಸುತ್ತುವರಿದ ಕೆಲ ಅನಿವಾರ್ಯ. ಅನಿಯಂತ್ರಿತ ಕಾರಣಗಳಿದ್ದರೂ. ಕ್ಷಮೆ ಇರಲೆಂಬುದು ನನ್ನ ವಿನಂತಿ.


ಗ್ರಂಥದ ತಯಾರಿಯಲ್ಲಿ ಸಹಕರಿಸಿದ ಸಂಪಾದಕೀಯ ಮಂಡಳಿಯ ಎಲ್ಲಾ ಸದಸ್ಯರಿಗೂ. ಸಮಾರಂಭಕ್ಕೂ ಬಂದು ಈ ಹೊತ್ತಗೆಯಲ್ಲಿ ನನ್ನೊಂದಿಗೆ ಹೆಗಲು ನೀಡಿದ ಡಾ.ಕಾಸರಗೋಡು ಅಶೋಕ್ ಕುಮಾರ್ ಅವರಿಗೂ. ಅಂದವಾದ ವಿನ್ಯಾಸ. ಮುದ್ರಣದ ಜವಾಬ್ದಾರಿ ಹೊತ್ತು. ಮಾಡಿಸಿಕೊಟ್ಟ ವೇಗಾ ಗ್ರಾಫಿಕ್ಸ್‌ನ ಸುಹಾಸ್ ಮತ್ತವರ ಸಿಬಂದಿಗೂ.... ಸದಾ ಕೃತಜ್ಞ.

ಕ್ಲಿಷ್ಟ ಸಮಯದಲ್ಲಿ ಲೇಖನ ಕಳುಹಿಸಿದ ಎಲ್ಲಾ ಬರಹಗಾರರಿಗೆ ಹೇಗೆ ಆಭಾರಿಯಾಗದಿರಲಿ!. ಗೌರಕ್ಷನವರ ಋಣವನ್ನು ಅದ್ಹೇಗೆ ತೀರಿಸಿಯೇನೋ ಕಾಣೆ! ಕೆ. ಸಿ. ಪ್ರಭು – ಶಾಂತೇರಿ ಪ್ರಭು ಸದಾ ಜೊತೆಗಿದ್ದವರು – ಇರುವವರು!. ಸಾಹಿತ್ಯ ಬದುಕಿನಲ್ಲಿ ಈ ಜವಾಬ್ದಾರಿಯನ್ನು ಒಂದು ಅಪರೂಪದ. ಅಪೂರ್ವವಾದ ಅವಕಾಶ ಎಂದೇ ಭಾವಿಸಿ ಎಲ್ಲರಿಗೂ ಕೃತಜ್ಞತೆಗಳು.

ಇನ್ನು...ತಮ್ಮ ಪ್ರತಿಕ್ರಿಯೆಯ ನಿರೀಕ್ಷೆ ನಮ್ಮದು.

ನಮಸ್ಕಾರಗಳು

ಗೌರಕ್ಕನೆಂದರೆ...



✍ ಸೋದರಿ ವನಿತಾ
ಬೆಂಗಳೂರು

ಜನ್ಮದಿನದ ಶುಭದ ಘಳಿಗೆಯಿದು ತಾಯೇ
ಆಯುಷ್ಯ ಆರೋಗ್ಯ ಆನಂದ ಮಳೆ ಸುರಿಯೇ

ಮಾತ ಪಿತರೂ ತಮಗೆ, ಪ್ರತ್ಯಕ್ಷ ದೈವವು
ಅಕ್ಕ ಅಣ್ಣಂದಿರು ಆಗಿಹರು ಭುಜಬಲವು
ಬಂಧು ಮಿತ್ರರು ಇಹರು ತಮ್ಮಾತ್ಮ ಬಲವು
ಗುರು ಹಿರಿಯರಾಗಿಹರು ಜ್ಞಾನದಾ ಬಲವು

ಅಂತರಿಕ್ಷವು ತಮ್ಮನುತ್ತುಂಗಕೇರಿಸಿದೆ
ಜಲವು ತಮ್ಮನು ಹರಸಿ ಪಾವನಗೊಳಿಸಿದೆ
ಅಗ್ನಿವಾಯುವು ಪ್ರಾಣಜ್ಯೋತಿಯನು ಬೆಳಗಿಸಿದೆ
ಧರೆ ಒಲಿದು ಸಕಲ ಸಂಪದವನು ಕರುಣಿಸಿದೆ

ಮನೆ-ಮನಕೆ ದೇಶಕೆ ಯಶವ ತಂದಿಹೆ ತಾಯೇ
ತಾಯ್ನಾಡ ಸಂಸ್ಕೃತಿಯ ಧಾರೆ ಹರಿಸಿದೆ ತಾಯೇ
ಋಷಿ ಪರಂಪರೆಯಾ ಕವಚ ತೊಟ್ಟಿಹೆ ತಾಯೇ
ದೈವಿ ಕೃಪೆ ಅಕ್ಷತೆಯ ಧರಿಸಿರುವೆ ಓ ತಾಯೇ

ತಮ್ಮ ಆದರ್ಶವು ನಮಗೆ ಮೇಲ್ಪಂಕ್ತಿಯಾಗಲಿ
ತಮ್ಮ ಆಶೀರ್ವಾದ ಅನವರತ ದೊರೆಯಲಿ (ನಮಗೆ)
ತಮ್ಮಾತ್ಮ ಬಲವೂ ಪ್ರೇರಣೆಯ ನೀಡಲಿ
ತಮ್ಮ ವಾತ್ಸಲ್ಯದ ಸುಧೆಯು ಹೃದಯದೀ ತುಂಬಲಿ



ಆಶ್ರಮವಾಸಿಗಳೊಂದಿಗೆ...



ಡಾ। ಗೌರಿ ಪೈ ಅಭಿನಂದನಾ ಗೀತೆ

ಆಶಯ ಗೀತೆ ರಚನೆ – ಆಶುಕವಿ ಬಲ್ನಾಡು ಸುಬ್ಬಣ್ಣ ಭಟ್
ರಾಗ ಸಂಯೋಜನೆ – ಶ್ರೀಮತಿ ಶೈಲಜಾ ಶ್ರೀರಾಮ್ ಬಲ್ನಾಡು
ಗಾಯನ – ಕುಮಾರಿ ಸಾಯಿ ಲಕ್ಷ್ಮೀ ಬಲ್ನಾಡು
ಪಕ್ಕ ವಾದ್ಯ – ಸಾಯಿ ಸುಬ್ರಹ್ಮಣ್ಯ ಬಲ್ನಾಡು

ಶ್ರೀಮಂತ ಮನೆತನದ ಹೆಸರಾಂತ ವೈದ್ಯೆ
ಮಂಗ್ಳೂರು ಮಣಿಪಾಲದಲ್ಲಿ ಕಲಿತು ವಿದ್ಯೆ
ಬಾಲ್ಯದಿಂದಲೇ ಬಂದ ಸೇವಾ ಪ್ರವೃತ್ತಿ
ಸರಳ ಸಜ್ಜನಿಕೆಗಳ ಸಾಕಾರ ಮೂರ್ತಿ ॥ 1 ॥

ಗೋಪಾಲ ಪೈ ಗಿರಿಜೆಯರ ಕಿರಿಯ ಪುತ್ರಿ
ಸಂಸಾರದಲ್ಲಿ ರಕ್ತ ಕ್ಷಮೆಯಲಿ ಧರಿತ್ರಿ
ಸತ್ಸಂಗದಾಸಕ್ತಿ ದೇವರಲಿ ಭಕ್ತಿ
ಚಿತ್ರಕಲೆಯೊಂದು ಹವ್ಯಾಸದ ನಿಯುಕ್ತಿ ॥ 2 ॥

ದರ್ಜೆಯುಳ್ಳೊಂದು ಆಸ್ಪತ್ರೆ ನಿರ್ಮಾಣ
ಜನುಮವಿತ್ತ ಜನನಿಯ ನಾಮಕರಣ
ಪುತ್ತೂರ ಮೊದಲ ಮಹಿಳಾ ದವಾಖಾನೆ
ಹತ್ತೂರ ವ್ಯಾಪಿಸಿದ ಕೀರ್ತಿಯ ನಿಶಾನೆ ॥ 3 ॥

ಮೂವತ್ತು ವರ್ಷಗಳ ಪರಿಪೂರ್ಣ ಮಹಿಮೆ
ಹೆರಿಗೆಯಲಿ ಪರಿಣತಿಯು ಸ್ತ್ರೀಯರ ಹಿರಿಮೆ
ದೈವದಲಿ ವಿಶ್ವಾಸ ಕರ್ಮದಲಿ ನಿಷ್ಠೆ
ಸೇವಾ ಮನೋವೃತ್ತಿ ಪೈಗಳ ಪ್ರತಿಷ್ಠೆ ॥ 4 ॥

[illegible]
[illegible]
[illegible]
[illegible] ॥ 5 ॥

ಊರ ಪರವೂರ ಪರದೇಶ ಸಂಚಾರ
[illegible]
ವೈದ್ಯ ಗೌರೀ ಪೈಗಳ ಹಿರಿತನವು
[illegible] ॥ 6 ॥


[illegible]
ಅಲ್ಲಿ ಆಶ್ರಮದ ನಿರ್ಮಾಣ
ಬಾಳ ಸಂಜೆಯಲಿ ಬಸವಳಿದವರ ಪಾಡು
[illegible] ॥ 7 ॥

[illegible]
[illegible]
[illegible]
[illegible] ॥ 8 ॥

[illegible]
[illegible]
[illegible]
[illegible] ॥ 9 ॥

[illegible]
[illegible]
[illegible]
[illegible] ॥ 10 ॥

[illegible]
[illegible]
[illegible]
[illegible] ॥ 11 ॥



ಗೌರಕ್ಕ ಎಂಬ ಅದ್ಭುತ ಚೇತನ...!

✍ ಕೆ. ಪಿ. ಪ್ರಭು,
ಅಧ್ಯಕ್ಷರು, ಡಾ. ಗೌರಿ ಪೈ ೮೦ ಅಭಿನಂದನಾ ಸಮಿತಿ

ಜೀವನದಲ್ಲಿ ಅಪೂರ್ವ ಗಳಿಗೆಗಳು ಬರುವುದೂ ಅಪರೂಪಕ್ಕೇ!!! ನನಗೆ ಈಗದು ಬಂದಿದೆ!!!!

ಗೌರಕ್ಕ – ಅದ್ಭುತ ಚೈತನ್ಯವನ್ನು ನನ್ನೊಳಗೆ ಸದಾ ತುಂಬುತ್ತಿದ್ದ ಅದಮ್ಯ ಚೇತನ–ಶಕ್ತಿ ಮತ್ತು ಪ್ರೇರಣೆಯ ಹೆಸರು!

ಎಷ್ಟೋ ಸಲ ಅಂದುಕೊಂಡಿದ್ದೇನೆ. ಓರ್ವ ಮಹಿಳೆಯಾಗಿ, ಏಕಾಂಗಿಯಾಗಿ, ವೈದ್ಯಕೀಯ ಕ್ಷೇತ್ರದಲ್ಲಿ ಲಕ್ಷಗಟ್ಟಲೆ ದುಡಿಯುವ ಅಷ್ಟೂ ಸಾಮರ್ಥ್ಯವನ್ನು, ಜನ ಸೇವೆಗಾಗಿಯೇ ಮುಡಿಪಾಗಿಡುವ ಯಾವ ಅನಿವಾರ್ಯತೆ ಈ 'ಜೀವ'ಕ್ಕೆ ಇದೆ ಎಂದು!!

ಗೌರಕ್ಕನವರನ್ನು ಆತ್ಮೀಯವಾಗಿ, ಸನಿಹದಲ್ಲಿಯೇ ನೋಡಿದ ಅನೇಕರಿಗೆ ಇದು ಈಗಲೂ ಅಚ್ಚರಿಯೇ!. ಆದರೆ ಆಕೆ ಬೆಳೆದುಬಂದ ಪರಿ, ಸ್ವಯಂ ರೂಢಿಸಿಕೊಂಡ ಶಿಸ್ತು, ಜೀವನದಲ್ಲಿ ನೊಂದವರೆಡೆಗಿರುವ ಆಕೆಯ ಅಪರಿಮಿತ ಕಾಳಜಿ, ಸರ್ವಜನಾಂಗದಲ್ಲೂ ಆಕೆ ಕಂಡುಕೊಳ್ಳುವ ಮಾನವೀಯತೆ, ಸದಾ ಬೇರೆಯವರ ಚಿಂತನೆಯಲ್ಲಿಯೇ ಕಳೆದು ಹೋಗುವ ನಿಸ್ವಾರ್ಥದ 'ಮನುಷ್ಯತ್ವ'–ಇದೆಲ್ಲವೂ ಗೌರಕ್ಕನವರಿಂದ ಮಾತ್ರವೇ ಸಾಧ್ಯ–ಹಾಗಾಗಿಯೇ ಆಕೆಗೆ ಮಾತ್ರ ಇಂತಹ ಎತ್ತರದ ಆಲೋಚನೆ – ಯೋಜನೆ!. ಅಂತಹ ಹಿರಿಯ ಚೇತನಕ್ಕೀಗ ಎಂಭತ್ತು!!

ನಮಗಿರುವ ಉದ್ದೇಶ? –ಒಂದು ಸಾರ್ಥಕ ಜೀವನ ನಮ್ಮ ಮುಂದಿನ ಪೀಳಿಗೆಗೆ ಆದರ್ಶವಾಗಬೇಕು ಎಂಬುದು. ಹಾಗಾಗಬೇಕಾದರೆ, ಆ ಜೀವನ ಶೈಲಿ, ಧ್ಯೇಯ, ನಡೆ–ನುಡಿ ಸದಾ ದಾಖಲಾಗಿ, ಪ್ರತೀ ಮನಸ್ಸನ್ನೂ ಅರಳಿಸುವಲ್ಲಿ ನೆರವಾಗಬೇಕು. ಇದೇ ದಾರಿಯಲ್ಲಿ ಬದುಕಿನ ಪ್ರತೀ ಕ್ಷಣದ ಸಾರ್ಥಕತೆ ಅನುಭವಿಸುವವರಿಗೆ ಇದೊಂದು ಮಾದರಿಯಾಗಬೇಕು

– ಅಷ್ಟೇ. ಹಾಗೆಂದೇ ಈ ಅಭಿನಂದನಾ ಗ್ರಂಥ-ಅದಕ್ಕೊಪ್ಪುವ ಒಂದು ಸ್ವಚ್ಛ ಅದರ ಒಂದರ್ಥ ಅರಿವ ಅಭಿನಂದನಾ ಸಮಾರಂಭ!

ಅಭಿನಂದನಾ ಸಮಾರಂಭ ಯಾಕೆ...! ಬೇಕೇ ಬೇಕು. ಎಂಬುದಕ್ಕೆ ಹಲವಾರು ಕಾರಣಗಳು. ಗೌರಿಪೈಯವರು ಸಮಾಜಕ್ಕೆ, ಕುಟುಂಬದವರಿಗೆ, ವಿದ್ಯಾರ್ಥಿವೃಂದದವರಿಗೆ, ಬಂಧು ಬಳಗಕ್ಕೆ, ಸ್ನೇಹಿತರಿಗೆ, ಸ್ನೇಹಿತರ ಅಭಿಮಾನಿಗಳಿಗೆ, ಪರಿಚಿತರಿಗೆ, ಪರಿಚಿತರನ್ನುಳ್ಳವರಿಗೆ, ಕೆಲವು ಬಲ್ಲವರಿಗೆ, ಕೇಳದೇ ಬಲ್ಲವರಿಗೆ...ಹೀಗೆ ಯಾರಿಗೆ ಅಭಿಮಾನ ಮೂಡಿಸ್ಸ ಎಂದರೆ ಉತ್ತರ ಒಂದಕ್ಕೊಂದು ಬೆಸೆದಿದ್ದು. ಆದರ್ಶ ಸಾಮಾಜಿಕ ಕಾಳಜಿಯ ಹಿರಿಯ ವ್ಯಕ್ತಿ ಎಂದರೆ ಹೀಗಿರಬೇಕು ಎಂಬಂತೆ ಬದುಕಿದ ಇವರಿಗೆ. ಈ ಸಂದರ್ಭ ಸ್ಮರಣೆ ಬೇಕಾದ ಸಂದರ್ಭದಲ್ಲಿ 'ದಶಕ್ಕಾಗ' ಎಷ್ಟಾಗದು...ಇದೆಂದು ಸಹಜವಾದದ್ದು ಒಪ್ಪಿದೆವು. ಸಮಾಜದ ಕಣ್ಣಂತೆ ಕಾಯ್ದ ಮಾಡಿದ, ಒಂದು ಮಾದರಿ ಎಂಬಂತೆ ನಮ್ಮ ನಡುವೆ ಇರುವ ಈ 'ಸಂತನಿಗೆ' ಒಲುಮೆಗೆ ನಮ್ಮ ಗೌರವ, ಅಭಿಮಾನ, ಪ್ರೀತಿ ಹಾಗೂ ಒಂದು ಬಗೆಯಲ್ಲಿ ಕೃತಜ್ಞತೆ ಹೇಳಲು ಅವಕಾಶ ಅಷ್ಟೇ ಮಾತ್ರ ನಮಗೆ ಕಾರಣವಿಲ್ಲ—ಹಾಗೆಂದೇ ಈ "ಡಾ. ಗೌರಿ ಪೈ-80"! ಸಮಾಗಮಕ್ಕೆ ಇದು ಸಂಭ್ರಮ—ನಮ್ಮ ಎಲ್ಲರ ಹಾರ್ದಿಕ ಸ್ವಾಗತ!

ನಮನಗಳು



ಡಾ. ಗೌರಿ ಪೈ 80 ಅಭಿನಂದನಾ ಸಮಾರಂಭದ ಮೆರುಗು ಹೆಚ್ಚಿಸಲು ಕಾರಣರಾದವರು ಹಲವರು ಎಲ್ಲರಿಗೂ ನಾವು ಕೃತಜ್ಞರು ವಿಶೇಷವಾಗಿ :-

- ಡಾ. ಗೌರಿ ಪೈ 80 ಅಭಿನಂದನಾ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆ
- ಗೌರಿ ಪೈಯವರ ಸ್ನೇಹಿತರು – ಬಂಧು – ಮಿತ್ರರುಗಳಿಗೆ
- ವಿಶೇಷ ಸಂಚಿಕೆಯ ವಿನ್ಯಾಸ, ಮುದ್ರಣಕ್ಕೆ ನೆರವಾದ ವೇಗಾ ಗ್ರಾಫಿಕ್ಸ್, ಮಂಗಳೂರಿನ ಸುಹಾಸ್ ಪಿ ಹಾಗೂ ವಿಲ್ಸನ್ ಪಿಂಟೊ
- ಸಂಪಾದಕೀಯ ಮಂಡಳಿ
- ಆನಂದಾಶ್ರಮದ ಆಡಳಿತ ಮಂಡಳಿ
- ಅಡಮೋಳೆ ಸದಾಶಿವ ರಾವ್ ಮತ್ತು ಕುಟುಂಬ
- ಡಾ. ಕಾಸರಗೋಡ್ ಅಶೋಕ್ ಕುಮಾರ್

ಎಲ್ಲರಿಗೂ ವಿಶೇಷ ನಮನಗಳು

ನಮ್ಮ ಕಣ್ಣಾರೆಕ್ಕೆ ಗೌರವ್ವ ಒಪ್ಪಿಗೆಯ ಅಭಿನಂದನೆಯೂ ಬೇಡ. ಪುರಸ್ಕಾರವೂ ಬೇಡ. ಅದಕ್ಕೆ ಒಗ್ಗಿದವರು ನಮ್ಮ ಎಲ್ಲರಿಗೆ ನೆನಪಾಗಲು ಎಂಬುದೊಂದೇ ಅವರ ಹಠ. ಹೀಗೂ

ಒಪ್ಪಿಸಿದೆವು-ಅವರೊಪ್ಪಿದ್ದು ಅರೆ ಮನಸ್ಸಿನಿಂದ-ನಮಗದೇ ಮಹಾಭಾಗ್ಯ!

ಇದೆಲ್ಲದರ ಹಿಂದೆ ಅನೇಕ ಸಮಾನ ಮನಸ್ಸುಗಳೂ ನಮ್ಮ ಯೋಚನೆಗೆ, ಯೋಜನೆಗೆ ತಮ್ಮ ಸಹಮತ ತೋರಿದರು. ಅಭಿನಂದನಾ ಸಮಾರಂಭ ಮತ್ತು ಅಲ್ಲಿ ಅಭಿನಂದನಾ ಗ್ರಂಥ ಅರ್ಪಿಸುವ ಯೋಜನೆಗೆ ಸ್ಪಂದಿಸಿದರು.

ವಸುದೈವ ಕುಟುಂಬಕಂ ಎಂಬುದಕ್ಕೆ ಈಕೆ ಒಂದು ನಿದರ್ಶನ. ತಮ್ಮ ಕುಟುಂಬದ ಬಗ್ಗೆಯೂ ಇವರಿಗೆ ಎಲ್ಲಿಲ್ಲದ ಕಾಳಜಿಯನ್ನು ಸನಿಹದಿಂದಲೇ ಕಂಡವನು ನಾನು. ತಮ್ಮ ಒಡ ಹುಟ್ಟಿದ 9 ಜನ, ಅವರ ಹೆಂಡತಿ, ಮಕ್ಕಳು, ಅಪ್ಪ, ಅಮ್ಮ, ಸಹೋದರಿಯವರ ಪರಿವಾರ, ಹೀಗೆ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಜೀವಮಾನಪರ್ಯಂತ ನೆನಸಲೇಬೇಕಾದ ಸಹಾಯ ಹಸ್ತನೀಡಿದವರು ಗೌರಕ್ಕ! ತಮ್ಮ 60 ಮತ್ತು 75ನೆಯ ವಯಸ್ಸಿನಲ್ಲಿ, ಇದನ್ನೇ ನೆಪವಾಗಿಟ್ಟುಕೊಂಡು, ಸಾಧ್ಯವಾದಷ್ಟೂ ಕುಟುಂಬಿಕರಿಗೆ, ಆತ್ಮೀಯರಿಗೆ ತಾವೇ ಕರೆದು ತಮ್ಮ ಪ್ರೀತಿ-ವಾತ್ಸಲ್ಯ ತೋರಿದ ಮಹಾನ್ ಚೇತನ. ಇದರೊಂದಿಗೆ ಇವರ ಸಾಮಾಜಿಕ ಬದ್ಧತೆಯ ಪ್ರತೀಕವಾಗಿ ಇಂದು ತಲೆ ಎತ್ತಿ ನಿಂತಿರುವ ಆನಂದಾಶ್ರಮ, ಬದುಕಿನ ಸಂಜೆಯಲ್ಲಿ ತಂಗಾಳಿಯಲ್ಲಿ ಮೈ ಒಡ್ಡಿ, ಮನ ಹಗುರಾಗಿಸಿ ನಿಶ್ಚಿಂತೆಯ ಜೀವನಕ್ಕೆ ಕಾರಣವಾಗಿದೆ!. ಈ ಗೌರಕ್ಕನವರ ಗಿರಿಜಾ ಕ್ಲಿನಿಕ್ ಮೂಲಕ ಅದೆಷ್ಟೋ ಕುಟುಂಬಗಳ ಮನೆಯ ದೀಪ ಬೆಳಗಿದೆ!. ಒಂದು ತಪಸ್ಸಿನಂತೆ ಇವರು ಕೈಗೊಂಡ ನೇತ್ರ ಚಿಕಿತ್ಸಾ ಶಿಬಿರಗಳು ಜಗದ ಅನೇಕರಿಗೆ ಜಗದಂದ ನೋಡಲು ಕಣ್ಣು ನೀಡಿದೆ!. ಸಹಾಯ ಯಾಚಿಸಿ ಬಂದ ಯಾರೂ ಬರಿ ಕೈಯಲ್ಲಿ ಹಿಂದಿರುಗಿದ ಉದಾಹರಣೆ ಗೌರಕ್ಕನ ಅಕ್ಕ ಪಕ್ಕದಲ್ಲೆಲ್ಲೂ ಇಲ್ಲ!. ನೊಂದವರ ಕಣ್ಣೀರೊರೆಸುವಲ್ಲಿ ಸದಾ ಮೊದಲಾಗಿ, ಸಮಾಜಕ್ಕೆ ನಾವೇನು ನೀಡಬಹುದು ಎಂಬ ಚಿಂತನೆಯಲ್ಲೇ ಬದುಕುತ್ತಿರುವ ಅಪರೂಪದ ಅಕ್ಕ-ನಮ್ಮ ಈ ಗೌರಕ್ಕ!


ಓರ್ವ ಅಪರೂಪದ ಚಿತ್ರಕಲಾವಿದೆಯೂ ಆಗಿರುವ ಗೌರಕ್ಕನವರಲ್ಲಿ ನಾನು ಕಂಡ ಮತ್ತೊಂದು ವಿಶಿಷ್ಟತೆ ಎಂದರೆ ಆಕೆಯ ದೈವಭಕ್ತಿ!. ಮಾನವನ ಸಾಧನೆ ಎಷ್ಟೇ ವಿಸ್ತಾರವಾಗಿದ್ದರೂ, ಅದೆಲ್ಲಕ್ಕೂ ದೈವ ಪ್ರೇರಣೆ ಬೇಕೇ ಬೇಕೆಂದು ಖಂಡಿತವಾಗಿ ನಂಬಿರುವ ಇವರು, ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ಹೆಚ್ಚಿನ ಪವಿತ್ರ - ಪುಣ್ಯಕ್ಷೇತ್ರ ಸಂದರ್ಶಿಸಿದವರು. ಇವರೊಂದಿಗೆ ಹೆಚ್ಚಿನ ಸಂದರ್ಭದಲ್ಲಿ ನಾನೂ, ಶಾಂತೇರಿಯೂ ಜೊತೆಗೂಡಿದ್ದೆವು. ಹೋದಲ್ಲೆಲ್ಲಾ ಆನಂದಾಶ್ರಮದ ವಾಸಿಗಳಿಗೆ, ಮನೆಯ ಕೆಲಸದವರಿಗೆ (ಅವರು ಹೇಳುವಂತೆ ಎರಡನೆಯ ಕುಟುಂಬದವರು), ಪರಿಚಿತರಿಗೆ ಉಡುಗೊರೆಗಳನ್ನು ತೆಗೆದುಕೊಳ್ಳುವುದನ್ನು ನೋಡಿದ್ದೇವೆ. ಬಹುಶಃ ಈ ರೀತಿ, ತಾನು ತನ್ನವರು ಎಂಬಂತೆ ಎಲ್ಲರನ್ನೂ ಪರಿಗಣಿಸುವ ಸಾಧಕರು ಅತಿ ವಿರಳ ಎಂಬುದೇ ನನ್ನ ಅನಿಸಿಕೆ.

1975ರ [illegible]

[illegible]

[illegible] ದೇವರು ಆಕೆಗೆ ಕರುಣಿಸಲಿ.....

ನಮಸ್ಕಾರಗಳು



ನಾನು....
ನಿಮ್ಮ ಪ್ರೀತಿಯ ಗೌರಿ ಪೈ...

ನನಗೂ
ಗೊತ್ತಿಲ್ಲ...ನಾನೀ ಸಮಾರಂಭಕ್ಕೆ ಎಷ್ಟರ ಮಟ್ಟಿಗೆ ಅರ್ಹಳೆಂದು!!. ನನಗೆ ೮೦ ಆಗಿದ್ದು ಸತ್ಯ. ಆ ಹಿನ್ನೆಲೆಯಲ್ಲಿ ನನ್ನ ಆತ್ಮೀಯ ವಲಯ ನನ್ನನ್ನು ಸಂಪರ್ಕಿಸಿ 'ಡಾ.ಗೌರಿ ಪೈ ೮೦" ಸಮಾರಂಭ ಆಯೋಜಿಸುವುದಾಗಿ ಹೇಳಿದಾಗ, ಮತ್ತೆಂತ ಬೇಡವಾ ಎಂದಿದ್ದೆ. ಆದರೆ ಈ ಕೆ ಸಿ ಪ್ರಭು ಮತ್ತು ಶಾಂತೇರಿ ಕೇಳಬೇಕಲ್ಲ....ಮನೆಗೆ ಬಂದು ದುಂಬಾಲು ಬಿದ್ದು, ಕೊನೆಗೂ ಒಪ್ಪಿಸಿದರು!. ನನಗಿದರಿಂದ ಸಂಭ್ರಮಕ್ಕಿಂತ ಸಂಕೋಚವೇ ಹೆಚ್ಚು. ಆದರೂ ಒಮ್ಮೊಮ್ಮೆ ಪ್ರೀತಿ ಪಾತ್ರರ ಆಗ್ರಹಕ್ಕೆ ಮಣಿಯಲೇ ಬೇಕಲ್ಲ...ಹಾಗೆ ಒಪ್ಪಿದೆ!!. ಜೊತೆಗೆ ನನ್ನ ಬಗ್ಗೆ ಬರಹವಂತೆ.. ಪುಸ್ತಕವಂತೆ. ನನ್ನ ಬಗ್ಗೆ ನಾನೇ ಬರೆಯಬೇಕಂತೆ...ಚಿತ್ರ ಬಿಡಿಸು. ಏನಾದರೂ ಹೊಲ ಎಂದರೆ ಎರಡೂ ಮಾಡಿಯೇನು....ಸೇವೆಯಲ್ಲಿಯೇ ದಿನ ಕಳೆ ಎಂದರೆ ಅದೂ ಅಷ್ಟ ಇಲ್ಲ. ಆದರೆ ಈ ಬರಹ.....ಏನೋ ಅನಿಸಿದ್ದನ್ನು ಹೇಳುತ್ತಾ ಹೋಗುತ್ತೇನೆ ಅಂದೆ. ಹಾಗೇ...ಅನಿಸಿದ್ದನ್ನು ಹೇಳಿದ್ದೇನೆ... ನನ್ನನ್ನು ಈ ೮೦ ವರ್ಷವೇ ಸಹಿಸಿಕೊಂಡಿದ್ದೀರಿ.. ಮತ್ತೆ ಇದನ್ನು ಸಹಿಸಿಕೊಳ್ಳಲಾರಿರಾ.... ಇದೋ ನನ್ನ ಕತೆ.... ನಿಮ್ಮ ಪ್ರೀತಿಯ ಗೌರಿ ಪೈ ಕತೆ.. ನಿಮ್ಮ ಮುಂದೆ



ನಾನು....ನಿಮ್ಮ ಪ್ರೀತಿಯ ಗೌರಿ ಪೈ...

✍ ಡಾ. ಪಿ. ಗೌರಿ ಪೈ

[illegible] ಹೊರತಾಗಿಲ್ಲ ಎಂಬುದು ವಾಸ್ತವ

ಮನೆ ತುಂಬಾ ಮಕ್ಕಳಿದ್ದ ನನ್ನ ಬಾಲ್ಯ

[illegible]

ನನ್ನಮ್ಮ ನನ್ನನ್ನು ಈ ಧರೆಗೆ ತಂದ ದಿನವಾಗಿ ದಾಖಲಾಯ್ತು!. ಹುಟ್ಟುವಾಗ ಅದೇನೋ ಹತ್ತು ಪೌಂಡ್‌ನಷ್ಟು ಭಾರವಿದ್ದೆನಂತೆ...ಹಾಗೆಂದು ಅಮ್ಮನೇ ಹೇಳಿದ ನೆನಪು.



ಅಂತೂ ಸುಬ್ಬಾಯ, ಸುಧಾಕರರೊಂದಿಗೆ ಗೌರಿ ನಾಮಾಂಕಿತೆಯಾದ ನಾನು ಬಾಲ್ಯವನ್ನು ಆರಂಭಿಸಿದೆ!. ಸುಧಾಕರ ನಮ್ಮಿಬ್ಬರಿಗಿಂತ ದಿನಗಳ ಲೆಕ್ಕದಲ್ಲಿ ಚಿಕ್ಕವನಾದರೂ, ಆತನಿಗೆ ಆಗಿನ ಶಾಲೆಯ ಅಧ್ಯಾಪಕರು ತಮ್ಮ 'ಸ್ವಂತ ಅಧಿಕಾರ'ದಿಂದ ಡಬಲ್ ಪ್ರಮೋಶನ್ ಕೊಟ್ಟು ನಮಗಿಂತ ಒಂದು ತರಗತಿ ಮುಂದಿನ ಬೆಂಚಿನಲ್ಲಿ ಕುಳ್ಳಿರಿಸಿ ಬಿಟ್ಟರು.

ಮನೆ ತುಂಬಾ ಮಕ್ಕಳಿರಲವ್ವ ಎಂಬುದಕ್ಕೆ ಅನ್ವರ್ಥವಾಗಿ ಹುಟ್ಟಿದ ಒಂಭತ್ತು ಮಕ್ಕಳಲ್ಲಿ, ಕೊನೆಯ ಮಗು ನಾನಾದ ಕಾರಣ, ಸಹಜವಾಗಿಯೇ ನಾನೆಂದರೆ ಎಲ್ಲರಿಗೂ ಅಚ್ಚು ಮೆಚ್ಚಾಗಿದ್ದೆ. ಶಾರದಕ್ಕ, ಅಣ್ಣ ಬಿ ಸಿ ಪೈ, ಅನುಸೂಯಕ್ಕ (ಈಕೆಯನ್ನು ಎಲ್ಲರೂ ಅಕ್ಕ ಎಂದೇ ಕರೆಯುವುದು), ವಿಠಲ(ವಿಠ), ವೆಂಕಟೇಶ (ಅಪ್ಪು), ನರಸಿಂಹ ಮತ್ತು ತಾರಾ, ಸರೋಜಿನಿ(ಬೇಬಿ) ಹಾಗೂ ಕೊನೆಯವಳು ನಾನು ಗೌರಿ!. ಇಲ್ಲಿ ಅಕ್ಕ ತಂಗಿ ಅಣ್ಣ ತಮ್ಮ ಎಂಬ ಸಹೋದರಿಕೆ ಮತ್ತು ಭಾವಕ್ಕಿಂತಲೂ ಮಿಗಿಲಾಗಿ, ಒಂದು ರೀತಿಯ ತಂದೆ-ಮಕ್ಕಳ ಬಂಧನದಂತೆ ನಾವೆಲ್ಲರೂ ಸಹೋದರ ಸಹೋದರಿಯರು ಬೆಳೆದುಬಂದೆವು ಮತ್ತು ಆ ಬಾಲ್ಯವಿನ್ನೂ, ಈಗಲೂ ನನಗೆ ಅಕ್ಕರೆಯ ಧಾರೆಯ ಹಸಿರು ನೆನಪಾಗಿ ಪುಳಕಕ್ಕೆ ಕಾರಣವಾಗುತ್ತದೆ.

ನನ್ನ ಶಾಲಾ ಜೀವನದ್ದೇ ಒಂದು ರೋಚಕ ಕಥೆ. ಮೊದ ಮೊದಲು ನಾನೂ ಶಾಲೆಗೆ ಹೋಗಲು ಒಪ್ಪುತ್ತಲೇ ಇರಲಿಲ್ಲ. ತುಂಬಾ ಹಟ ಮಾಡುತ್ತಿದ್ದೆನಂತೆ. ನಮ್ಮನೆಯಲ್ಲಿ ಆಗ ಒಂದು ಎತ್ತಿನ ಗಾಡಿ ಇತ್ತಂತೆ. ಅದನ್ನೋಡಿಸಲು ಒಬ್ಬ 'ಚಾಲಕ' ಇದ್ದ. ಅಹಮದ್ ಕುಂಞ ಎಂಬುದು ಆತನ ಹೆಸರಾಗಿದ್ದು, ಆತ ಯಾವಾಗಲೂ ನನ್ನನ್ನು ಹೆಗಲ ಮೇಲೆ ಕೂರಿಸಿ ಶಾಲೆಗೆ ಕರೆದೊಯ್ಯುತ್ತಿದ್ದ. ಆತ ಕೇವಲ ಎತ್ತಿನ ಗಾಡಿ ಓಡಿಸುವವನಾಗಿರದೇ, ನಮ್ಮನೆಯ ಒಂದು ಸದಸ್ಯನಂತೆಯೂ ಇದ್ದನು. ನಮ್ಮೆಲ್ಲರಿಗೂ ಅಚ್ಚು ಮೆಚ್ಚಿನವನಾಗಿದ್ದನು. ಆತನ ಹೆಗಲ ಮೇಲೇರಿ ಶಾಲೆಗೆ ಹೋಗಲು ನಾನೂ ಖುಷಿಯಿಂದ ಕಾಯುತ್ತಿದ್ದೆನು. ನೆನೆಸಿಕೊಂಡಾಗೆಲ್ಲಾ ಇಂದೂ ಆ ಅಹಮದ್ ನನ್ನ ಮೊದಲ ಹೀರೋ ಆಗಿಯೇ ಕಣ್ಣೆದುರು ಬರುತ್ತಾನೆ. ಅಂತೂ ಶಾಲೆಗೆ ನನ್ನನ್ನು ಕಳುಹಿಸುವ ಸಾಹಸದಲ್ಲಿ ನನ್ನ ತಾಯಿ ತಂದೆ ಸಫಲರಾಗುತ್ತಿದ್ದರಂತೆ. ನಾನೂ ಶಾಲೆಗೆ ಹಿಗ್ಗಿಕೊಂಡೆ. ಕಲಿಕೆಯಲ್ಲೂ ನಾನು ಸದಾ ಮುಂದಿದ್ದೆ. ಒಂದರ್ಥದಲ್ಲಿ ಚೂಟಿಯಾಗಿಯೂ ಇದ್ದೆ.



ಬದಲಾವಣೆಗೆ ನಾಂದಿ ಹಾಡಿತೋ ಅನಿಸುತ್ತದೆ.



ಶಾಲಾ ಜೀವನ

ದರ್ಬೆಯ ಲಿಟ್ಲ್ ಫ್ಲವರ್ ಪ್ರಾಥಮಿಕ ಶಾಲೆಯಲ್ಲಿ ನನ್ನದು ಒಂದರಿಂದ ಐದನೆಯ ತರಗತಿಯವರೆಗಿನ ವಿದ್ಯಾಭ್ಯಾಸ ಆದರೆ, ಪುತ್ತೂರು ಕೊಂಬೆಟ್ಟು ಬೋರ್ಡ್ ಹೈಸ್ಕೂಲಿನಲ್ಲಿ ಹತ್ತನೆಯ ತರಗತಿ ಮುಗಿಸಿದೆ. 1954ರಲ್ಲಿ ಹತ್ತನೆಯ ತರಗತಿಯಲ್ಲಿ ನಾನು ಮೂರನೇ ರ್‍ಯಾಂಕ್ ಪಡೆದು ಎಲ್ಲರ ಅಚ್ಚು ಮೆಚ್ಚಿನ ವಿದ್ಯಾರ್ಥಿನಿಯಾಗಿದ್ದೆ.

ಶಾಲೆಗೆ ಹೋಗುವಾಗ ನಾನು, ನನ್ನ ಅಕ್ಕ ಸರೋಜಿನಿ (ಜೇಜಿ) ಅಕ್ಕನ ಮಗಳು ಮೀರಾ ಬೋರ್ಡ್ ಹೈಸ್ಕೂಲ್‌ಗೆ ಒಟ್ಟಿಗೆ ಹೋಗುತ್ತಿದ್ದೆವು. ಮಧ್ಯಾಹ್ನದ ಊಟವನ್ನು ನಾರಾಯಣ ಮನೆಯಿಂದ ತರುತ್ತಿದ್ದ. ಐದಾರು ಮಂದಿ ಒಂದೇ ಮನೆಯವರಿದ್ದ ಕಾರಣ ಎಲ್ಲರೂ ಒಟ್ಟಿಗೆ ಕೂತು ಪಾಲುಮಾಡಿ ಊಟ ಮಾಡುತ್ತಿದ್ದೆವು.ಊಟ ಬಡಿಸುವ ಜವಾಬ್ದಾರಿ ಹಿರಿಯಕ್ಕನಾಗಿದ್ದ ಮೀರಕ್ಕಳದ್ದು. ಒಂದು ಪದಾರ್ಥ ಮುಗಿಸಿ ಅನ್ನ ಬಡಿಸಬೇಕಾದಲ್ಲಿ ನಾವು ಪದಾರ್ಥ ಮುಗಿಸುತ್ತಿದ್ದೆವು. ಮೀರಾ ಬಡಿಸುತ್ತಾ ಬಡಿಸುತ್ತಾ ಕೊನೆಗೆ ತನಗೆ ಏನೂ ಇಲ್ಲದಾದಾಗಲೂ ಬೇಸರಿಸದೆ, ಇದ್ದರೆ ಇದ್ದಷ್ಟು, ಇಲ್ಲವಾದರೆ ನೀರು ಕುಡಿದು ಸುಮ್ಮನಾಗುತ್ತಿದ್ದಳು.

ಅಮ್ಮ-ಅಪ್ಪ ಎಂಬ ಆದರ್ಶ ಮೂರ್ತಿಗಳು

ಅಪ್ಪ ಅಮ್ಮನ ಬಗ್ಗೆ ಹೇಳ ಹೊರಟರೆ ಅದೂ ಒಂದು ಸಾಧನೆ, ಸೋಲು, ಗೆಲುವಿನ ಕಥಾನಕದಂತೆ ಭಾಸವಾದೀತು.

ನಾನು ಹುಟ್ಟುವ ಮೊದಲು ನನ್ನ ಅಜ್ಜಿ ಪಾಣೆಮಂಗಳೂರಿನಿಂದ ತನ್ನ ಮಗ ಗೋಪಾಲ ಪೈ ಮತ್ತು ಮಗಳೊಟ್ಟಿಗೆ ಬಂದು ಪುತ್ತೂರಲ್ಲಿ ನೆಲೆಯೂರಿದರಂತೆ. ಗೋಪಾಲ ಪೈ ತನ್ನ ಎಳೆಪ್ರಾಯದಿಂದಲೇ ಜನಾರ್ದನ ಭಟ್ಟರ ಅಂಗಡಿಯಲ್ಲಿ ತಿಂಗಳಿಗೆ 5 ರೂಪಾಯಿಯಂತೆ ಸಂಬಳಕ್ಕಿದ್ದು ಜೀವನ ಪ್ರಾರಂಭಿಸಿದರು. ಅದು ಕೇವಲ ಕಷ್ಟ ಕಾರ್ಪಣ್ಯಗಳೇ ಇದ್ದ ದಿನಗಳು ಎಂದು ಆಗಾಗ ಅವರು ಹೇಳುತ್ತಿದ್ದುದನ್ನು ಕೇಳಿದ್ದೆ. ತಂಗಿಯನ್ನು ಬಂಟ್ವಾಳದ ಕಾಮತರ ಕುಟುಂಬದಲ್ಲಿ ಮದುವೆ ಮಾಡಿ ಕೊಟ್ಟ ಗೋಪಾಲ ಪೈಗಳೂ ನಂತರ ಕುಡ್ವ ಗಿರಿಜಾ ಶೆಣೈ ಎಂಬುವವರನ್ನು ವಿವಾಹವಾಗಿ ತಮ್ಮ ಸಂಸಾರ ಕಟ್ಟಿಕೊಂಡಾಗ, ಗೋಪಾಲ ಪೈ - ಗಿರಿಜಾ ಪೈ ದಂಪತಿಗಳ ಮಗಳಾಗುವ ಅದೃಷ್ಟ ನನ್ನದಾಯಿತು. ಇದು ನನ್ನ ತಾಯಿ ತಂದೆಯರ ಬಗ್ಗೆ ನನಗೆ ತಿಳಿದಿರುವ ಮತ್ತು ಈ ಕ್ಷಣಕ್ಕೆ ನೆನಪಿಸಿಕೊಂಡು ದಾಖಲಿಸಬಹುದಾದ ನೆನಪುಗಳು.

ನಮ್ಮದು ತುಂಬು ಸಂಸಾರ. ನಾವು 4 ಗಂಡು ಮತ್ತು 5 ಹೆಣ್ಣು ಮಕ್ಕಳಿದ್ದ ದೊಡ್ಡ



ಹೆಮ್ಮೆಯ ವಿಷಯವೇ ಹೌದು.



ನನ್ನ ಕನಸಿನ 'ಎಂಡಿ' ಗೆ ಸೇರಿದ ಐದನೇ ದಿನ. ಅಚಾನಕ್ಕಾಗಿ ಬಂದ ಆ ಕರೆ. ನನಗೊಮ್ಮೆ ದಿಗಿಲು ಹುಟ್ಟಿಸಿತು. ಅಮ್ಮನಿಗೆ ಕೆಮ್ಮು ಮತ್ತು ಉಸಿರಾಟದ ತೊಂದರೆ. ಬೇಗ ಬಾ ಎಂಬ ಕರೆಯಂತೆ ಬಂದು ನೋಡಿದರೆ. ಥೈರಾಯ್ಡ್ ಗ್ರಂಥಿ ಹುತ್ತದಂತೆ ಬೆಳೆದಿತ್ತು!. ಅಮ್ಮ ಉಸಿರಾಡಲೂ ಕಷ್ಟ ಪಡುತ್ತಿದ್ದಳು. ಮಂಗಳೂರು ಕೆಎಂಸಿಯಲ್ಲಿ ನನಗೆ ಕಲಿಸಿದ ಗುರುಗಳೇ. ಅಮ್ಮನನ್ನು ಸೋಲಿಸಲೆಂದೇ ಬಂದಿದ್ದ ಥೈರಾಯ್ಡ್ ಕ್ಯಾನ್ಸರ್‌ಗೆ ಶುಶ್ರೂಷೆ ಆರಂಭಿಸಿದರು. ಕೇವಲ 32-33 ಕೆಜಿ ತೂಕವಿದ್ದ ಅಮ್ಮನಿಗೆ ಆ ಹಂತದಲ್ಲಿ ಆಪರೇಶನ್ ಮಾಡಬೇಕೋ ಬೇಡವೋ ಎಂಬ ಗೊಂದಲ ಇದ್ದಾಗ, ಡಾ.ಕೋಶಿ ನನ್ನ ನೆರವಿಗೆ ಬಂದು, ಧೈರ್ಯ ತುಂಬಿದರು. ಇವರನ್ನು ನಾನೆಂದಿಗೂ ಮರೆಯಲಿಕ್ಕಿಲ್ಲ. ಸ್ವತಃ ನಾನೋರ್ವ ವೈದ್ಯೆಯಾಗಿದ್ದೂ, ಅಮ್ಮನಿಗೇ ಬಂದ ಈ ಕಾಯಿಲೆ ನನಗೆ ಸವಾಲಾದದ್ದೂ, ಬಹುಶ ಮುಂದಿನ ದಿನಗಳಲ್ಲಿ ನಾನು ಪುತ್ತೂರಲ್ಲಿ ಆಕೆಯದ್ದೇ ಹೆಸರಿನಲ್ಲಿ ಆಸ್ಪತ್ರೆ ಆರಂಭಿಸಲು ಕಾರಣವಾಯ್ತೇನೋ ಎಂದು ಈಗಲೂ ನನಗನಿಸುತ್ತದೆ-ಅದು ಬೇರೆ ಮಾತು.


ಅಂತೂ ಅಮ್ಮನಿಗೆ ಆಪರೇಶನ್ ಆಯ್ತು. ಆಪರೇಶನ್ ಒಂದು ಮಟ್ಟಕ್ಕೆ ಯಶಸ್ವಿ ಆಯ್ತು ಆದರೆ ಹರಡುತ್ತಿದ್ದ ಕ್ಯಾನ್ಸರ್ ಯಾರ ನಿಯಂತ್ರಣಕ್ಕೂ ಸಿಗದೇ ಬೆಳೆಯುತ್ತಲೇ ಹೋಯ್ತು.

ನಾನೂ ನನ್ನಣ್ಣ ವಿಠಲ ಪೈ, ಅಮ್ಮನನ್ನು ಮದ್ರಾಸ್ ಅಡ್ಯಾರ್ ಕ್ಯಾನ್ಸರ್ ಇನ್ಸ್ಟಿಟ್ಯೂಟ್, ಮುಂಬಯಿ ಟಾಟಾ ಆಸ್ಪತ್ರೆಗೂ ಕರೆದುಕೊಂಡು ಹೋದೆವು. ನನ್ನ ದೊಡ್ಡ ಅಕ್ಕನ ಮಗಳು ಡಾ.ಮೀರಾ ಪ್ರಭು, ಆಗ ಇಂಗ್ಲೆಂಡ್‌ನಲ್ಲಿದ್ದರು. ಅಲ್ಲಿಂದಲೇ ಅತ್ಯುತ್ತಮ ಗುಣಮಟ್ಟದ ಕೃತಕ ಉಸಿರಾಟದ ನಳಿಕೆ ಕಳಿಸುತ್ತಿದ್ದಳು. ಅಮ್ಮನಿಗೆ ಕೊನೆ ಕೊನೆಗೆ ಶಾಶ್ವತವಾದ ಕೃತಕ ಉಸಿರಾಟವೇ ಬದುಕಾಯ್ತು. ಅಂತೂ ಈ ಎಲ್ಲಾ ಜಂಜಾಟಗಳೊಂದಿಗೆ ನಿರಂತರ ಐದು ತಿಂಗಳ ಕಾಲ ಸೆಣಸಾಡಿದ ಅಮ್ಮ, ಕೊನೆಗೂ ವಿಧಿಯನ್ನು ಗೆಲ್ಲಲಾಗದೇ, ತಮ್ಮ ಬದುಕು ಮುಗಿಸಿ ಹೊರಟೇ ಹೋದಾಗ, ನಾನೂ ನನ್ನ ಎಂಡಿ ಮುಗಿಸುವ ಕನಸಿಗೆ ತಿಲಾಂಜಲಿ ನೀಡೋಣ ಎಂದೇ ಭಾವಿಸಿದೆ... ಆದರೆ ಹಾಗಾಗಲಿಲ್ಲ!.

ನನ್ನ ನಿರಂತರ ಕಲಿಕೆಯ ದಾಹ ಮತ್ತು ನಾನಿದ್ದ ಪರಿಸ್ಥಿತಿಯನ್ನು ಸಂಪೂರ್ಣ ಅರಿತಿದ್ದ, ನಮ್ಮ ಪ್ರಿನ್ಸಿಪಾಲ್ ಡಾ. ಜಾಲಿಯವರನ್ನು ನೆನಪಿಸಿಕೊಳ್ಳಲೇ ಬೇಕು. ಅವರು ನನ್ನಮ್ಮ ತೀರಿಕೊಂಡ ಮರುದಿನವೇ ಕಾಲೇಜಿಗೆ ಹಾಜರಾದ ನನಗೆ ಅಷ್ಟೂ ತಿಂಗಳ ಹಾಜರಾತಿ ನೀಡಿದ್ದಲ್ಲದೇ, ನನ್ನ ಅಮ್ಮನನ್ನೂ ನೋಡಿಕೊಳ್ಳಲು ಸಹಕಾರ ನೀಡಿದ್ದರು. ಅವರ ಋಣ ಸದಾ ನನ್ನ ಮೇಲಿರುತ್ತದೆ ಎಂಬ ಧನ್ಯತಾ ಭಾವ ನನ್ನದು.

ಇನ್ನು ನನ್ನಪ್ಪ. ಅಪ್ಪನೂ ನನಗೊಂದು ಆದರ್ಶವೇ. ಕಷ್ಟಕಾಲದ ಬಾಲ್ಯವನ್ನು ಮೆಟ್ಟಿ





ಸೇವೆ ಮಾಡುವ ನನ್ನ ಆಶಾಗೋಪುರ ಕುಸಿದು ಹೋಗುತ್ತದೆ!! ಹಾಗೆ ವಿದ್ಯಾಭ್ಯಾಸ ಮುಂದುವರೆಸಿದೆ. ಮೆಡಿಕಲ್ ಸೀಟು ಸಿಗಲಿಲ್ಲ. ಮೆಡಿಕಲ್ ಮಾಡದೇ ಬಿಡುವುದಿಲ್ಲ ಎಂಬ ನನ್ನ ಹಟ (ಹಾಗೆ ನಾನೂ ಹಠಮಾರಿಯೇ ಬಿಡಿ) ನೋಡಿ ನನ್ನ ಪಿತ್ರಲಿಣ್ಣ ನನಗೆ ಮುಂದೆ ಕಲಿಯಲು ಸಹಾಯ ಮಾಡಿದರು. ಅವರು ನಮ್ಮ ಕುಟುಂಬಕ್ಕೆ ಆತ್ಮೀಯರಾಗಿದ್ದ ಡಾ। ಶಿವರಾಮ ಕಾರಂತ (ಕಾರಂತರು ಹಾಗೂ ಲೀಲಮ್ಮನವರು ನಮಗೆ ತುಂಬಾ ಆತ್ಮೀಯರು ಆಗಿದ್ದರು) ರು ಕೂಡಿ ಮಣಿಪಾಲಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಡಾ। ಟಿ.ಎಮ್.ಎ. ಪೈಯವರನ್ನು ಭೇಟಿಯಾಗಿ ಮಾತುಕತೆ ನಡೆಸಿ ನನಗೆ ಕೆ.ಎಮ್.ಸಿ.ಯಲ್ಲಿ ಅಂದಿನ ಮಟ್ಟಿಗೆ ಬಹು ದೊಡ್ಡ ಮೊತ್ತವಾಗಿದ್ದ ರೂ.3000ವನ್ನು ಶುಲ್ಕವಾಗಿ ಪಾವತಿಸಿ ಸೀಟು ಕೊಡಿಸಿದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಇದಕ್ಕೆ ಸಹಕರಿಸಿದ ನನ್ನ ಅಣ್ಣಂದಿರೆಲ್ಲರಿಗೂ ನನ್ನ ವೈದ್ಯಕೀಯ ಜೀವನದ ಯಶಸ್ಸು ಸಲ್ಲಬೇಕು. ಆಗ ಅಲ್ಲಿಯೇ ಹಾಸ್ಟೆಲ್‌ನಲ್ಲಿ ಉಳಿದು ಕಲಿತೆ. ಆಗ ಹಾಸ್ಟೆಲ್ ಖರ್ಚು ತಿಂಗಳಿಗೆ ರೂ.90. ನನ್ನ ಅಣ್ಣಂದಿರೇ ಇದನ್ನು ಅಂಗಡಿಯಿಂದ ಕೊಡುತ್ತಿದ್ದರು. ಅಪರೂಪಕ್ಕೊಮ್ಮೆ ಅಮ್ಮನ ಪಾಕೆಟ್‌ನಿಂದ ಕನ್ನ ಹಾಕಿಯೂ ರೂ.50/-, 100/- ತೆಗೆದುಕೊಳ್ಳುತ್ತಿದ್ದುದೂ ಇತ್ತು!!. ಇದನ್ನು ನೆನೆಸಿಕೊಂಡಾಗೆಲ್ಲಾ ಈಗಲೂ ಒಮ್ಮೊಮ್ಮೆ ಆ ದಿನಗಳು ಅದೆಷ್ಟು ರೋಚಕ ಅನಿಸುತ್ತದೆ.

ಅಂತೂ ಪ್ರಥಮ ಎಮ್.ಬಿ.ಬಿ.ಎಸ್.ನ್ನು ಮೂರನೇ ರ್‍ಯಾಂಕ್‌ನೊಂದಿಗೆ ಮುಗಿಸಿದೆ. ಎರಡನೆಯ ವರ್ಷ ಅದು ಮಂಗಳೂರಿನಲ್ಲಿ ಮುಂದುವರಿಯಿತು. 1964ರಲ್ಲಿ ಕೊನೆಗೂ ಎಂಬಿಬಿಎಸ್ ಮುಗಿಸಿ, ಅವರ್ಣನೀಯ ಆನಂದದೊಂದಿಗೆ ನನ್ನ ಕುಟುಂಬಕ್ಕೂ, ಅಣ್ಣಂದಿರು ಮಾಡಿದ್ದ ತ್ಯಾಗಕ್ಕೂ ಒಂದು ಸಾರ್ಥಕ್ಯ ಒದಗಿಸಿದೆ. ಎಂಡಿ ಆದ ನಂತರ ಮಣಿಪಾಲ್ ಕಾಲೇಜ್ ಮತ್ತು ಹಾಸ್ಪಿಟಲ್ ಡೈರೆಕ್ಟರ್ ಆದ ಶ್ರೀ ರಮೇಶ್ ಪೈಗಳು ನನಗೆ ಗೈನಕಾಲಜಿ ಯುನಿಟ್ ಕೊಡುತ್ತೇನೆ ನಮ್ಮಲ್ಲಿಯೇ ಇರು ಎಂದರು.

ಆದರೆ ...... ನನ್ನ ಕನಸು ಮತ್ತು ಉದ್ದೇಶ, ಇಟ್ಟುಕೊಂಡಿದ್ದ ಗುರಿ ಬೇರೆಯೇ ಇತ್ತು!. ಹಾಗಾಗಿ ನಾನು ರಮೇಶ್ ಪೈ ಅವರ ಉದಾರತೆಯನ್ನು ಒಪ್ಪಲಾಗದ ಅಸಹಾಯಕತೆ ಇತ್ತು!. ಇದನ್ನೇ ಅವರಿಗೆ ನಯವಾಗಿ ತಿಳಿಸಿದೆ. ಅಂತೂ ಅಲ್ಲಿ ಒಂದೂವರೆ ವರ್ಷ ಕೆಲಸ ಮಾಡಿ ಪುತ್ತೂರಿಗೆ ಬಂದು ನನ್ನ ವೈದ್ಯಕೀಯ ವೃತ್ತಿ ಆರಂಭಿಸಿದೆ. ನನ್ನ ಕನಸು, ಗುರಿ ಹಾಗೂ ಸೇವಾ ಮನೋಭಾವಕ್ಕೆ ವೇದಿಕೆಯಾಗಿ, ನನ್ನಮ್ಮನ ಹೆಸರಲ್ಲೇ ಗಿರಿಜಾ ಕ್ಲಿನಿಕ್ ಆರಂಭಿಸಿದೆ. 1969ರ ನವೆಂಬರ್ ತಿಂಗಳ ಅಂತ್ಯದಲ್ಲಿಈ ಕ್ಲಿನಿಕ್‌ನ್ನು ಡಾ। ಟಿ.ಎಮ್.ಎ. ಪೈ ಅವರೇ ಉದ್ಘಾಟಿಸಿದರು. ನಾನು ಮಣಿಪಾಲದ ಕೆ.ಎಮ್.ಸಿ.ಯಲ್ಲಿ ಓದಿ ನನ್ನ ಸ್ವಂತ ಊರಿಗೆ ಬಂದು ನಿಂತು ಹುಟ್ಟೂರು





ಪಂಡಿತ ನಡೆಸಿಕೊಂಡು ಹೋಗುತ್ತಾನೆ ಅಂತ ಆಶೆಪಟ್ಟದ್ದೆ. ಸುವರ್ಣ ಮಹೋತ್ಸವ ನಡೆಸುವ ಆಲೋಚನೆ ಎಲ್ಲಾ ಹಾಕಿದ್ದೆ. ಆದರೆ ದೇವರ ಮನಸ್ಸಲ್ಲಿ ಬೇರೆಯೇ ಇತ್ತು ಅನಿಸುತ್ತದೆ. ಈಗಲೂ ನನ್ನ ಅಂತರಾಳದ ಎಲ್ಲಿಯೋ ಒಂದು ಮೂಲೆಯಲ್ಲಿ ಸಣ್ಣ ನೋವು ಇದೆ. ಆಗಾಗ ಅದು ಧುತ್ತೆಂದು ಕಾಣಿಸಿಕೊಳ್ಳುತ್ತದೆ.

ಗಿರಿಜಾ ಕ್ಲಿನಿಕ್‌ನ ನನ್ನ ವೃತ್ತಿ ಜೀವನದಲ್ಲಿ ಆಗಾಗ ಬಂದೆರಗಿದ ದುಃಖವನ್ನೆಲ್ಲಾ ಅದೆಷ್ಟೋ ಸಂತಸದ ಸಂದರ್ಭಗಳು ಮರೆಸಿವೆ. ರೋಗಿ ಗುಣವಾಗಿ ಮನೆಗೆ ಹೋಗುವಾಗ ಆತ/ಆಕೆಯ ಮುಖದಲ್ಲಿ ಕಾಣುತ್ತಿದ್ದ ಸಂತಸ. ಹೆರಿಗೆಯಾದ ತಾಯಿ, ಮಗುವನ್ನು ನೋಡಿ ಸಂಭ್ರಮಿಸುವ ಗಳಿಗೆ, ಆಪರೇಶನ್ ಯಶಸ್ವಿಯಾಗಿ ರೋಗಿ ಹೊಸ ಹುಟ್ಟು ಪಡೆವಂತೆ ಸಂಭ್ರಮಿಸಿದ ಹೊತ್ತು, ಒಮ್ಮೆ ರೋಗಿಯ ವೈದ್ಯಡಪಿ ಆತ್ಮವಿಶ್ವಾಸ ಹೆಚ್ಚಿಸಿದಾಗಿನ ಸಂದರ್ಭದ ಆತ/ಆಕೆಯ ಅಮ್ಮನನ್ನು ನೋಡುವಂತ ನೋಟ, ರೋಗಿಗಳ ಸಂಬಂಧಿಕರ ನಿರಾಳ ಮನೋಭಾವದ ಕೃತಜ್ಞತಾ ಭಾವ.. ಹೀಗೆ ವೈದ್ಯಕೀಯ ವೃತ್ತಿ ಪ್ರತೀ ಹಂತದ ಮಾನವೀಯ ಸೇವೆಯ ಸಾರ್ಥಕ್ಯಕ್ಕೆ ಕಾರಣವಾಗುವ ದೇವ ಸೇವೆ ಎಂದೇ ಸಂತಸ ಕಂಡಿದ್ದೇನೆ!!- ಅದನ್ನೇ ಬದುಕಾಗಿ ಹೊಟ್ಟದ್ದೇನೆ. ಈಗಲೂ ಎಲ್ಲಿಯಾದರೂ ಮದುವೆ, ಮುಂಜಿ ಅಥವಾ ಯಾವುದೇ ಸಮಾರಂಭಗಳಿಗೆ ಹೋದಾಗ ಅನೇಕರು ಬಂದು ಡಾಕ್ಟರ್ ಇದು ನಿಮ್ಮ ಮಗು, ಈಗ ಡಾಕ್ಟರ್ ಆಗಿ, ಇಂಜಿನಿಯರ್, ಸೈಂಟಿಸ್ಟ್ ಆಗಿ ಡೆಲ್ಲಿ, ಮುಂಬಯಿ, ಅಮೇರಿಕಾದಲ್ಲಿ ಇದ್ದಾನೆ ಅಥವಾ ಇದ್ದಾಳೆ ಎನ್ನುವಾಗ ಸಿಗುವ ಆನಂದ ವರ್ಣಿಸಲು ನಾನು ಅಶಕ್ತೆ. ನನ್ನ ಆಸ್ಪತ್ರೆಯಲ್ಲಿ ಹುಟ್ಟಿದ ಮಕ್ಕಳು ಒಳ್ಳೇ ಹುದ್ದೆಯಲ್ಲಿದ್ದಾರೆ, ಆದರ್ಶ ಜೀವನ ನಡೆಸುತ್ತಿದ್ದಾರೆ ಎನ್ನುವಾಗ ಯಾರಿಗೆ ಸಂತೋಷ ಆಗುವುದಿಲ್ಲ? ಕೆಲವು ಸಲ ಆ ರೋಗಿಗಳ ಪ್ರೀತಿ, ಅಭಿಮಾನ ನೋಡುವಾಗ ಹೃದಯ ತುಂಬಿ ಬರುತ್ತದೆ.ಆ ಕಾಲದಲ್ಲಿ ಡಾಕ್ಟರ್ ಮತ್ತು ಪೇಶಂಟ್‌ಗಳ ಸಂಬಂಧ ಒಂದು ತಾಯಿ ಮಗುವಿನ ಸಂಬಂಧವಂತಿತ್ತು.ಅಷ್ಟೊಂದು ಆತ್ಮೀಯತೆ ನಮ್ಮಲ್ಲಿರುತ್ತಿತ್ತು.

ಕೆಲವು ಸಲ ಆಸ್ಪತ್ರೆಯಲ್ಲಿ ಅನಿವಾರ್ಯವಾಗಿ ರೋಗಿಗಳೊಂದಿಗೇ ಇರಬೇಕಾದಲ್ಲಿ ನಾನು ಮನೆಗೂ ಹೋಗುತ್ತಿರಲಿಲ್ಲ. ಒಟ್ಟಾರೆ ಹೇಳಬೇಕೆಂದರೆ 1970 ರಿಂದ 2000 ತನಕ ನನ್ನ ಮೇಲ್ವಿಚಾರಣೆಯಲ್ಲೇ ಗಿರಿಜಾ ಕ್ಲಿನಿಕ್‌ನ್ನು ನಡೆಸಿದ್ದೆ. ಪ್ರಾರಂಭದಲ್ಲಿ ಪುತ್ತೂರಲ್ಲಿ ತಜ್ಞ ವೈದ್ಯರು ತುಂಬಾ ಕಡಿಮೆ ಇದ್ದರು. ಇರಲೇ ಇಲ್ಲ ಎಂದರೂ ತಪ್ಪಾಗದೇನೋ. ನಾನು ಒ.ಬಿ.ಜಿ ಜೊತೆಗೆ ಜನರಲ್ ಪ್ರಾಕ್ಟೀಸ್ ಕೂಡ ಮಾಡುತ್ತಿದ್ದೆ. ಸಣ್ಣ ಮಕ್ಕಳು ಕೂಡಾ ತುಂಬಾ ಬರುತ್ತಿದ್ದರು.ತುಂಬಾ ಗಂಭೀರ ರೋಗಿಗಳನ್ನು ಮಂಗಳೂರಿಗೆ ಕಳುಹಿಸಿ, ವೈಯಕ್ತಿಕವಾಗಿ



ಮಾಡಿಕೊಟ್ಟಿದ್ದೇವೆ. ಅವರ ಮಕ್ಕಳನ್ನು ನಾವೇ ಒಳಗಿನಿಂದ ಆಗಿ ಅಥವಾ ಹೊರಗಿನಿಂದ ಆಗಿ ಟ್ರಾನ್ಸ್‌ಪೋರ್ಟ್ ಕೊಡುತ್ತಾ ಅಧ್ಯಯನದ ಉದ್ದೇಶದ ಎಲ್ಲರೂ ಗುಣಮುಖರಾಗುತ್ತಿದ್ದಾರೆ ಮತ್ತು ಯಾವುದೇ ಕಷ್ಟ ಯಕ್ಕೆ ನಮ್ಮನ್ನು ಬಾಧಿಸಲಿಲ್ಲ. ನಮ್ಮ ಕರ್ತವ್ಯವನ್ನು ದೇವರ ಸೇವೆ ಎಂಬಂತೆ ಭಾವಿಸಿದರೆ ನಮ್ಮನ್ನು ಯಾರೂ ಏನೂ ಮಾಡಲಾರರು ಎಂದೇ ನನ್ನ ನಂಬಿಕೆ.



ಗಿರಿಜಾ ಕ್ಲಿನಿಕ್ ಉದ್ಘಾಟನಾ ಸಮಾರಂಭದ ಕ್ಷಣಗಳು





ಗಿರಿಜಾ ಕ್ಲಿನಿಕ್‌ಗೆ ಬೆನ್ನೆಲುಬಾಗಿದ್ದವರು

ನಾನು ಗಿರಿಜಾ ಕ್ಲಿನಿಕ್ ನಡೆಸುವಾಗ ಡಾ.ಜೆ.ಸಿ.ಅಡಿಗ ಹಾಗೂ ಡಾ.ಗೋಪಾಲ್ ರಾವ್ ಮೆಡಿಕಲ್ ಕೇಸ್ ನೋಡಲು ಬರುತ್ತಿದ್ದರು. ಕಾರ್ಡಿಯಾಲಜಿಸ್ಟ್ ಡಾ.ಶ್ಯಾಮ್ ಸಹ ಗಿರಿಜಾ ಕ್ಲಿನಿಕ್‌ನಲ್ಲಿ ನಮಗೆ ಸಹಕರಿಸುತ್ತಿದ್ದು, ಮುಂದೆ ಆದರ್ಶ ಆಸ್ಪತ್ರೆ ಆಗುವವರೆಗೂ ನಮ್ಮ ಜೊತೆಗಿದ್ದರು. ಡಾ.ಎಂ ಕೆ ಪ್ರಸಾದ್ ಎಂ ಎಸ್ ಇವರು ಜನರಲ್ ಸರ್ಜನ್ ಆಗಿದ್ದು, ಅವರನ್ನು ಎಲ್ಲರೂ ಬಡವರ ಬಂಧು ಎಂದೇ ಕರೆಯುತ್ತಿದ್ದರು–ಅವರದಕ್ಕೆ ಅನ್ವರ್ಥ ಎಂಬಂತೆಯೂ, ಬಡವರ ಪರ ಕಾಳಜಿಯಿಂದ ಅತ್ಯಂತ ಕಡಿಮೆ ವೈದ್ಯಕೀಯ ಶುಲ್ಕ ಪಡೆಯುವ ಮೂಲಕ ಜನಾನುರಾಗಿಯಾಗಿದ್ದರು. ಇವರ ಹೆಚ್ಚಿನ ಜನರಲ್ ಸರ್ಜರಿಗೆ ನಾನೇ ಸಹಾಯ ಮಾಡುತ್ತಿದ್ದದ್ದು ನನಗೆ ಖುಷಿ ನೀಡಿದ ವಿಚಾರ. ಈ ಎಲ್ಲರಿಂದಲೂ ನಾನು ತುಂಬಾ ಕಲಿತಿದ್ದೇನೆ. ಡಾ.ಜೆ.ಸಿ. ಅಡಿಗರಂತೂ ಈಗಲೂ ನನ್ನ ಮೆಡಿಕಲ್ ಅಡ್ವೈಸರ್ ಆಗಿದ್ದಾರೆ. ಡಾ. ಐ. ಶ್ರೀಕಾಂತ್ ರಾವ್ (ಮಕ್ಕಳ ಸ್ಪೆಶಲಿಸ್ಟ್) ಇವರೂ ಮೊದಲು ನಮ್ಮ ಆಸ್ಪತ್ರೆಯಲ್ಲಿಯೇ ಮಕ್ಕಳನ್ನು ನೋಡುತ್ತಿದ್ದರು.ಡಾ. ಶ್ರೀಕಾಂತರು ಪುತ್ತೂರಿಗೆ ಬರುವ ಮೊದಲು ನಾನೇ ಮಕ್ಕಳ ಶುಶ್ರೂಷೆ ಮಾಡುತ್ತಿದ್ದೆ.

ಇನ್ನೋರ್ವ ಡಾಕ್ಟರ್ ಪ್ರತಿಭಾ. ಇವರು ನನಗೆ ಸ್ವಂತ ಸಹೋದರಿಯಂತೆ ಜೊತೆ ನೀಡಿ, ನನ್ನೆಲ್ಲಾ ಕಷ್ಟ ಸುಖಗಳಿಗೆ ಧ್ವನಿಯಾಗುತ್ತಿದ್ದರು. ವೈದ್ಯಕೀಯವೇ ಅಲ್ಲದೆ ನನ್ನೆಲ್ಲಾ ಆಸಕ್ತ ಕ್ಷೇತ್ರಗಳಲ್ಲಿ, ಚಟುವಟಿಕೆಗಳಲ್ಲಿ ಅನೇಕ ಸಂವತ್ಸರಗಳ ಕಾಲ ನನ್ನೊಡನಿದ್ದ ಪ್ರತಿಭಾ, ಗಿರಿಜಾ ಕ್ಲಿನಿಕ್‌ನ್ನು ನಾವು 2000ನೇ ಇಸವಿಯಲ್ಲಿ ನಿಲ್ಲಿಸುವ ತನಕವೂ ನನ್ನೊಂದಿಗಿದ್ದರು ಈ ಸಹೋದರಿಯನ್ನು ಎಷ್ಟು ಕೃತಜ್ಞತೆಯಿಂದ ಸ್ಮರಿಸಿಕೊಂಡರೂ ಕಡಿಮೆಯೇ!!



ಸೇವಾ ತತ್ಪರತೆಗೆ ಮಾರ್ಗ ತೋರಿದ ರಾಮಕೃಷ್ಣ ಆಶ್ರಮ...



ನನ್ನ ವೃತ್ತಿಪರ ಜೀವನ ಆರಂಭವಾದ ಕೆಲವೇ ಸಮಯದಲ್ಲಿ ಶ್ರೀ ರಾಮಕೃಷ್ಣ ಸೇವಾ ಸಮಾಜದ ಜೊತೆಗೊಂದು ವಿಶೇಷ ಬಾಂಧವ್ಯ ಬೆಳೆಯಿತು. ನನ್ನ ಅಕ್ಕ [illegible] ಅಲ್ಲಿ ಸ್ವಯಂಸೇವಕಿಯಾಗಿ ಕೆಲಸ ಮಾಡುತ್ತಿದ್ದರು. ಶ್ರೀ ಮಾಧವ ಶೆಟ್ಟರು ಕಾರ್ಯದರ್ಶಿಗಳಾಗಿಯೂ ಶ್ರೀ ಸಾಂಬಶಿವರಾಯರು ಅಧ್ಯಕ್ಷರಾಗಿಯೂ ಅಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೂವರೂ ನಿಸ್ವಾರ್ಥವಾಗಿ ತಮ್ಮನ್ನು ಸಂಪೂರ್ಣ ಆಶ್ರಮದ ಆದರ್ಶಕ್ಕೆ ಅರ್ಪಿಸಿಕೊಂಡವರಾಗಿದ್ದರು. ವೃತ್ತಿ ಸಂಬಂಧಿ ಅಥವಾ ಬೇರಾವುದೇ ರೀತಿಯ ಒತ್ತಡಗಳಿದ್ದರೂ, ರಾಮಕೃಷ್ಣ ಸೇವಾ ಸಮಾಜದ ವಾತಾವರಣದಲ್ಲಿ ಶಾಂತ ನೆಮ್ಮದಿ ದೊರೆಯುತ್ತಿದ್ದುದರಿಂದ, ನಾನು ನಿರಂತರವಾಗಿ ಅಲ್ಲಿಯ ಬಾಂಧವ್ಯವನ್ನು ಗಟ್ಟಿಗೊಳಿಸುತ್ತಾ ಬೆಳೆದೆ. [illegible] ಮುಂದುವರೆಯುತ್ತಾ ಶ್ರೀ ಸಾಂಬಶಿವರಾಯರು ನನ್ನ [illegible]

ಸೇವಾ ಸಮಾಜದ ಚಟುವಟಿಕೆಗಳಿಗೆ ಅಧಿಕೃತ [illegible] ಭಾಗವಾಗಿ ಒಮ್ಮೆ [illegible] '[illegible]' [illegible]. [illegible] ರಾಮಕೃಷ್ಣ ಸೇವಾ ಸಮಾಜ [illegible] ಮತ್ತು [illegible] ಅದರಲ್ಲಿ [illegible]. [illegible] ಆಶ್ರಮದ ಬಗ್ಗೆ [illegible] ಮತ್ತು ಸೇವಾ [illegible]. ನಮ್ಮ [illegible]. ಈಗ ಅಲ್ಲಿ 87 ಮಂದಿ ಮಕ್ಕಳೂ, 50 ಮಂದಿ ಮಹಿಳೆಯರೂ ಆಶ್ರಯ ಪಡೆದಿದ್ದು, ನಮ್ಮ ಅಧ್ಯಕ್ಷರಾದ [illegible] ಅವರ [illegible] ಅಧ್ಯಕ್ಷತೆಯಲ್ಲಿ [illegible] ಈ ಸೇವಾ ಕೈಂಕರ್ಯ ಮುಂದುವರಿದಿದೆ.

ಎಲ್ಲರೂ ನನ್ನನ್ನು [illegible] ಮತ್ತು ಇದು [illegible] ನನಗೂ [illegible]!! [illegible]. [illegible] ಮಾಡುವುದು ನನಗಾಗುತ್ತಿರಲಿಲ್ಲ.



ಹೀಗಿರುವವರನ್ನು ಸಹಿಸುತ್ತಲೂ ಇರದ ನನ್ನ ಸ್ವಭಾವ, ಇಂತಹವರನ್ನು ಕಂಡರೆ ಸಿಡಿದೇಳುವಂತೆ ಮಾಡುತ್ತಿತ್ತು. ನಾನೇ ನನ್ನ ನಿಯಂತ್ರಣ ಮೀರಿ ಅವರನ್ನು ಬೈಯ್ಯುವುದೇ ಶಾರ್ಟ್ ಟೆಂಪರ್ ಎಂದು ಕೊಂಡರೆ, ಆ ಬಗ್ಗೆ ನನಗೆ ನಿಜಕ್ಕೂ ಸಮಾಧಾನ ಇದೆ!!.

ಒಮ್ಮೆ ಹೀಗೇ ಆಯ್ತು. ನಮ್ಮ ಮೊದಲಿನ ಅಧ್ಯಕ್ಷರು ಡಾ। ಸದಾಶಿವರಾಯರು ಇದ್ದಾಗ ಆಶ್ರಮಕ್ಕೆ ಬೇಲಿ ರಕ್ಷಣೆ ಮಾಡಿಸಲು ತೀರ್ಮಾನಿಸಿದಾಗ ಅಧ್ಯಕ್ಷರು ಸೊಸೈಟಿಯ ಹಣ ಪೋಲು ಆಗುವುದು ಬೇಡ ಎಂದರು. ಆಗ ನಾನು ನನ್ನ ಸಹಿ ಮಾಡಿದ ಒಂದು ಖಾಲಿ ಚೆಕ್ ಅವರಿಗೆ ಕೊಟ್ಟು ರಕ್ಷಣೆ ಮೊದಲು, ಅದನ್ನು ಮುಂದುವರಿಸಿ ಎಂದೆ!!. ಅನಂತರ ಏನಾಯಿತೋ! ಒಂದು ವಾರದಲ್ಲಿ ಬೇಲಿ ಹಾಕಲು ಜನ ಬಂದಿದ್ದರು. ಇದನ್ನು ನನ್ನ ಅಹಂಕಾರ ಎಂದು ಹೇಳುತ್ತಿಲ್ಲ. ಬಹುಶ ಶಾರ್ಟ್ ಟೆಂಪರ್ ಮಾತ್ರ ಇಂತಹ ಒಳ್ಳೆಯ ನಿರ್ಧಾರಗಳಿಗೆ ದಾರಿಯಾಗುತ್ತದೋ ಏನೋ ಎಂಬುದು ಮೇಲ್ನೋಟಕ್ಕೆ ಹಿನ್ನೋದವಾಗಿ ಕಂಡರೂ, ಇದೇ ಅದೆಷ್ಟೋ ಒಳ್ಳೆಯ ಕಾರ್ಯಗಳಿಗೆ ಕಾರಣವಾಗಿದ್ದೂ ಸುಳ್ಳಲ್ಲ. ಇದನ್ನೂ ನಮ್ಮ ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಹೀಗೆ ಮಾಡಿದ್ದೆ. ಡಾ। ಸದಾಶಿವರಾಯರು ಅಸೌಖ್ಯದಿಂದ ನಿಧನರಾಗುವ ಕೆಲವೇ ದಿನ ಮುಂಚೆ ನನ್ನನ್ನು ಕರೆದು ನನ್ನ ಕೈಯನ್ನು ತನ್ನ ಕೈಯಲ್ಲಿ ಹಿಡಿದು ನನ್ನ ನಂತರ ಈ ಆಶ್ರಮದ ರಕ್ಷಣೆ ನಿಮ್ಮ ಕೈಯಲ್ಲಿ ಇದನ್ನು ಕೈ ಬಿಡಬೇಡಿ ಎಂದಿದ್ದರು. ನನ್ನ ಮೇಲೆ ಅವರಿಗೆ ತುಂಬಾ ನಂಬಿಕೆ ಇತ್ತು. ಅದರೂ ನಾವಿಬ್ಬರು ಲಘುವಾಗಿ ಜಗಳ ಆಡುತ್ತಲಿದ್ದೆವು. ಅನಂತರ ಒಬ್ಬರಿಗೊಬ್ಬರು ಹೊಗಳಿಕೊಳ್ಳುತ್ತಿದ್ದೆವು. ಒಟ್ಟಾಗಿ ಸಂತೋಷದಿಂದ ಕೆಲಸ ಮಾಡುತ್ತಿದ್ದೆವು.

ದೇವರ ದಯೆಯಿಂದ ಈಗ ಶ್ರೀ ರಾಮಕೃಷ್ಣ ಸೇವಾ ಸಮಾಜ ಬಹಳ ಚೆನ್ನಾಗಿ ನಡೆಯುತ್ತಾ ಇದೆ. ಎರಡು ಸಲ ನಾನು ರಾಜಿನಾಮೆ ಕೊಡಲು ಹೋದಾಗಲೂ ಸಮಿತಿಯವರು ಬಿಡಲಿಲ್ಲ. ಈಗಲೂ ನನ್ನಿಂದ ಆದಷ್ಟು ಸಲಹೆಗಳನ್ನು ಕೊಟ್ಟು ಅದರ ಉನ್ನತಿಗೋಸ್ಕರ ದುಡಿಯುತ್ತಾ ಇದ್ದೇನೆ. ಶ್ರೀ ರಾಮಕೃಷ್ಣ ಸೇವಾ ಸಮಾಜ, ಆನಂದಾಶ್ರಮ ಸೇವಾ ಟ್ರಸ್ಟ್ (ರಿ) ಇವೆರಡು ನನ್ನ ಕಣ್ಣುಗಳಿದ್ದಂತೆ.

ಆನಂದಾಶ್ರಮ-ನನ್ನ ಬದುಕಿನ ಸಾರ್ಥಕ್ಯ

ಸಮಾಜ ನಮಗೆ ಏನೇನನ್ನೋ ನೀಡುತ್ತದೆ. ಬದುಕು ಕಟ್ಟಿ ಕೊಟ್ಟ ಸಮಾಜಕ್ಕೆ ನಾವೇನಾದರೂ ನೀಡಬೇಡವೆ. ಕೇವಲ 'ಜೀವನ ಸಾಗಿಸುವ' ಪ್ರಕ್ರಿಯೆಯಾಗಿ ನಾವು ಪಾಲಿಗಾಗಿಯೂ ಪಾಲಿಗಾಗದೇ ಹೋಗುವುದು ನನಗಿಷ್ಟವಿಲ್ಲ. ವಿದ್ಯಾಭ್ಯಾಸದಿಂದ ಹಿಡಿದು, ಇಂದಿನ ತನಕವೂ ನನ್ನ ಮನಸ್ಸು ಸದಾ ತುಡಿಯುವುದೇ ಸೇವಾ ಮುಖಿಯಾಗಿ. ಇದಕ್ಕೆ

ನಾನು ಬೆಳೆದು ಬಂದ ವಾತಾವರಣ, ಶಿಕ್ಷಣ ಪಡೆದ ವಾತಾವರಣ, ನನಗೊದಗಿದ ಸಹೋದರ ಸಹೋದರಿಯರ ನಿರಂತರ ಪ್ರೋತ್ಸಾಹ... [illegible] ಎಲ್ಲವೂ ಕಾರಣವಾಗಿದೆ.



[illegible]

[illegible] 'ಆನಂದಾಶ್ರಮ'.

[illegible]

ಜಗಕ್ಕೆ ಕಣ್ಣಾದ ಸಂತೃಪ್ತ ಶಿಬಿರಗಳು



ನನಗೆ ಅತೀ ಹೆಚ್ಚು ಸಮಾಧಾನ, ಸಂತೃಪ್ತಿಗೆ ಕಾರಣವಾಗಿರುವುದು ನೇತ್ರ ಚಿಕಿತ್ಸಾ ಶಿಬಿರಗಳು!. ಈ ಬಗ್ಗೆ ನನಗೆ ವಿಶೇಷ ಅಭಿಮಾನವಿದೆ. ಇದರಿಂದ ಸಿಕ್ಕ ಧನ್ಯತೆ ವರ್ಣಿಸಲು ನನಗೆ ಪದಸಂಪತ್ತಿನ ಬಡತನವೇ ಇದೆ!!. 500ರ ಹತ್ತಿರದ ಶಿಬಿರಗಳು, ಲಕ್ಷಕ್ಕೂ ಮಿಕ್ಕಿ ಫಲಾನುಭವಿಗಳು, ಸಹಸ್ರ ಸಂಖ್ಯೆಯ ಉಚಿತ ಕನ್ನಡಕಗಳು, ಅದೆಷ್ಟೋ ಶಸ್ತ್ರಚಿಕಿತ್ಸೆಗಳು....ಓಹ್! ಹಾಗೆಂದು ಈ ಕೆಲಸ ನನ್ನೊಬ್ಬಳಿಂದಾಗಿದ್ದು..ಖಂಡಿತಾ ಅಲ್ಲ!. ಬ್ಲೈಂಡ್‌ನೆಸ್ ಕಂಟ್ರೋಲ್ ಸೊಸಾಯಿಟಿ, ಮೊಬೈಲ್ ನೇತ್ರವಿಜ್ಞಾನ ಘಟಕ, ವೆನ್‌ಲಾಕ್ ಕಣ್ಣಿನ ವಿಭಾಗದ ವೈದ್ಯರು...ಹೀಗೆ ಅನೇಕ ಸಂಘ, ಸಂಸ್ಥೆಗಳು ಹಾಗೂ ವೈದ್ಯರು ಸಹಾಯ ಮಾಡಿದ್ದಾರೆ. ಅದರಲ್ಲೂ ಡಾ.ಶಾಂತರಾಜ್ ನಮ್ಮ ಪತೀ ಶಿಬಿರದಲ್ಲೂ ಜೊತೆಗಿದ್ದು, ಈ ಯಶಸ್ಸಿನ ಪಾಲುದಾರರಾಗಿದ್ದಾರೆ. ನಾನಿಲ್ಲಿ ನೆಪ ಮಾತ್ರ–ಇವರೆಲ್ಲರೂ ಇದರ ರೂವಾರಿಗಳು–ಇಷ್ಟು ಮಾತ್ರ ಹೇಳಬಲ್ಲೆ–ಎಲ್ಲರಿಗೂ ಸದಾ ಆಭಾರಿ!!.

ಇರಲಿ, ಹೀಗೆ ಹುಟ್ಟಿಕೊಂಡ ಆನಂದಾಶ್ರಮಕ್ಕೆ ನಾನೇ ಸ್ಥಾಪಕಾಧ್ಯಕ್ಷೆ. 1995ರಲ್ಲಿ ಒಂದು ಟ್ರಸ್ಟ್ ಮಾಡಿ ರಿಜಿಸ್ಟರ್ ಮಾಡಿಕೊಂಡೆವು. ನಾನು, ನನ್ನ ವಿಠ್ಠಲಣ್ಣ ಹಾಗೂ ವೇಣುಗೋಪಾಲ ಶೆಣೈ, ಡಾ। ಎಮ್.ಕೆ.ಪ್ರಸಾದ್ ಹಾಗೂ ರಾಮ ಭಟ್ ಬೀರಮೂಲೆ, ಎಮ್.ಕೆ. ಕಾಮತ್ ಮುಂಬೈ, ವಿ.ಆರ್.ಶೆಣೈ ಮಂಗಳೂರು ಮತ್ತು ಕೋಚಣ್ಣ ರೈ ಹೀಗೆ 8 ಮಂದಿ ಇದ್ದೆವು.

ಆನಂದಾಶ್ರಮ ಕಟ್ಟಲು ಒಂದು ಜಾಗಕ್ಕಾಗಿ ನಾನು ಪರದಾಡಿದ್ದೇ ದೊಡ್ಡ ಕಥೆ. ಸಿ. ಎಚ್. ಕೋಚಣ್ಣ ರೈಗಳು ಹಿಂದೆ ತಹಶೀಲ್ದಾರ್ ಆಗಿದ್ದರು. ಅವರೂ ನಾನೂ ಸರಕಾರಿ ಜಾಗ ಸಿಗಬಹುದೇ ಎಂದು ಬಹಳ ಪ್ರಯತ್ನ ಪಟ್ಟೆವು. ಸಾಧ್ಯವಾಗಲೇ ಇಲ್ಲ. ಆಗ ವಿಠಲ ಪೈ ಅವರು ನನ್ನ ಕಷ್ಟ ನೋಡಿ, "ಗೌರೀ, ನೀನು ಇಷ್ಟು ಕಷ್ಟ ಪಡಬೇಡ. ನನ್ನ ಮನೆ ತೋಟದ ಹಿಂದಿನ 5 ಎಕ್ರೆ ಜಾಗ ಕೊಡುತ್ತೇನೆ" ಎಂದವರೇ ಅದಕ್ಕೆ ಬೇಕಾದ ಎಲ್ಲಾ ಕಾನೂನಾತ್ಮಕ ಪ್ರಕ್ರಿಯೆ ಮುಗಿಸಿ, ಶಾಶ್ವತ ಲೀಸ್ ನಲ್ಲಿ ಆಶ್ರಮಕ್ಕೆ ಬಿಟ್ಟು ಕೊಟ್ಟರು. ಇವರ ಋಣವನ್ನು ನಾನದೆಂತು ತೀರಿಸಲಿ! ಇದಕ್ಕೇ ನಾನೂ ಯಾವಾಗಲೂ ಹೇಳುವುದು. ಒಳ್ಳೇ ಕೆಲಸ ಮಾಡಲು ಹೋದರೆ ದೇವರು ಯಾವಾಗಲೂ ಕೈ ಬಿಡುವುದೇ ಇಲ್ಲ ಎಂದು. ಪುತ್ತೂರಲ್ಲಿ, ಸಂಬಂಧಿಕರಲ್ಲಿ, ಪರ ಊರುಗಳಲ್ಲಿ ಹೀಗೆ ಸಹಾಯ ಯಾಚಿಸಿದೆವು. ಈ ಎಲ್ಲಾ ಪ್ರಯತ್ನದ ಫಲವಾಗಿ ಆನಂದಾಶ್ರಮದ ಮೊದಲ ಕಟ್ಟಡ 1998ರಲ್ಲಿ ತಲೆ ಎತ್ತಿದಾಗ, ಬಹುಕಾಲ ಮಕ್ಕಳೇ ಇಲ್ಲದ ತಾಯಿಯೊರ್ವಳು ಕೊನೆಗೂ ಬಸುರಿಯಾದಾಗಿನ ಅನುಭೂತಿ ನನ್ನದಾಗಿತ್ತು!. ಇಬ್ಬರು ವೃದ್ಧರು ಅದೇ ಸಮಯದಲ್ಲಿ ಆಶ್ರಯ ಕೇಳಿ ಬಂದರು. ಅಂತೂ ಮೇ 10ರಂದು ಆನಂದಾಶ್ರಮ ಎಂಬ ಆಶಾಕಿರಣವೊಂದು ಜೀವನದ ಸಂಜೆಯಲ್ಲಿ ಅಶಕ್ತರಾದವರಿಗೆ ವರದಾನವಾಗಿ ಎದ್ದು



[illegible]

ನನಗೆ 80 ಅಂತೆ!!!!

[illegible]

ಒಂದು ಮಾತನಾಡದವರಿಗೆ ಬೆಣ್ಣೆಯೋ? ಸುಣ್ಣವೋ? ಅಂತ ಗೊತ್ತಾಗುವುದಿಲ್ಲ. ಏನೇ ಇರಲಿ ನಾನು ನನ್ನ ಅಣ್ಣಂದಿರ ಹಾಗೂ ಅಕ್ಕಂದಿರ ಎಲ್ಲಾ ಮಕ್ಕಳನ್ನು ಒಂದೇ ರೀತಿ ಪ್ರೀತಿಸುತ್ತೇನೆ.



80ರಲ್ಲಿ ಹೀಗೊಂದಿಷ್ಟು:-

ಹೌದು, ಒಪ್ಪಿಕೊಳ್ಳಲೇ ಬೇಕು– ನನಗೀಗ 80!. ನಾನೇ ಕಟ್ಟಿ ಬೆಳೆಸಿದ ಗಿರಿಜಾ ಕ್ಲಿನಿಕ್ ನನ್ನ ಕಣ್ಣೆದುರೇ ನಿಂತು ಹೋದಾಗ ಎದೆಯಾಳದಲ್ಲಿ ತುಂಬಾ ನೋವಾಯಿತು. ಆ ನೋವು ನನ್ನನ್ನು ಪ್ರತೀ ಕ್ಷಣವೂ ಕಾಡುತ್ತಿದೆ. ಅದೆಷ್ಟೋ ಮಕ್ಕಳಿಲ್ಲದ ಅಮ್ಮಂದಿರ ಪಾಲಿಗೆ ವರದಾನವಾದ ಪುಣ್ಯಕ್ಷೇತ್ರದಂತೆ ಇತ್ತು ನನ್ನ ಗಿರಿಜಾ ಕ್ಲಿನಿಕ್. ಅಮ್ಮ ಎನ್ನುವುದು ಪ್ರತೀ ಬದುಕಿಗೂ ಎಷ್ಟು ವಾಸ್ತವವೋ, ನನ್ನ ಪಾಲಿಗೆ ಅಮ್ಮನ ಹೆಸರಿನ ಆಸ್ಪತ್ರೆ ಪುಣ್ಯ ದೇಗುಲದಂತೇ ಎನ್ನುವುದೂ ಅಷ್ಟೇ ವಾಸ್ತವ.

ಏನೇ ಇರಲಿ. ಬದುಕಿನ ಸಂಧ್ಯಾಕಾಲದಲ್ಲಿರುವವರ ಆಶ್ರಯ ತಾಣವಾಗಿರುವ ಆನಂದಾಶ್ರಮ ನನಗೀಗ ಉಸಿರಾಗಿದೆ–ನನ್ನ ಕರ್ಮಭೂಮಿಯೂ ಆಗಿದೆ. ಇಲ್ಲಿರುವ ಅಷ್ಟೂ ಹಿರಿಯ ಜೀವಗಳು ನನ್ನನ್ನು ಕಂಡಾಗ, ತಮ್ಮ ಅಮ್ಮನನ್ನು ಕಂಡಂತೆ ಕಣ್ಣರಳಿಸಿ ಪ್ರೀತಿ ತೋರುವಾಗ, ಜೀವನದ ಪರಮಾನಂದವನ್ನು ಅನುಭವಿಸುತ್ತಿದ್ದೇನೆ.

ಅಚ್ಚರಿಗೂ ಕಮ್ಮಿ ಇಲ್ಲ. ಇದೆಲ್ಲಾ ನನ್ನಿಂದಲೇ ಆಯ್ತಾ!. ಇಲ್ಲ...ವ್ಯಕ್ತಿ ಧರ್ಮದ ಅನುಷ್ಠಾನಕ್ಕೆ ಗಿರಿಜಾ ಕ್ಲಿನಿಕ್ ನನ್ನ ಪ್ರಯತ್ನದ ಫಲವಾದರೆ, ಆನಂದಾಶ್ರಮ ನನ್ನ ಹಾಗೇ ಸಮಾನ ಮನೋಭಾವದ ಅನೇಕರ ಪರಿಶ್ರಮದ ಫಲ. ನಾನಿಲ್ಲಿ ಒಂದು ನಿಮಿತ್ತವಾಗಿ, ಓರ್ವ ವ್ಯವಸ್ಥಾಪಕಿಯಾಗಿ, ನನ್ನಲ್ಲಿರುವ ತನಕದ ವರ್ತಮಾನದ ವಾರೀಸುದಾರಳಾಗಿದ್ದೇನೆ – ಅಷ್ಟೇ!!

ನಾಳೆಗಳ ಬಗ್ಗೆ ಎಂದೂ ಯೋಚಿಸದೆ 'ಇಂದು' ಎನ್ನುವ ವಾಸ್ತವವನ್ನು ಬದುಕುತ್ತಿರುವ ನನಗೆ ನಿಜಕ್ಕೂ ಆನಂದಾಶ್ರಮದ 'ನಾಳೆ'ಯ ಬಗ್ಗೆ ಈಗ ಯೋಚನೆ ಆರಂಭವಾಗಿದೆ!. ನಾಳೆ ಎನ್ನುವುದೇ ಇಲ್ಲ ಎಂದು ಭಾವಿಸಿ ಬದುಕಿನ ಸಂಜೆ ಕಳೆಯುತ್ತಿರುವ ಈ ಅಜ್ಜಿಯ 'ಬದುಕು'ಗಳಿಗೆ ನನ್ನ ನಂತರವೂ ಒಂದು ಗಟ್ಟಿ ನೆಲೆ ಒದಗಿಸುವ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಮತ್ತು ಜವಾಬ್ದಾರಿ ನನ್ನ ಮೇಲಿದೆ.... ಯೋಚನೆ ನಿರಂತರ ಸಾಗಿದೆ.

ನನಗಿರುವ ಎರಡನೆಯ ಕುಟುಂಬ!!.

ಬಾಲಕೃಷ್ಣ – ಈತ ಮಗನೋ, ಮನೆಯ ಸದಸ್ಯನೋ, ಬಂಧುವೋ – ಅಥವಾ ಸಂದರ್ಭದಲ್ಲಿ ಎಲ್ಲವೂ ಆದವನೋ!. ಅದಾವುದೋ ಜನುಮದ ಸಂಬಂಧದಂತೆ ನನ್ನ



[illegible] ಎಂದು!.

[illegible] ಒಂದು ಕೈಯೇ ಮುಂದ ಹಾಗೆ!!

[illegible]

[illegible]

[illegible]

[illegible]



ಈ ಎಲ್ಲರನ್ನೂ ನಾನು ನನ್ನ ಎರಡನೆಯ ಕುಟುಂಬದಂತೇ ಪ್ರೀತಿಸುತ್ತೇನೆ. ಕೆಲ ಸಂಬಂಧಗಳು ವ್ಯವಹಾರವನ್ನೂ ಮೀರಿ ಬೆಳೆದಿರುತ್ತವೆ ಅನ್ನುತ್ತಾರಲ್ಲ, ಹಾಗಿದೆ ಈ ಸಂಬಂಧ. ಯಾವುದೋ ಅನಿವಾರ್ಯತೆಯಿಂದ ಆಕಸ್ಮಿಕವಾಗಿ ಬಂದು ಸೇರಿಕೊಂಡವರು, ನಮ್ಮನೆಯವರೇ ಆಗಿರುವುದು, ನನಗಂತೂ ದೇವರು ಒದಗಿಸಿದ ಅಪರೂಪದ ಬಂಧುತ್ವ

ಹಾಗೇ ನನ್ನ ಅಣ್ಣಂದಿರು, ಅಕ್ಕಂದಿರು, ಅವರ ಮಕ್ಕಳು, ಮೊಮ್ಮಕ್ಕಳು... ಬಂಧುಗಳು... ಹೀಗೆ ಎಲ್ಲರ ಪ್ರೀತಿಯನ್ನೂ ನಾನು ಸವಿಯುತ್ತಿದ್ದೇನೆ. ಅನೇಕ ಸಲ ಅಂದುಕೊಳ್ಳುತ್ತೇನೆ.... ನಾನಿವರೆಲ್ಲರ ಪ್ರೀತಿಗೆ ಎಷ್ಟು ಅರ್ಹಳು ಎಂದು! ಆಗೆಲ್ಲಾ ದೇವರನ್ನು ಮನಸಾರೆ ವಂದಿಸುತ್ತೇನೆ-ಇಂತಹ ಸುಂದರ ಬದುಕು ಒದಗಿಸಿದ್ದಕ್ಕೆ!!.

ಹೀಗಿರುವಾಗ....ಅಭಿನಂದನೆಯಂತೆ..!!

ಈ ಎಲ್ಲಾ ಪ್ರೀತಿಯ ದ್ಯೋತಕವಾಗಿ 80ರ ಈ ಹೊಸ್ತಿಲಿನಲ್ಲಿ ನನಗೂ ಅಭಿನಂದನೆಯೇ!!. ಬೇಕಿತ್ತಾ ಎಂದೆ-ಮುಜುಗರದಿಂದಲೇ. ಬೇಡವೇ ಬೇಡ ಎಂದೆ-ಸಿಡುಕಿನಿಂದ!. ಕೊನೆಗೂ ಪ್ರೀತಿ ಪಾತ್ರರ ಒತ್ತಾಯಕ್ಕೆ ಕಟ್ಟು ಬಿದ್ದು ಒಪ್ಪಿದ್ದೇನೆ. ಇದು ಅಭಿನಂದನೆಯಲ್ಲ. ಆನಂದಾಶ್ರಮದ ನನ್ನ ಜೀವನ ಧ್ಯೇಯದ ವಿಷಯದಲ್ಲಿ ನನ್ನ ಜವಾಬ್ದಾರಿಯನ್ನು ನೆನಪಿಸುವ ಮತ್ತೊಂದು 'ಸಂದರ್ಭ' ಎಂದೇ ನಾನಿದನ್ನು ನಂಬಿದ್ದೇನೆ-ಒಮ್ಮೊಮ್ಮೆ ನಮ್ಮನ್ನೂ ಬಡಿದೆಬ್ಬಿಸುವ ವ್ಯವಸ್ಥೆಗೆ ತಲೆ ಬಾಗಲೇಬೇಕೆಂಬ ಹಾಗೆ ಸುಮ್ಮನೇ ತಲೆ ತಗ್ಗಿಸಿ ಕುಳಿತಿದ್ದೇನೆ-ನಿಮ್ಮ ಅಭಿಮಾನದ **ಹಾರದ ಭಾರಕ್ಕೆ ಕತ್ತೊಡ್ಡಿ!!**

ಕೆಲವು ಮಹನೀಯರು–ನನ್ನ ನೆನಪಿನಾಳದಿಂದ:-



- [illegible]
- [illegible]
- [illegible]
- [illegible]
- [illegible]
- [illegible]

ಸ್ಮರಣೆಯೊಂದೇ ಸಾಲದೇ...



- ಮಣಿಪಾಲದ ಆಸ್ಪತ್ರೆಯಲ್ಲಿ ಒಂದೂವರೆ ವರ್ಷ ಸೇವೆ ಸಲ್ಲಿಸಿದಾಗ ಡಾ.ಪದ್ಮಾ ರಾವ್ ಇಲ್ಲದ ಆರು ತಿಂಗಳು ಇಡೀ ಗೈನಕಾಲಜಿ ವಿಭಾಗವನ್ನು ನೋಡಿಕೊಂಡಿದ್ದೆ. ಇದು ನನ್ನ ವೈದ್ಯಕೀಯ ಜೀವನದ ನನ್ನೊಳಗೆ ಆತ್ಮ ವಿಶ್ವಾಸವನ್ನು ಹೆಚ್ಚಿಸಲು, ದೇವರೇ ಕರುಣಿಸಿದ ಅವಕಾಶವೆಂದೇ ನಾನು ಭಾವಿಸಿದ್ದೇನೆ. ಈ ಅನುಭವವೇ ಮುಂದೆ ಗಿರಿಜಾ ಕ್ಲಿನಿಕ್ ಆರಂಭಿಸಿದಾಗ, ಅದನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ನನಗೆ ವಿಶೇಷ ಅನುಭವ ನೀಡಿದ್ದು.

- ಸರ್ಜರಿಯಲ್ಲಿ ನಮಗೆ ಎಬಿಸಿಡಿ ಕಲಿಸಿದ ಡಾ.ಎಂ.ವಿ.ಪೈ ಹಾಗೂ ಡಾ.ಪದ್ಮಾರಾವ್

- ಅನೇಸ್ತೆಟಿಸ್ಟ್ ಡಾ.ಕೋಶಿ ನಮ್ಮ ಮನೆಯ ಓರ್ವ ಸದಸ್ಯರಂತೆ ಇದ್ದರು. ನನ್ನಮ್ಮನ ಅನಾರೋಗ್ಯದ ಸಂದರ್ಭದಲ್ಲಿ ಇವರು ನಮಗೊದಗಿದ ರೀತಿಯನ್ನು ಇಡೀ ಜೀವನದಲ್ಲೇ ಮರೆಯಲಾಗದ್ದು ಮತ್ತು ನಾನವರಿಗೆ ಸದಾ ಆಭಾರಿ.

- ಡಾ.ಮನೋರಮಾ ರಾವ್, ಡಾ.ಮಹಾಲೆ, ಡಾ.ಕೆ.ಆರ್.ಶೆಟ್ಟಿ, ಡಾ. ಎಂ.ವಿ. ಚಾರಿ, ಡಾ.ಗಣೇಶನ್, ಡಾ.ಶ್ರೀನಿವಾಸನ್, ಡಾ.ಎಚ್.ಶಾಂತಾರಾಮ್ (ಡೈರೆಕ್ಟರ್ ಆಫ್ ಅಕಾಡೆಮಿ ಆಫ್ ಜನರಲ್ ಎಜುಕೇಶನ್), ಡಾ.ವಿ.ಎಸ್. ಕೃಷ್ಣಮೂರ್ತಿ, ಖ್ಯಾತ ಪಿಡಿಯಾಟ್ರೀಶನ್, ಕೆ.ಎಂ.ಸಿ.ಪ್ರೊಫೆಸರ್ (ಅವರಿಗೆ ನಾನು ಅಂದರೆ ತುಂಬಾ ಅಭಿಮಾನ, ಪ್ರೀತಿ. ನನ್ನ ಅಣ್ಣನ ಮಗಳು ಶಂಕರಿ ಪೈ ಎಂ.ಬಿ.ಬಿ.ಎಸ್ ಕಲಿಯುವಾಗ ಅನೇಕ ಸಲ ಅವಳನ್ನು ಗೌರಿ ಪೈ ಅಂತಾನೇ ಕರೆಯುತ್ತಿದ್ದರು ಎಂದು ಶಂಕರಿ ಹೇಳುತ್ತಿದ್ದಳು). ನನ್ನೊಡನೆ ಕಲಿತ ಕಸ್ತೂರಿ ಭಟ್, ವಿಮಲಾ ಮೆನನ್(ಸ್ವಾಮಿ ಚಿನ್ಮಯಾನಂದಜೀಯವರ ಸಹೋದರಿ), ಪಾಂಡುರಂಗ ನಾಯಕ್, ಸರೋಜ್‌ನ್ರೋರಾ, ಡಾ.ಪ್ರಭಾ ಆಪ್ಟೆ, ಡಾ.ಅಕ್ಕಮಹಾದೇವಿ.. ದಿವಂಗತ ಸುಶೀಲಾ ಸಿ. (ನಿವೃತ್ತ ನರ್ಸ್, ಡಾ.ವಾಲ್ಮೀಕಿಯವರ ಶ್ರೀಮತಿ, ಮುಂತಾದವರು.

- ಪುತ್ತೂರಿನವರೇ ಆಗಿರುವ ಡಾ.ನಳಿನಿ ಪೈ ನಾನು ಗಿರಿಜಾ ಕ್ಲಿನಿಕ್ ಆರಂಭ ಮಾಡುವಾಗಿನಿಂದ ಅನೇಕ ವರ್ಷಗಳು ನನ್ನ ಮುಖ್ಯ ಕೇಸ್‌ಗಳಿಗೆ ಬಂದು ಸಹಕರಿಸುತ್ತಿದ್ದರು. ನಾನು ಅವರಿಗೆ ತುಂಬಾ ಋಣಿಯಾಗಿದ್ದೇನೆ. ನಮಗಾಗ ಪುತ್ತೂರಿನಲ್ಲಿ ಅನೇಸ್ತೆಟಿಸ್ಟ್ ಯಾರೂ ಇರಲಿಲ್ಲ. ಇವರೂ ಮಂಗಳೂರಿನಿಂದಲೇ ಬರಬೇಕಿತ್ತು. ಡಾ. ಬಿ.ಎ. ಕೋಶಿ ಮತ್ತು ಡಾ.ಜಿ ಆರ್ ಸಂಪಿಗೆತ್ತಾಯ ನಮ್ಮ ಅನೇಸ್ತೆಟಿಸ್ಟ್ ಆಗಿದ್ದರು. ಅನೇಕ ಸಲ ಮಧ್ಯರಾತ್ರಿಯಲ್ಲೂ ಕಾರ್ ಮಾಡಿ ಬರುತ್ತಿದ್ದರು. ನಾನೆಂದರೆ ಅವರಿಗೂ ತುಂಬಾ ಗೌರವ ಹಾಗೂ ಪ್ರೀತಿ. ಅವರು ನನಗೆ ಚಿಕ್ಕ ತಮ್ಮನ ಹಾಗೆ ಇದ್ದರು. ಡಾ.ಸಿ.ಆರ್. ಬಲ್ಲಾಳ್ ಕೂಡಾ ನಮ್ಮಲ್ಲಿ ಕೆಲವು ಜನರಲ್ ಸರ್ಜರಿ ಮಾಡಿರುವರು. ಇವರು ಕೂಡ ನನಗೆ ತುಂಬಾ ಹತ್ತಿರದವರಾಗಿದ್ದರು.

- ಮಂಗಳೂರಿನ ತಾರಾ ಕ್ಲಿನಿಕ್‌ನ ಡಾ.ಭಾರತಿ ಕಾಮತ್ ಹಾಗೂ ಡಾ.ಕುಮುದಿನಿ ನನಗಿಂತ ಒಂದು ವರ್ಷ ಕಿರಿಯರಾಗಿದ್ದರೂ, ನನ್ನ ಆಪ್ತರಾಗಿದ್ದರು. ಅವರ ಸಹಕಾರವೂ ಅನನ್ಯ.

ಡಾ. ಗೌರಿ ಪೈ ಅವರಿಗೆ ಬಂದ ಸನ್ಮಾನ-ಪ್ರಶಸ್ತಿಗಳು:-



- [illegible] - 2001 - [illegible] 2001ರ [illegible]
- [illegible] 2000-2001ರ [illegible] ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿ ಗೌರವ.
- [illegible] ವೇಳೆ ಸನ್ಮಾನ
- [illegible] ಆಚರಣೆಯ ವೇಳೆ ಸನ್ಮಾನ
- [illegible] ಸನ್ಮಾನ
- [illegible] ಸನ್ಮಾನ
- [illegible] ಸನ್ಮಾನ
- [illegible]
- [illegible] ನಿಂದ ಸನ್ಮಾನ
- [illegible] ಸಮಾಜಮುಖಿ ಸೇವೆಯನ್ನು ಗುರುತಿಸಿ ಸನ್ಮಾನ
- [illegible] ಶಾಲೆಯಲ್ಲಿ ಸನ್ಮಾನ
- [illegible] ಮತ್ತು ರಾಗಸುಧಾ ದಿಂದ ಸನ್ಮಾನ
- [illegible]
- [illegible] ಜೇಸೀಉತ್ಸವದಲ್ಲಿ ಸನ್ಮಾನ
- 2017ರಲ್ಲಿ ಪ್ರತಿಷ್ಠಿತ ಆರ್ಯಭಟ ಪ್ರಶಸ್ತಿ
- [illegible]

ಆಶ್ರಮವಾಸಿಗಳು ಕಂಡಂತೆ-ಗೌರಕ್ಕ

ಐದು ವರ್ಷ ಏಳು ತಿಂಗಳಿಂದ ಆಶ್ರಮದಲ್ಲಿರುವ ನನಗೆ ನೆಮ್ಮದಿ, ಸಂತೋಷಗಳೆರಡೂ ಸಿಕ್ಕಿದೆ. ಅನಾರೋಗ್ಯದಿಂದ ಬಳಲುತ್ತಿದ್ದ ನನಗೆ ಗೌರಿ ಪೈ ಅವರ ಆನಂದಾಶ್ರಮದ ಮೂಲಕ ಹೊಸ ಬದುಕು ಸಿಕ್ಕಿದೆ. ಗೌರಿ ಪೈ ಕೆಲಸ ಮತ್ತು ಸೇವೆಯ ವಿಷಯದಲ್ಲಿ ಸದಾ ಅನುಕರಣೀಯರು. ಅವರು ನೂರು ವರ್ಷಗಳ ಕಾಲ ಬದುಕಬೇಕೆಂಬುದೇ ನಮ್ಮ ಹಾರೈಕೆ

– **ಬಿ. ಪುಂಡಲೀಕ ಭಂಡಾರಿ,** ಆಶ್ರಮ ವಾಸಿ

ಗೌರಿಯಕ್ಕ ನನಗೆ ದಾದಿ ತರಬೇತಿ ನೀಡುವ ಮೂಲಕ ಹೊಸದೊಂದು ಬದುಕು ಕಟ್ಟಿ ಕೊಟ್ಟಿದ್ದಾರೆ. ಸುಬ್ರಹ್ಮಣ್ಯ ನನ್ನ ಮನೆಯಾದರೂ, ನನಗೆ ಆನಂದಾಶ್ರಮವೇ ತವರಿನಂತೆ ಭಾಸವಾಗುತ್ತಿದೆ. ದಾದಿಯರ ತರಬೇತಿ ನೀಡುವ ಮೂಲಕ, ನನಗೆ ಸೇವೆ ಮತ್ತು ಬದುಕನ್ನು ಏಕಕಾಲಕ್ಕೆ ಕಲಿಸಿಕೊಟ್ಟ ಗೌರಕ್ಕ, ನಮ್ಮೆಲ್ಲರ ಪಾಲಿನ ದೇವತೆ. ಆಕೆ ಚೆನ್ನಾಗಿರಬೇಕು. ಹಾಗಾದಾಗ ಇಡೀ ಸಮಾಜವೇ ಆರೋಗ್ಯಕರವಾಗಿರುತ್ತದೆ.

– **ಆಶಾ ಮುಂಡೋಡಿ,** ಸುಬ್ರಹ್ಮಣ್ಯ, ದಾದಿಯಾಗಿ ಸೇವೆ ಸಲ್ಲಿಸುತ್ತಿರುವವರು

ಆನಂದಾಶ್ರಮದಲ್ಲಿ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಆಶ್ರಮದಲ್ಲಿ ನನಗೆ ಕೆಲಸ ನೀಡುವ ಮೂಲಕ, ನನ್ನ ಸಂಸಾರ ನಿರ್ವಹಣೆಗೆ ಅನುವಾಗುವಂತೆ ಬದುಕು ಕೊಟ್ಟಿದ್ದಾರೆ. ಅನೇಕರಿಗೆ ಈ ರೀತಿಯ ಜೀವನ ಕಲ್ಪಿಸಿದ ನಮ್ಮ ಗೌರಕ್ಕ, ಮುಂದೆಯೂ ಆರೋಗ್ಯದಿಂದಿರಲಿ. ನಮಗೆ ಅವರು ಅಮ್ಮನಿದ್ದಂತೆ

– **ಸಾವಿತ್ರಿ** ಆಶ್ರಮದ ಸಹಾಯಕಿ

ಮಂಗಳೂರಿನ ಕದ್ರಿ ದೇವಸ್ಥಾನದ ಸಮೀಪದಿಂದ ನಾನಿಲ್ಲಿಗೆ ಬಂದೆ. ಹತ್ತಕ್ಕೂ ಮಿಕ್ಕಿ ವರ್ಷದಿಂದ ಇಲ್ಲಿದ್ದೇನೆ. ಗೌರಿಯಕ್ಕ ನನಗೆ ಆಶ್ರಯ ನೀಡಿದ್ದಾರೆ. ದೇವರು ಅವರನ್ನು ಚೆನ್ನಾಗಿಟ್ಟಿರಲಿ

– **ಉಷಾ ನಾಯಕ್,** ಆಶ್ರಮ ವಾಸಿ

ಗೌರಿ ಪೈ ಅವರ ಆಸ್ಪತ್ರೆಯಲ್ಲಿ ಕೆಲಸಕ್ಕೆಂದು ಸೇರಿದವ ನಾನು. ಈಗ ಅವರ ಡ್ರೈವರ್ ಆಗಿ ಸೇವೆ ಸಲ್ಲಿಸುತ್ತಿದ್ದೇನೆ ನೇರ, ನಿಷ್ಠುರ ಮಾತುಗಳಿಂದಾಗಿ ಅವರೊಂದಿಗೆ ಕೆಲಸ ಮಾಡುವುದು ಸಾಧ್ಯವೇ ಇಲ್ಲ ಎಂದು ಕೆಲವರು ನನಗೆ ಹೇಳಿದರು. ಆದರೆ ನನಗೆ ಅವರ ಈ ಗುಣಗಳೇ ಇಷ್ಟ ಮತ್ತು ಇದರಿಂದಾಗಿ ತಪ್ಪುಗಳಾಗದಂತೆ ಕೆಲಸ ಮಾಡಲು ನನಗವರು ಪ್ರೇರಣೆ ಆಗಿದ್ದಾರೆ. ನನ್ನನ್ನು ತಮ್ಮ ಮನೆಯ

ಸಮುದ್ರದಂತೆ ಕಾಳಜಿಯಿಂದ ನೋಡಿಕೊಳ್ಳುವ ಗೌರಕ್ಕ. ಇದೇ ಸಗು. ಆರೋಗ್ಯದಿಂದ ನೂರು ಕಾಲ ಬಾಳಬೇಕೆಂಬುದೇ ನನ್ನ ಹಾರೈಕೆ

-ಬಾಲಕೃಷ್ಣ, ಡಾ. ಗೌರಿ ಪೈ ಅವರ ಡ್ರೈವರ್

ನಾನು ಗೌರಕ್ಕನವರ ಮನೆ ಕೆಲಸದಾಗಿನಿಂದ ಮತ್ತೆಂದೂ ಕಣ್ಣೀರು ಹಾಕಿಲ್ಲ! ಮನೆಯಲ್ಲಿ ಮಲಗಿದ್ದಾಗ ಸಮಸ್ಯೆಗಳಿಂದ ಬಳಲಿದ್ದು ರಾಮಕೃಷ್ಣ ಆಶ್ರಮಕ್ಕೆ ಬಂದೆ ಅವರೆ ಅಲ್ಲಿ ನನಗೆ ಆ ಸಂದರ್ಭದಲ್ಲಿ ಆಶ್ರಯ ಒದಗಿಸಿ ಆಗ ಗೌರಕ್ಕ ನನ್ನಲ್ಲಿ ಕರೆತಂದರು ಈಗ ಮನೆಯ ಸದಸ್ಯಳಾಗಿದ್ದೇನೆ ಗೌರಕ್ಕ ಎಲ್ಲೇ ಹೋದರೂ ನನ್ನನ್ನು ಕರೆದುಕೊಂಡು ಹೋಗುತ್ತಾರೆ ಅವರಿಂದ ಬಹಳಷ್ಟು ಕಲಿತುಕೊಳ್ಳುತ್ತಿದ್ದೇನೆ ಅಂತಹ ಸಜ್ಜನಿಕೆಯನ್ನು ನಾನೆಂದೂ ಎಲ್ಲೂ ನೋಡಿಲ್ಲ ಅವರ ಮನಸ್ಸಿನ ಶುದ್ಧ ಚೇತನವಾದರೂ ನನಗೆ ಆಧಾರವಾಗುತ್ತದೆ. ಇಲ್ಲಿಗೆ ಬಂದು ಕಳೆದ ಸುಮಾರು 12 ವರ್ಷಗಳಿಂದ ಇವರೊಂದಿಗಿದ್ದೇನೆ. ಮುಂದೆಯೂ ಇರುತ್ತೇನೆ. ಗೌರಕ್ಕನವರಿಂದಲೆ ನನಗೆ ಉಸಿರು–ಅವರು ಚೆನ್ನಾಗಿರಲಿ

- ಕುಸುಮ, ಅಡುಗೆಯವರು

ನಾನು ಲೀಲಾವತಿ 1988ರಿಂದ 2000ದ ತನಕ ನಾನು ಗಿರಿಜಾ ಕ್ಲಿನಿಕ್‌ನಲ್ಲಿ ಕೆಲಸ ಮಾಡಿದ್ದೇನೆ. 10ನೇ ತರಗತಿ ಮುಗಿಸಿ ಬಂದ ನನಗೆ ನರ್ಸಿಂಗ್ ಕಲಿಸಿ ಒಂದು ಹೊಸ ಬದುಕು ನೀಡಿದವರು ಗೌರಕ್ಕ.

ಈಗ ಪುತ್ತೂರಿನ ಟಿ.ಬಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಹಾಗೊಮ್ಮೆ ನನ್ನ ಕೆಲಸದಲ್ಲಿದ್ದೆ. ಒಂದಿನ ಆಸ್ಪತ್ರೆಯಲ್ಲಿ ತಲೆ ತಿರುಗಿದ ಅನುಭವವಾಗಿ ಬಿದ್ದೆ. ಆಗ ಗೌರಕ್ಕನವರೇ ಬಂದು ನನ್ನನ್ನು ಉಪಚರಿಸಿದ್ದರು. ಮರುದಿನ ನನ್ನನ್ನು ಮಂಗಳೂರಿಗೆ ಕರೆದುಕೊಂಡು ಹೋಗಿ ಅಲ್ಲಿನ ಆಸ್ಪತ್ರೆಗೆ ಸೇರಿಸಿ ನೋಡಿಕೊಂಡ ಕಾರಣ ನಾನು ಬದುಕಿದೆ. ಹೀಗೆ ಅನೇಕ ರೋಗಿಗಳಿಗೆ ಅವರು ಹೊಸ ಬದುಕು ನೀಡಿದ್ದಾರೆ.

ಅಂದು ಗಿರಿಜಾ ಕ್ಲಿನಿಕ್ ಇದ್ದದ್ದು ಅದು ಪುತ್ತೂರಿನ ಮಟ್ಟಿಗೆ ಬಹು ದೊಡ್ಡ ಸಹಾಯ ಎಂದೇ ಭಾವಿಸಿದ್ದೇನೆ. ಹಾಗೆಯೇ ಎಲ್ಲರನ್ನು ಸಂಪಾದಿಸಿದವರಾಗಿದ್ದ ಗೌರಕ್ಕ, ಈ ರೀತಿ ಸಮಾಜ ಸೇವೆಯಲ್ಲೇ ತನ್ನ ಜೀವನದ ಸಾರ್ಥಕ್ಯವನ್ನು ಕಾಣುತ್ತಿರುವುದು ನನ್ನಂತಹ ಅನೇಕರ ಹೊಸ ಬದುಕಿಗೆ ಕಾರಣವಾಗಿದೆ.

ಅಂತಹ ಗೌರಕ್ಕ ನೂರಾರು ವರ್ಷ ಬಾಳಬೇಕು–ಆರೋಗ್ಯವಂತ ಜೀವನವನ್ನು ದೇವರು ಅನುಗ್ರಹಿಸಲಿ ಎಂದು ಕೇಳಿಕೊಳ್ಳುತ್ತೇನೆ.

-ಲೀಲಾವತಿ, ನರ್ಸ್, ಟಿ.ಬಿ ಆಸ್ಪತ್ರೆ, ಪುತ್ತೂರು

ಸೇವಾಹಿ ಪರಮೋಧರ್ಮ



ಉಚಿತ ನೇತ್ರ ಚಿಕಿತ್ಸಾ ಶಿಬಿರ



ಲಯನ್ಸ್ ತೇಜಸ್ವಿನಿ ಡಯಾಲಿಸಿಸ್ ಸೆಂಟರ್‌ಗೆ
ಡಾ. ಗೌರಿ ಪೈಯವರಿಂದ ಡಯಾಲಿಸಿಸ್ ಯಂತ್ರ ಕೊಡುಗೆ



ಶಾಲಾ ಮಕ್ಕಳಿಗೆ ಉಚಿತ ನೇತ್ರ ತಪಾಸಣೆ



ವೃದ್ಧ ರೋಗಿಗಳ ಶುಶ್ರೂಷೆ, ಆರೈಕೆ




ಆಶ್ರಮವಾಸಿಗಳೊಂದಿಗೆ ಡಾ. ಗೌರಿ ಪೈ



ವೃದ್ಧ ರೋಗಿಗಳ ತಪಾಸಣೆ ಹಾಗೂ ಉಪಚಾರ

ಗೌರವದ ಕ್ಷಣಗಳು



2001 ವರ್ಷದ ವ್ಯಕ್ತಿಯಾಗಿ ಡಾ. ಗೌರಿ ಪೈಯವರಿಗೆ ಪ್ರಶಸ್ತಿ



ಪರಿಸರ ಪ್ರೇಮಿ ಡಾ. ಗೌರಿ ಪೈಯವರಿಗೆ ಸನ್ಮಾನ



ಲಯನ್ಸ್ ಜಿಲ್ಲೆ 317 –ಡಿ ಇವರ ವತಿಯಿಂದ ಸನ್ಮಾನ



2017 – ಪ್ರತಿಷ್ಠಿತ ಆರ್ಯಭಟ ಪ್ರಶಸ್ತಿ ಸ್ವೀಕರಿಸಿದಾಗ
ಗಣ್ಯ ಅತಿಥಿಗಳೊಂದಿಗೆ



ಆಶ್ರಮವಾಸಿಗಳೊಂದಿಗೆ ದೇಶದ ಸ್ವಾತಂತ್ರ್ಯ ದಿನಾಚರಣೆ



ಆನಂದಾಶ್ರಮ ಸೇವಾ ಟ್ರಸ್ಟ್ (ರಿ.)
1998 – ವಾನಪ್ರಸ್ಥ ವೃದ್ಧಾಶ್ರಮದ ಉದ್ಘಾಟನೆ





2002 – ಆನಂದಾಶ್ರಮಕ್ಕೆ ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು
ಸ್ವಾಮೀಜಿಯವರ ಭೇಟಿಯ ಕ್ಷಣ



ಅಂತರಾಷ್ಟ್ರೀಯ ಹಿರಿಯರ ದಿನಾಚರಣೆಯ ಸಮಾರಂಭದಲ್ಲಿ



ಪಿ. ದಯಾನಂದ ಪೈ, ಸೆಂಚುರಿ ಬಿಲ್ಡರ್ಸ್, ಬೆಂಗಳೂರು ಹಾಗೂ ಕೆನರಾ ಬ್ಯಾಂಕ್
ಇವರಿಂದ ಆನಂದಾಶ್ರಮಕ್ಕೆ ವಿಶೇಷ ಕೊಠಡಿಯ ಕೊಡುಗೆ





ಆನಂದಾಶ್ರಮದ ಒಂದು ವಿಹಂಗಮ ನೋಟ



ರಾಷ್ಟ್ರೀಯ ಸೇವಾ ಯೋಜನೆಯ ಸದಸ್ಯರೊಂದಿಗೆ



ಅಂತರಾಷ್ಟ್ರೀಯ ಹಿರಿಯರ ದಿನಾಚರಣೆಯ ಸಾಧಕರಿಗೆ ಸನ್ಮಾನ



ಉದ್ಘಾಟನಾ ಸಮಾರಂಭದಲ್ಲಿ ಡಾ. ಗೌರಿ ಪೈ

ಪ್ರವಾಸದ ಕ್ಷಣಗಳು



ಕೀನ್ಯಾ ಪ್ರವಾಸದ ಅವಿಸ್ಮರಣೀಯ ಕ್ಷಣ



ಕೈಲಾಸ ಮಾನಸ ಸರೋವರ ಯಾತ್ರೆಯ ಕ್ಷಣ



ನೇಪಾಳದ ಮನೋಕಾಮನಾ ದೇವಿ ಮಂದಿರದಲ್ಲಿ




ನೈರೋಬಿ ರಾಷ್ಟ್ರೀಯ ಉದ್ಯಾನದಲ್ಲಿ



ಲಡಾಕ್ ಪ್ರವಾಸದ ಮಧುರ ಕ್ಷಣ



ಕೈಲಾಸ ಮಾನಸ ಸರೋವರದ ಯಾತ್ರೆಯ ಕ್ಷಣ


ಅಕ್ಷರ ಪಾಠಗಳೊಂದಿಗೆ



ಡಾ. ಗೌರಿ ಪ್ರಭುದೇವ – ತಮ್ಮ ಕಲಾಕೃತಿಗಳೊಂದಿಗೆ

ಹೀಗಿದ್ದಾರೆ ನಮ್ಮ ಗೌರಕ್ಕ...!

ಡಾ.ಗೌರಿ ಪೈ ಅವರದ್ದು ಬಹುಮುಖಿ ವ್ಯಕ್ತಿತ್ವ. ಇವರು ಓರ್ವ ಉತ್ತಮ ಚಿತ್ರ ಕಲಾವಿದೆಯೂ ಹೌದು. ಆನಂದಾಶ್ರಮದ ಕೊಠಡಿಯೊಂದನ್ನು ಚಿತ್ರಕಲಾ ಕೃತಿಗಳಿಗೆಂದೇ ಮೀಸಲಿಟ್ಟಿದ್ದಾರೆ. ಅಲ್ಲಿ ನೋಡಿದರೆ ತಮ್ಮ ಕಲಾಭ್ಯಾಸದ ಆರಂಭದ ದಿನಗಳಿಂದ ಇವರು ರಚಿಸಿದ ಅನೇಕ ಕಲಾ ಕೃತಿಗಳು ಗಮನ ಸೆಳೆಯುತ್ತವೆ. ಸಹಜವಾಗಿಯೇ ಮಾನವೀಯ ಸಂಬಂಧಗಳಿಗೆ ಮತ್ತು ಸೇವಾ ತತ್ಪರತೆಗೆ ಹೆಚ್ಚು ತುಡಿಯುವ ಮನ ಇವರದ್ದಾದ ಕಾರಣ, ಇವರ ಕಲಾಕೃತಿಗಳಲ್ಲೂ ಈ ಛಾಯೆಯನ್ನು ಕಾಣಬಹುದು. ಇವರ ಇನ್ನೊಂದು ವಿಶೇಷ ಹವ್ಯಾಸ ಹೊಲಿಗೆ.

ಗೌರಿ ಪೈ ಅವರ ಮತ್ತೊಂದು ವಿಶಿಷ್ಟ ಹವ್ಯಾಸ-ದೇಶ ಸುತ್ತುವುದು!. ತಮ್ಮ ಆಪ್ತರೊಂದಿಗೆ ಇವರು ಕಳೆದ ಅನೇಕ ವರ್ಷಗಳಲ್ಲಿ ದೇಶದ ಉದ್ದಗಲಕ್ಕೂ ಅನೇಕ ತೀರ್ಥ ಕ್ಷೇತ್ರ, ಪ್ರೇಕ್ಷಣೀಯ ಸ್ಥಳಗಳನ್ನು ಸುತ್ತಿದ್ದಾರೆ. ಸದಾ ಕಾಲ ಅಧ್ಯಯನದ ಹಸಿವಿನ ಇವರು, ದೇಶ ಸುತ್ತು, ಕೋಶ ಓದು ಎಂಬಂತೆ ತಾವು ನೋಡುವ ಪ್ರತೀ ಸ್ಥಳಗಳ ಬಗ್ಗೆಯೂ ಮಾಹಿತಿ ಕಲೆ ಹಾಕಿ, ತಮ್ಮ ಪ್ರವಾಸವನ್ನು ಕೇವಲ ಸಮಯ ಕೊಲ್ಲಲು ಬಳಸದೇ, ಅಲ್ಲಿಯೂ ತಿಳಿದುಕೊಳ್ಳುವ ವಿಷಯಗಳ ಬಗ್ಗೆ ಅಧ್ಯಯನ ಮುಖಿಯಾಗಿರುತ್ತಾರೆ. ಇವರ ಸರಳತೆಗೆ ಮತ್ತೊಂದು ಉದಾಹರಣೆ ಎಂದರೆ, ತಮ್ಮ ಪ್ರವಾಸ ಕಾಲದಲ್ಲಿ ತಮ್ಮ ಮನೆಯಲ್ಲಿ ಇರುವ ಕೆಲಸದವರನ್ನೂ ಕರೆದುಕೊಂಡು ಹೋಗುತ್ತಾರೆ ಮತ್ತು ಅವರನ್ನು ತಮ್ಮದೇ ಕೊಠಡಿಯಲ್ಲಿ ಉಳಿಸಿಕೊಳ್ಳುತ್ತಾರೆ!!. ಈ ಬಗ್ಗೆ ಕೆಲಸದವರನ್ನು ಕೇಳಿದಾಗಲೂ ಕಣ್ತುಂಬಿ ಧನ್ಯತೆ ಮೆರೆಯುತ್ತಾರೆ. ಅವರೂ ನಮ್ಮ ಹಾಗೇ, ನನಗಾರೂ ಮೇಲು ಕೀಳುಗಳಿಲ್ಲ ಎಂದು ಗೌರಿ ಪೈ ಅವರು ಈ ಸಂದರ್ಭದಲ್ಲಿ ನಗುತ್ತಾ ಮಾತು ಮರೆಸುತ್ತಾರೆ!!

ಗೌರಿ ಪೈ ಸದಾ ಕಾಲ ಸಮಾಜದ ಕಣ್ಣಾದವರು!. ನೇತ್ರ ದಾನ ಮತ್ತು ಶಿಬಿರಗಳ ಬಗ್ಗೆ ಇವರಿಗೆ ಅತೀವ ಆಸಕ್ತಿ. ಈ ವರೆಗೆ ಸುಮಾರು 476ಕ್ಕೂ ಮಿಕ್ಕ ನೇತ್ರಚಿಕಿತ್ಸಾ ಶಿಬಿರಗಳನ್ನು


ಆನಂದಕ್ಕೆ ಉದಾಹರಣೆ.

ಸದುಪಯೋಗಪಡಿಸಿಕೊಳ್ಳುವ ಪದ್ಧತಿ ಮೆರೆದಿದ್ದಾರೆ. 'ಗೋಕುಲ' ಎಂಬ ಹೆಸರಿನಲ್ಲಿ ಕೊಟ್ಟಿಗೆಯನ್ನು ಕಟ್ಟಿ, ಅಲ್ಲಿ ಹತ್ತಾರು ಹಸುಗಳನ್ನೂ ಸಾಕುತ್ತಿದ್ದಾರೆ. ಈ ಮೂಲಕ ಗೋ ಸೇವೆ ಮಾಡುತ್ತಾ, ಅವುಗಳಿಂದ ಬರುವ ಹಾಲು, ಹಾಲಿನ ಉತ್ಪನ್ನಗಳನ್ನು ಮಾರಿ, ಅದರ ಆದಾಯವನ್ನು ಆಶ್ರಮದ ಸೇವಾ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದಾರೆ. ಇದರೊಂದಿಗೆ ಸ್ಥಳೀಯರಿಗೆ ನೆರವಾಗುವಂತೆ ಹಪ್ಪಳ, ಸಂಡಿಗೆಗಳಂತ ತಿನಿಸುಗಳನ್ನು ತಯಾರಿಸಿ, ಅದರಿಂದ ಬರುವ ಆದಾಯದ ಪ್ರತೀ ಪಾಲನ್ನೂ ಆಶ್ರಮಕ್ಕೆ ಬಳಸುತ್ತಿದ್ದಾರೆ.

ಆನಂದಾಶ್ರಮದಲ್ಲಿ ಅನೇಕ ಉತ್ಸವಗಳನ್ನೂ ಆಯೋಜಿಸುತ್ತಾರೆ. ಸ್ವಾತಂತ್ರ್ಯೋತ್ಸವ, ರಕ್ಷಾ ಬಂಧನ, ಕೃಷ್ಣ ಜನ್ಮಾಷ್ಟಮಿ, ಗೋಪೂಜೆ, ಮಹಾ ಶಿವರಾತ್ರಿ, ದೀಪಾವಳಿ, ರಾಮನವಮಿ ಹೀಗೆ ಅನೇಕ ಹಬ್ಬಗಳನ್ನು ಆಚರಿಸುತ್ತಾರೆ. ಎಲ್ಲಕ್ಕೂ ಕಳಶವಿಟ್ಟಂತೆ ಪ್ರತೀ ವರ್ಷ ಅಕ್ಟೋಬರ್ 1ರಂದು ಅಂತಾರಾಷ್ಟ್ರೀಯ ವೃದ್ಧರ ದಿನಾಚರಣೆಯನ್ನೂ ಆಯೋಜಿಸುತ್ತಾರೆ. ಈ ದಿನದಂದು ಹಿರಿಯರಿಗಾಗಿಯೇ ವಿಶೇಷವಾಗಿ ವೈದ್ಯಕೀಯ ಶಿಬಿರದಂತ ಅಗತ್ಯ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡು, ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಆಯೋಜಿಸುತ್ತಾರೆ. ಇದು ಆಶ್ರಮ ವಾಸಿಗಳ ಜೊತೆಗೆ ಸಾರ್ವಜನಿಕರಿಗೂ ವಿಶೇಷ ಆಸಕ್ತಿಯಿಂದ ಕಾಯುವ ದಿನವಾಗಿ ಇಂದು ದಾಖಲಾಗಿದೆ. ಈ ದಿನ ಸಮಾಜಸೇವೆ ಮಾಡುತ್ತಿರುವ ಇಬ್ಬರು ಗಣ್ಯರನ್ನು ಸನ್ಮಾನಿಸುವ ಪರಿಪಾಠವನ್ನೂ ಹೊಂದಿದ್ದಾರೆ.

ನಿಮ್ಮ ಬದುಕಿನಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳು ಯಾರು ಎಂದರೆ ಕ್ಷಣ ಕಾಲ ಸುಮ್ಮನಾಗುವ ಗೌರಿಯವರು, ಇನ್ಫೋಸಿಸ್ ಫೌಂಡೇಶನ್‌ನ ಸುಧಾ ಮೂರ್ತಿ, ಬೈಲೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ವಿನಾಯಕಾನಂದ ಮಹಾರಾಜ್, ಮುಕ್ತಾನಂದ ಸ್ವಾಮೀಜಿ, ರಾಮಕೃಷ್ಣ ಮಠ, ಸುಬ್ರಹ್ಮಣ್ಯ ಸ್ವಾಮೀಜಿ, ಮಲ್ಲಾಡಿ ಹಳ್ಳಿ ವಿ.ಶ್ರೀ ರಾಘವೇಂದ್ರ ಸ್ವಾಮೀಜಿ, ಪ್ರೋಲ್ಯಾರ್ಟ್ ಫೌಂಡೇಶನ್ ಮುಂಬಯಿ ಇಲ್ಲಿನ ಶ್ರೀ ಶ್ರೀನಾಥ್, ಅಮೇರಿಕಾದಲ್ಲಿರುವ ರಮೇಶ್ ಕಾಮತ್, ಪ್ರೊ. ವಿನಾಯಕ್ ಕುಡ್ವಾ, ಗೋಪಾಲ್ ಭಂಡಾರ್ಕರ್, ಪ್ರೊ.ಡಾ.ಮಾಲತಿ ಭಟ್ ಮತ್ತು ಹತ್ತಾರು ಅಜ್ಜನವರನ್ನು ನೆನಪಿಸಿಕೊಳ್ಳುತ್ತಿರುತ್ತಾರೆ. ಇವರೊಂದಿಗೆ ಮೈಸೂರಿನ ರಘುನಾಥ ಮತ್ತು ಹೇಮಲತಾರನ್ನೂ ನೆನೆಯಲು ಮರೆಯುವುದಿಲ್ಲ.

✍ ಅರೆಹೊಳೆ



ಊರ್ಧ್ವಮುಖೀ ಗೌರಿ ಪೈ

– ಪಿ. ಪುರಂದರ ಭಟ್

ಸೌಜನ್ಯ, ಆತ್ಮೀಯತೆ, ಸಹೃದಯತೆ, ನೆರವು ನೀಡುವ ಒಲವುಗಳೆಲ್ಲ ಶಿಷ್ಟ ಮನೋಧರ್ಮದ ವಿಸ್ತರಣಗಳು. ಹಾಗೆಯೇ ನ್ಯಾಯನಿಷ್ಠೆ, ಅನ್ಯಾಯವನ್ನು ಖಂಡಿಸುವ ಛಾತಿ ತನ್ನ ಅನುಭವಕ್ಕೆ ತಾನು ಪ್ರಾಮಾಣಿಕವಾಗಿ ಇರುವಿಕೆ ಇತ್ಯಾದಿಗಳು ವ್ಯಕ್ತಿತ್ವವನ್ನು ಔನ್ನತ್ಯಕ್ಕೊಯ್ಯುವ ಕೀಲಾಂಶಗಳು. ಇವುಗಳನ್ನು ಡಾ. ಗೌರಿ ಪೈಗಳಿಂದ ಜೀರ್ಣಿಸಿದಿರುವ ಗುಣಗ್ರಾಹಿತನ, ಸಾಮಾಜಿಕರು ಪೈಗಳವರಿಗೆ ಒಪ್ಪಿಸುವ ಸಹಜ ಅಭಿನಂದನೆ.

ಗೌರಿ ಪೈಗಳವರು ವಣಿಕವರ್ಗದಲ್ಲಿ ಹುಟ್ಟಿದವರು ಎಂಬ ಕಾರಣಕ್ಕೆ ವೈಶ್ಯ ವೃತ್ತಿಯನ್ನೇ ಅವಲಂಬಿಸಿರಬೇಕಾಗಿಲ್ಲ ಎನ್ನುವುದು ಪರಾಶಕ್ತಿಯ ಇರಾದೆಯಾಗಿರಬೇಕು; ವೈದ್ಯೆಯಾದರು. ಪರಾರ್ಥ ಪೈಗಳವರ ವೃತ್ತಿ ಪ್ರವೃತ್ತಿಗಳಲ್ಲಿ ವ್ಯಕ್ತವಾಗಿರುವುದೇ ಅವರ ಅತ್ಯಂತ ಅಮೂಲ್ಯ ಸಾಮಾಜಿಕ ಕೊಡುಗೆ. ಮನುಕುಲ ಸಂಜಾತರಿಗೆ ಎರಡು ಜೌಟ್ಟಿಕ ಚೇಷ್ಟೆ. ಮುಚ್ಚಿಟ್ಟುಕೊಳ್ಳುವ ಮತ್ತು ಪ್ರಕಟಗೊಳ್ಳುವ ದ್ವೈತಿಗಳವರು. ಪ್ರತಿಭೆ ಸೂಕ್ಷ್ಮ ಸಂವೇದನೆಯ ಫಲಾನುಭವಿ. ನಮ್ಮ ವೈದ್ಯೆಯೊಳಗೊಬ್ಬಾಕೆ ಕಲಾಕುಶಲೆ, ಚಿತ್ರಾಂಗಿ ಅವತರಿಸಿಯೇ ಬಿಟ್ಟಳು. ಸಾಂತ್ವನದ ಸಂಜೀವಿನಿ ಅಂದಮೇಲೆ ಡಾ. ಗೌರಿ ಪೈಗಳ ಭವ-ಭಾವ ವರ್ಣಮಯವಾಗುವುದು ಪ್ರಕೃತಿಯ ನಿಯಮ.

ಕೊನೆಗೆ ಹೇಳಬೇಕಾದದ್ದು-

ಪುತ್ತೂರು ಕೊಂಬೆಟ್ಟು ಪ್ರೌಢ ಶಾಲೆಯಲ್ಲಿ ನಾನು ಗೌರಿ ಪೈಗಳ ಸಹಪಾಠಿ. ಮೊದಲ ಬಾರಿಗೆ ಅವರಲ್ಲಿ ಮಾತನಾಡಿದ್ದು ಉಡುಪಿಯಲ್ಲಿ. ನಾನು ಕಾನೂನು ಪದವಿ ಗಳಿಕೆಯ ವಿದ್ಯಾರ್ಥಿ ಮತ್ತು ಅವರು ಮಣಿಪಾಲದಲ್ಲಿ ವೈದ್ಯಕೀಯ ವ್ಯಾಸಂಗಿಯಾಗಿದ್ದಾಗ.

ಎಂಜಿನಿಯರಿಂಗ್ ಕಾಲೇಜಿನ ರಂಗಮಂಟಪ 'ಗಂಡ್ಸಲ್ಲೇ ಗಂಡ್ಸು' ನಾಟಕ. ನನ್ನದು ನಾಯಕನ ಪಾತ್ರ. ನಾಟಕ ಮುಗಿದ ಬಳಿಕ ಸ್ಟೇಜಿನ ಬಳಿ ಬಂದು ಅವರು "ನೀವು ಪುರಂದರ ಭಟ್ರಲ್ವೋ?" ಅಂತ ಕೇಳಿದರು. ನಾನು "ಹೌದು" ಅಂದೆ. ನಾಟಕದ ಬಗ್ಗೆ "ಒಳ್ಳೆಯದಾಯಿತು" ಅಂತ ಹೇಳಿದರು. ಪ್ರೇಕ್ಷಕರ ಸಮೂಹದಲ್ಲಿ ಅವರಿದ್ದದ್ದು ನನ್ನ ಗಮನಕ್ಕೆ ಬಂದಿರಲಿಲ್ಲ. ನಿಕಟವರ್ತಿಯಾದದ್ದು 1970ರಲ್ಲಿ. ನಾನು ವಕಾಲತ್ ಪ್ರಾರಂಭಿಸಿದ ಬಳಿಕ. ಕೆಲವು ವರ್ಷಗಳ ಹಿಂದೆ ಹಿರಿಯ ನಾಗರಿಕರ ದಿನಾಚರಣೆಯಂದು. ಆನಂದಾಶ್ರಮದಲ್ಲಿ ಅವರಿಂದ ನನಗೆ ಗೌರವಾಭಿನಂದನೆ ಸಂದಿತು. ಧನ್ಯತಾಭಾವಕ್ಕೆ ಮತ್ತೊಂದು ಕರತಾಡನ ದಕ್ಕಿದಂತಾಯ್ತು. ಇದೀಗ ಅವರ ಸಹಸ್ರಚಂದ್ರ ದರ್ಶನಾವಸರದಲ್ಲಿ ಪ್ರೀತ್ಯಾದರ ಸಹಿತ ದೀರ್ಘಾಯುಷ್ಯ ಶುಭಕರವಾಗಿರಲೆಂಬ ಸದಾಶಯಾಭಿನಂದನೆ ನನ್ನದು.



ಯುವಕರಿಗೆ ಗೌರಿ ಪೈ ಆದರ್ಶ

- ಸ್ವಾಮಿ ಜಿತಕಾಮಾನಂದಜೀ ಮಹಾರಾಜ್
ಅಧ್ಯಕ್ಷರು, ಶ್ರೀ ರಾಮಕೃಷ್ಣ ಮಠ, ಮಂಗಳೂರು

[illegible]

[illegible]

[illegible]

[illegible]

[illegible]

ಸಮಾಜದಲ್ಲಿ ಸುಸಂಸ್ಕೃತನಾಗಿ ಬದುಕುವುದು ಮನುಷ್ಯನ ಕರ್ತವ್ಯ. ಅದಕ್ಕೆ ಆಧ್ಯಾತ್ಮಿಕ ಮತ್ತು ಸಮಾಜ ಸೇವೆ ನೆರವಾಗುತ್ತದೆ. ಇದನ್ನೇ ಗಟ್ಟಿಯಾಗಿ ನಂಬಿರುವವರು ಇವರು. ಹಾಗಾಗಿಯೇ ಇವರದ್ದು ಸದಾ ಕಾಲ ತನ್ನ ಸುತ್ತಲಿನ ಪ್ರಪಂಚಕ್ಕಾಗಿ ಚಿಂತಿಸುತ್ತಾ, ಆ ಸೇವೆಯಲ್ಲೇ ತಲ್ಲೀನರಾಗಿರುವ ವಿಶಿಷ್ಟ ವ್ಯಕ್ತಿತ್ವವಾಗಿ ಯೋಗಿಯಂತಹ ಜೀವನ ಪ್ರಾಪ್ತವಾಗಿದೆ.

ಸ್ವಾಮೀ ವಿವೇಕಾನಂದರೂ ಒಂದು ವಿಶೇಷ ಧ್ಯೇಯವಾಕ್ಯವನ್ನು ಕೊಟ್ಟಿದ್ದಾರೆ. ಆಧ್ಯಾತ್ಮಿಕ ಉನ್ನತಿಗಾಗಿ ಮನುಷ್ಯ ಜೀವಿಸಬೇಕು. ಶ್ರೇಷ್ಠ ಋಷಿಮುನಿಗಳು, ಹಿರಿಯರೂ ಇದನ್ನೇ ಹೇಳಿದ್ದಾರೆ. ಅಂತಹ ಆಧ್ಯಾತ್ಮಿಕ ಉನ್ನತಿಗೆ ಮನುಷ್ಯ ಮಾತ್ರನಿಗೆ ಸದಾ ದೈವದ ಬಲ ಇರಬೇಕು. ಮನೋಬಲ ಬೇಕು. ಜಗತ್ತಿಗೇ ಹಿತವಾಗುವ ಹಾಗೆ ಮನುಷ್ಯ ಜೀವಿಸಬೇಕು. ಆಗ ಮಾತ್ರ ಬದುಕು ಸಾರ್ಥಕ. ಇದನ್ನು ನಾವು ಗೌರಿ ಪೈ ಅವರಲ್ಲಿ ನೋಡಬಹುದು. ಆಧ್ಯಾತ್ಮಿಕ ಮುಖಿ, ಸಾಮಾಜಿಕ ಕಳಕಳಿ ಇವರಲ್ಲಿದೆ. ೮೦ರ ವಯಸ್ಸಿನಲ್ಲೂ ಸದಾ ಚಟುವಟಿಕೆಯಲ್ಲಿರುವ ಇವರಿಗೆ ಆ ಶಕ್ತಿ ಎಲ್ಲಿಂದ ಬಂತು..? .... ಆಧ್ಯಾತ್ಮಿಕ, ಸಾಮಾಜಿಕ ಕಳಕಳಿಗಳನ್ನು ಸ್ಪಷ್ಟವಾಗಿ ಅರಿತು ಜೀವಿಸುತ್ತಿರುವುದರಿಂದ ಈ ಶಕ್ತಿ ಬಂದಿದೆ. ಭಗವಂತನ ಕೃಪೆ–ಆಶೀರ್ವಾದ ಇವರಿಗೆ ಸದಾ ಇದೆ.

ಗೌರಿ ಪೈ ಅವರ ನೂರನೇ ಹುಟ್ಟು ಹಬ್ಬಕ್ಕೂ ನಾವು ಬರಬೇಕು. ಆಗಲೂ ಈಗಿರುವ ಇದೇ ಚಟುವಟಿಕೆ, ಲವಲವಿಕೆ ಇವರಲ್ಲಿರಬೇಕು. ನಾನು ಸದಾ ಕಾಲ ಹೆಚ್ಚಾಗಿ ವಿಶ್ವಾಸ, ಅಭಿಮಾನದಿಂದ ಕಾಣುವುದು ಯುವ ಜನತೆಯನ್ನು. ಗೌರಿ ಪೈ ಅವರ ಈ ಆದರ್ಶವನ್ನು ನಮ್ಮ ಯುವ ಜನತೆ ಅನುಸರಿಸಬೇಕು. ಈ ಅಭಿನಂದನಾ ಸಮಾರಂಭ ಅವರಿಗೆ ಪ್ರೋತ್ಸಾಹ, ಸ್ಫೂರ್ತಿ ನೀಡಬೇಕು – ನೀಡುತ್ತದೆ ಎಂಬ ವಿಶ್ವಾಸ ನನ್ನದು. ಭಗವಂತನಲ್ಲಿ ಅದನ್ನೇ ಪ್ರಾರ್ಥಿಸುತ್ತೇನೆ. ಇವರ ಸಮಾಜದ ಮೇಲಿನ ಕಳಕಳಿ, ಪ್ರೇಮ ಯುವ ಜನತೆಗೆ ಸ್ಫೂರ್ತಿ ಕೊಡಲೆಂದು ಪ್ರಾರ್ಥಿಸುತ್ತೇನೆ.

ಗೌರಿ ಪೈ ಅಭಿನಂದನಾ ಸಮಾರಂಭ ಸಮಾಜಕ್ಕೊಂದು ಮಾದರಿಯಾಗಿದೆ. ದೇವರು ಎಲ್ಲರಿಗೂ ಒಳಿತನ್ನುಂಟು ಮಾಡಲಿ.

ನಮಸ್ಕಾರಗಳು

ಲೋಕಾ ಸಮಸ್ತಾ ಸುಖಿನೋ ಭವಂತು

21.08.2018 ರಂದು ನಡೆದ ಗೌರಿ ಪೈ 80 ಅಭಿನಂದನಾ ಸಮಾರಂಭದಲ್ಲಿ ಭಾಷಣದ ರೂಪಾಂತರ



ದೈವತ್ವಕ್ಕೇರಿದ ಡಾ. ಗೌರಿ ಪೈ

✍ ಸ್ವಾಮೀ ವಿನಾಯಕಾನಂದಜೀ ಮಹಾರಾಜ್
ರಾಮಕೃಷ್ಣ ಆಶ್ರಮ, ಮೈಸೂರು

[illegible]

ಎಂದದ್ದು.

ಇಂದು ಗೌರಿ ಪೈ ಅವರಿಗೆ 80 ತುಂಬಿದೆ. ನಾವೆಲ್ಲಾ ಸೇರಿ ಅವರನ್ನು ಅಭಿನಂದಿಸಿದ್ದೇವೆ. ಹಾಗೆಂದು ಇದು ಕೇವಲ 80 ತುಂಬಿದ್ದಕ್ಕೆ ನೀಡಿದ ಅಭಿನಂದನೆಯೇ? ಖಂಡಿತಾ ಅಲ್ಲ. ಇದು ಅವರ ನಿಸ್ವಾರ್ಥ ಜೀವನದಲ್ಲಿ ಸಮಾಜಕ್ಕೆ ನೀಡಿದ ಅಪರಿಮಿತ ಕೊಡುಗೆಗಳಿಗೆ ಸಮಾಜದ ಭಾಗವಾಗಿ ನಾವು ನೀಡುತ್ತಿರುವ ಪುಟ್ಟ ಕೃತಜ್ಞತೆ. ಅಷ್ಟೇ ಎಂಬುದು ನನ್ನ ಭಾವನೆ-ನೀವೂ ಇದನ್ನೊಪ್ಪುತ್ತೀರಿ ಎಂದುಕೊಂಡಿದ್ದೇನೆ.


ಬದುಕು, ಬಾಳು, ಜೀವನ ಎಂಬುದು ಒಂದಕ್ಕಿಂತ ಒಂದು ಭಿನ್ನ. ನಾಯಿಯೂ ಬದುಕುತ್ತದೆ. ಅದು ಬದುಕು!. ಬಾಳುವುದು ಎಂದರೆ ನಾಲ್ಕು ಜನರೊಂದಿಗೆ ಬದುಕುವುದು-ಅಷ್ಟೇ! ಆದರೆ ಈ ಜೀವನ ಎಂಬುದಿದೆಯಲ್ಲ, ಇದನ್ನು ಸಮಗ್ರವಾಗಿ ಸಮಾಜಕ್ಕೆ ಅರ್ಪಿಸಿಕೊಂಡ ಹೆಗ್ಗಳಿಕೆಯ ಪ್ರತಿರೂಪ!. ಗೌರಿ ಪೈ ಅವರದ್ದು ಜೀವನ. ಈ ಧನ್ಯತೆ ಅವರದ್ದು ಮತ್ತು ಅವರನ್ನು ಅಭಿನಂದಿಸುವ ಧನ್ಯತೆ ನಮ್ಮೆಲ್ಲರದ್ದು. ಕೇವಲ ಸಮಾಜಕ್ಕಾಗಿ. ತನ್ನೆಲ್ಲವನ್ನೂ ತ್ಯಾಗ ಮಾಡಿ, ಮಮತಾಮಯಿಯಾಗಿ ಆಕೆ ಜೀವಿಸಿದ್ದಾರೆ-ಜೀವಿಸುತ್ತಿದ್ದಾರೆ! ಇದು ನಮ್ಮ ಭಾಗ್ಯ. ಈ ಸೌಭಾಗ್ಯವನ್ನು ನಮಗೆ ನೀಡಿದ ಗೌರಿ ಪೈ ಅವರಿಗೆ ಧನ್ಯವಾದ.

ಪ್ರತಿಯೊಬ್ಬರಲ್ಲೂ ಪಶು, ಮಾನವ ಮತ್ತು ದೈವತ್ವ ಭಾವ ಇರುತ್ತದೆ. ನಮ್ಮೊಳಗಿನ ಪಶುಭಾವ ಹೋಗಬೇಕು. ಮಾನವ ಭಾವವನ್ನೂ ನಾವು ಪಾರು ಮಾಡಬೇಕು - ದೈವಭಾವ ಮುಟ್ಟಬೇಕು. ಇದಕ್ಕೆ ಮಾನವೀಯತೆನ್ನು ಅಳವಡಿಸಿಕೊಂಡಿರುವ ಜೀವನವೇ ಮುಖ್ಯ ದಾರಿ-ಇಂತಹ ದೈವತ್ವಕ್ಕೇರಿದವರು ಗೌರಿ ಪೈ-ಅಭಿನಂದನೆಗಳು ಅವರಿಗೆ.

ಬದುಕು ಅನೇಕ ಪಾಪಗಳಿಂದಲೂ ತುಂಬಿಕೊಂಡಿದೆ. ಕಷ್ಟ ಪಡದೇ ಧನ ಸಂಗ್ರಹಕ್ಕಿಳಿಯುವುದು ಪಾಪ. ಸರಿ ತಪ್ಪುಗಳ ಪರಿಜ್ಞೆ ಇಲ್ಲದೇ ಭೋಗದಲ್ಲಿರುವುದು ಪಾಪ. ಸಂಸ್ಕಾರ ಇಲ್ಲದ ಜ್ಞಾನ ಪಾಪ. ಚಾರಿತ್ರ್ಯವಿಲ್ಲದ ಜೀವನ ಅನರ್ಥ. ನೈತಿಕತೆ ಇಲ್ಲದ ವ್ಯಾಪಾರವೂ ಪಾಪ. ತ್ಯಾಗವಿಲ್ಲದ ಧರ್ಮವೂ ಪಾಪ. ಅಮಾನವೀಯ ವಿಜ್ಞಾನವೂ ಪಾಪ. ತತ್ವಾದರ್ಶಗಳಿಲ್ಲದ ರಾಜಕೀಯ ಮಹಾ ಪಾಪ.....ನಮ್ಮ ಹೃದಯ ಬೆಳೆಯಬೇಕು. ಬೇರೆಯವರ ಬದುಕು ಹಸನಾಗಬೇಕು. ಇದು ನಮ್ಮ ಆದರ್ಶವಾಗಬೇಕು ಎಂಬ ಜೀವನ ರೂಪಿಸಿಕೊಂಡ ಗೌರಿ ಪೈ, ಪಾಪ ಎಂಬ ಯಾವುದಕ್ಕೂ ಅವಕಾಶವಿಲ್ಲದ ದೊಡ್ಡ ಚೈತನ್ಯವಾಗಿ ಜೀವಿಸಿದ್ದಾರೆ. ಇವರು ನಮಗೆ ಆದರ್ಶ.

ಈ ವಿಶೇಷ ಸಂದರ್ಭದಲ್ಲಿ ಗೌರಿ ಪೈ ಅವರನ್ನು ಅಭಿನಂದಿಸಿ, ನಾವೂ ಒಂದು ಪ್ರತಿಜ್ಞೆ ಮಾಡಬೇಕು. ಜಗತ್ತಿನ ಒಳಿತಿಗಾಗಿ ನಾವೂ ಬದ್ಧರಾಗುತ್ತೇವೆ. ಬದುಕು, ಬಾಳು ಎಂಬುದಕ್ಕೆ ಭಿನ್ನವಾಗಿ ಜೀವಿಸುತ್ತೇವೆ. ಈ ಪ್ರತಿಜ್ಞೆಯನ್ನು ಕೈಗೊಳ್ಳುವ ಮೂಲಕ ಮತ್ತು ಹಾಗೇ 'ಜೀವಿಸುವ' ಮೂಲಕ, ಗೌರಿ ಪೈ ಅವರಿಗೆ ನಮ್ಮದು ನಿಜಾರ್ಥದ ಅಭಿನಂದನೆಯಾಗಲಿ. ಎಲ್ಲರಿಗೂ ಶುಭವಾಗಲಿ.

21.08.2018 ರಂದು ನಡೆದ ಗೌರಿ ಪೈ 80 ಅಭಿನಂದನಾ ಸಮಾರಂಭದಲ್ಲಿ ಮಾಡಿದ ಭಾಷಣದ ರೂಪಾಂತರ



ಆದರ್ಶಕ್ಕೆ ಪರ್ಯಾಯ ಹೆಸರು–ಡಾ. ಗೌರಿ ಪೈ

ಡಾ. ಎಂ. ಶಾಂತಾರಾಮ ಶೆಟ್ಟಿ
ತೇಜಸ್ವಿನಿ ಆಸ್ಪತ್ರೆ, ಮಂಗಳೂರು

[illegible]

[illegible] ಹೆಮ್ಮೆಗೆ ಕಾರಣ.

[illegible]


ಾಯಿಯ ಹೆಸರಿನಲ್ಲಿ ಆಸ್ಪತ್ರೆ ಆರಂಭಿಸಿದ್ದು ಸಣ್ಣ ತ್ಯಾಗವಲ್ಲ!. ಕೈ ತುಂಬಾ ಹಣ ಗಳಿಸಿ, ಷಾರಾಮಿ ಜೀವನದ ಎಲ್ಲಾ ಸಾಧ್ಯತೆಗಳನ್ನು ತಳ್ಳಿ ಬಂದು ಪುತ್ತೂರಿನಲ್ಲಿ ನೆಲೆಸಿದ್ದು ಹುದೊಡ್ಡ ತ್ಯಾಗ-ಆದರ್ಶ. ಇದನ್ನು ಮಾಡಲು ಗಟ್ಟಿ ಮನಸ್ಸೇ ಬೇಕು. ಡಾ.ಕೋಟ ಿವರಾಮ ಕಾರಂತರು ಹಾಗೂ ಡಾ.ಟಿ.ಎಂ.ಎ. ಪೈ ಅವರ ಹಸ್ತದಲ್ಲಿ ಉದ್ಘಾಟನೆಗೊಂಡ ಆಸ್ಪತ್ರೆ ಗಿರಿಜಾ ಕ್ಲಿನಿಕ್. ಅದರ ಮುಂದುವರಿದ ಭಾಗವೆಲ್ಲಾ ಕೇವಲ ಸಮಾಜ ಸೇವಾ ೆಲಸಗಳು! ತಮ್ಮ ಪ್ರತೀ ಹೆಜ್ಜೆಯಲ್ಲೂ ಸಮಾಜದ ನೋವು ನಿವಾರಿಸುತ್ತಾ ಸೇವೆಯ ಸಾರ್ಥಕ್ಯವನ್ನೇ ಕಂಡವರು- ಸಮಾಜಕ್ಕೆ ಏನಾದರೂ ಕೊಡುತ್ತಿರು ಎಂಬುದನ್ನೇ ಅನುಸರಿಸಿದವರು. ಜಾರ್ಜ್ ಬರ್ನಾಡ್ ಷಾ ಹೇಳಿದಂತೆ ನಾವು ನಮ್ಮೊಂದಿರುಗುವವರ ಜೀವನವನ್ನು ಬೆಳಗುತ್ತಲೇ ಇರುವ ಬೆಳಕಾಗಬೇಕು ಎಂಬ ಮಾತಿನಂತೇ ಬದುಕಿದವರು ಗೌರಿ ಪೈ. ಓರ್ವ ಹಣ ಗಳಿಸುವ ವೈದ್ಯೆಯಾಗದೇ ಸಮಾಜಮುಖಿ ಚಿಂತನೆಗಳೊಂದಿಗೆ ಜೀವಿಸುತ್ತಿರುವವರು ಇವರು.

ಎಲ್ಲಾ ಗ್ರಂಥಗಳಲ್ಲೂ ಶ್ರೇಷ್ಠ ಗ್ರಂಥ ಮಹಾಭಾರತ. ಅದರಲ್ಲಿ ಅರಣ್ಯ ಪರ್ವದಲ್ಲಿ ಪಾಂಡವರು ಯಕ್ಷನ ರಾಜ್ಯಕ್ಕೆ ಹೋಗಿ, ನಾಲ್ವರು ಸಹೋದರರು ತಮ್ಮ ಅಂತ್ಯ ಕಂಡಾಗ, ಧರ್ಮರಾಯ ಯಕ್ಷ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ-ಇದು ವ್ಯಕ್ತಿಯೊಬ್ಬನ ಆದರ್ಶಮಯ ಜೀವನಕ್ಕೆ ಅಗತ್ಯವಾದ ಪ್ರಶ್ನೋತ್ತರ ಭಂಡಾರ!. ಯಕ್ಷ ಕೇಳಿದ ಒಂದು ಪ್ರಶ್ನೆ 'ಓರ್ವ ವ್ಯಕ್ತಿ ಶ್ರೇಷ್ಠನಾಗಬೇಕಾದರೆ ಇರಬೇಕಾದ ಪ್ರಮುಖ ಗುಣಗಳೇನು' ಎಂದು. 'ಯಾವ ವ್ಯಕ್ತಿ, ಸ್ವಾರ್ಥ, ಅಸೂಯೆ, ದ್ವೇಷ ರಹಿತನಾಗಿ ಬೇರೆಯವರ ಬಗ್ಗೆ ಕೇವಲ ಪ್ರೀತಿ ಹೊಂದಿದವನಾಗಿರುತ್ತಾನೋ ಆತ ಶ್ರೇಷ್ಠ ವ್ಯಕ್ತಿ' ಎಂದು ಧರ್ಮರಾಯ ಉತ್ತರಿಸುತ್ತಾನೆ-ಇದು ಗೌರಿ ಪೈ ಅವರಿಗೆ ಅನ್ವಯ! ಇಂತಹ ಸಾರ್ಥಕ ಜೀವನ ನಡೆಸಿದ ಗೌರಿಯವರ ಬಗ್ಗೆ ನಾನೂ ಓರ್ವ ವೈದ್ಯನಾಗಿ ಹೆಮ್ಮೆ ಪಡುತ್ತೇನೆ.

ಇವರೊಂದು, ದೇವರು ನಮಗಾಗಿ ಕರುಣಿಸಿದ ಅದ್ಭುತ ವರ-ಮಾನವ ಸಮಾಜಕ್ಕೆ ಉಡುಗೊರೆ!. ದೇವರಿಗೆ ಈ ವಿಷಯದಲ್ಲಿ ನಾವು ಧನ್ಯವಾದ ಹೇಳಲೇ ಬೇಕು. ಇವರ ಕಾಲದಲ್ಲಿ ನಾವಿದ್ದೇವೆ ಎಂಬುದೇ ನಮಗೆ ಹೆಮ್ಮೆ. ಇವರಿಂದಾಗಿ ನಾವು ಸಮಾಜಸೇವೆ ಎಂದರೇನು, ಮಾನವೀಯತೆ ಎಂದರೇನು ಎಂಬುದನ್ನು ತಿಳಿದುಕೊಳ್ಳಬಹುದು. ನಾವು ಜೀವನದಲ್ಲಿ ಏನೇ ಮಾಡಿದರೂ ಅಲ್ಲಿ ಸ್ವಾರ್ಥದಿಂದ ಮಾಡುತ್ತೇವೆ-ಆದರೆ ಇವರು ಇದೆಲ್ಲವನ್ನೂ ಮೀರಿ ನಿಂತವರು-ಸಂತನಂತವರು!. ಅಂತಹ ದೊಡ್ಡ ವ್ಯಕ್ತಿತ್ವಕ್ಕೆ ನೂರ ಒಂದು ವರ್ಷವನ್ನು ದೇವರು ಕರುಣಿಸಲಿ. ನಾವೂ ಅದರ ಭಾಗವಾಗುವ ಆಶಯ ನಮ್ಮದು.

ಸರ್ವೇ ಜನಾ ಸುಖಿನೋ ಭವಂತು-ಸರ್ವೇ ಸಂತು ನಿರಾಮಯ, ಡಾ. ಗೌರಿ ಪೈ ಅವರ ನೆರಳಲ್ಲಿ ಎಲ್ಲರೂ ಸುಖಶಾಂತಿ ಆಯುರಾರೋಗ್ಯ ನೆಮ್ಮದಿಯಲ್ಲಿರಲಿ ಎಂದು ಹಾರೈಸುತ್ತೇನೆ. ವಿಶೇಷ ಅಭಿನಂದನೆಗಳು.

21.08.2018 ರಂದು ನಡೆದ ಗೌರಿ ಪೈ 80 ಅಭಿನಂದನಾ ಸಮಾರಂಭದಲ್ಲಿ ಮಾಡಿದ ಭಾಷಣ



ತ್ಯಾಗ, ಸೇವೆ ಎಂದ ಆತ್ಮ ಸ್ವರೂಪಿ–ಡಾ. ಗೌರಿ ಪೈ

– ಡಾ. ಕಲ್ಲಡ್ಕ ಪ್ರಭಾಕರ ಭಟ್ಟ
[illegible]

ಅನೇಕ ಜನರು ಬದುಕುತ್ತಾರೆ–ಬಾಳುವುದು ಕಲಿತಿಲ್ಲ–ಜೀವನ ನಡೆಸುವುದು ಕಲಿತಿಲ್ಲ ಇದೆರಡನ್ನೂ ಮಾಡಿದ ವಿಶೇಷ ವ್ಯಕ್ತಿ–ಪುಷ್ಪದಂತೆ ಬಾಳುತ್ತಿರುವವರು ಡಾ.ಗೌರಿ ಪೈ!!

[illegible]

[illegible]

[illegible]

[illegible]

ಯಾವುದಾದರೂ ಒಂದನ್ನು ಜೀವನದ ಧ್ಯೇಯವಾಗಿಯೇ ತೆಗೆದುಕೊಳ್ಳಬೇಕು!. ಸಾಯುವ ತನಕ ಯಾವುದೋ ಕೆಲಸ ಮಾಡುವುದಕ್ಕಿಂತ ಒಂದು ಹಂತದಲ್ಲಿ ಸಮಾಜಕ್ಕೇನಾದರೂ ಮಾಡಬೇಕೆಂಬ ಸ್ಥಿತಿ ತಲುಪಿ ಆ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ಸಾರ್ಥಕತೆ.

ಅಣ್ಣಾಹಜಾರೆಯವರ ಜೀವನ ಗಮನಿಸಿ. ಅವರ ಹುಟ್ಟೂರಲ್ಲಿ ಕೇವಲ ಘಟಿಂಗರಿದ್ದರು. ಅನೇಕ ಸಲ ಇಂಥಾದ್ದೇ ಘಟಿಂಗತನದಿಂದಾಗಿ ಹಜಾರೆಯವರೂ ಪೋಲೀಸರ ಆತಿಥ್ಯ ಸ್ವೀಕರಿಸಿದ್ದರು. ಕೊನೆಗೊಮ್ಮೆ ಅವರಿಗೆ ಏನಾದರೂ ಒಳ್ಳೆಯ ಕೆಲಸ ಮಾಡಬೇಕೆನಿಸಿತು– ಸೈನ್ಯಕ್ಕೆ ಸೇರಿದರು. ಅಲ್ಲಿ ಅವರ ಜೊತೆಗಾರನೊಬ್ಬನಿಗೆ ಒಮ್ಮೆ ಗುಂಡು ತಗುಲಿ ಆತ ಸತ್ತ! ಆಗ ಇವರಿಗನಿಸಿದ್ದು, ಜೀವನ ಅಂದ್ರೆ ಇಷ್ಟೇನಾ. ನಾವ್ಯಾಕೆ ಇಷ್ಟೆಲ್ಲಾ ಒದ್ದಾಡುತ್ತೇವೆ. ಇದಕ್ಕಿಂತ ಸಾಯುವುದೇ ಮೇಲು ಅನಿಸಿತು. ಆತ್ಮಹತ್ಯೆಯ ಯೋಚನೆ ಮಾಡಿದರು.

ಅದೇ ಯೋಚನೆಯಿಂದ ಮನೆಗೆ ಬಂದರಂತೆ!. ಅಲ್ಲಿ ಅವರ ತಂಗಿಯ ಮದುವೆ ನಿಶ್ಚಿತಾರ್ಥವಾಗಿತ್ತು! – ಸರಿ. ಈ ಶುಭಕಾರ್ಯ ಮುಗಿಯಲಿ. ಮತ್ತೆ ಸಾಯುವೆ ಅಂದುಕೊಂಡರಂತೆ!

ಮದುವೆ ಮುಗಿಯಿತು. ಇನ್ನು ಸಾವೇ ಗಟ್ಟಿ ಎಂದು ಕೊಂಡು. ಒಮ್ಮೆ ಸಂತೆಯಲ್ಲಿ ಹೋಗುವಾಗ ವಿವೇಕಾನಂದರ ಒಂದು ಪುಸ್ತಕ ನೋಡಿದರಂತೆ. ಅದರಲ್ಲಿನ ಒಂದು ವಾಕ್ಯ ಅವರನ್ನು ಮತ್ತೆ ಬದಲಿಸಿತು! ಆ ವಾಕ್ಯ– ಪ್ರತೀ ಜೀವನಕ್ಕೂ ಒಂದು ಉದ್ದೇಶವಿರುತ್ತದೆ ಎಂದು!. ಇದನ್ನು ನೋಡಿದವರು. ತನ್ನ ಜೀವನಕ್ಕೂ ಏನಾದರೂ ಉದ್ದೇಶವಿರಬಹುದು ಎಂದು ಕೊಂಡವರು. ಕೆಲಸ ಬಿಟ್ಟು. ತನ್ನ ಹುಟ್ಟೂರಿಗೆ ಹೋಗಿ ಅಲ್ಲಿನ ಜನರನ್ನು ಬದಲಿಸಿದರು–ಇಡೀ ಗ್ರಾಮವನ್ನೇ ಅವರು ಬದಲಿಸಿದರು!! ಘಟಿಂಗರಿಂದ ಕೂಡಿದ್ದ ಒಂದು ಇಡೀ ಗ್ರಾಮವನ್ನು ಸುಸಂಸ್ಕೃತ ಗ್ರಾಮವಾಗಿಸಿದ ಸಾಧನೆ ಸಣ್ಣದೇನಲ್ಲ!

ಇಂತಹ ಕೆಲಸವನ್ನೇ ಮಾಡಿದವರು ಗೌರಿ ಪೈ!. ದೇವರು ನಮಗೆ ಕೊಡದ ದೃಷ್ಟಿಯನ್ನು ಗೌರಿ ಪೈ ಅವರಿಗೆ ಕೊಟ್ಟ ಪರಿಣಾಮವಾಗಿ. ಅವರೇ ಸಮಾಜದ ದೃಷ್ಟಿಯಾದರು. ಅಭಿನಂದನಾ ಸಮಾರಂಭದ ಹಿನ್ನೆಲೆಯಲ್ಲಿ ಸಮಾರಂಭದ ಸಭೆಯೊಂದನ್ನು ನಡುವಾಗ ಗೌರಿ ಪೈ ಅವರು ಸಭೆ ನೇರವಾಗಿರುವ ಹಾಗೇ ನಾನೂ ನೇರವಾಗಿದ್ದೇನೆ. ನೋಡಿ ಎಂದು ನಕ್ಕರು!. ಅದನ್ನು ನಾನು ಮನಸಾ ಒಪ್ಪುತ್ತೇನೆ. ನೇರ ನಡೆಯ. ನುಡಿಯ. ಆದರೆ ಅಷ್ಟೇ ಕಠೋರ ನಾಲಿಗೆಯ ದೊಡ್ಡ ವ್ಯಕ್ತಿ ಗೌರಿ ಪೈ–ಅರಿಶಿನ ವಿರುದ್ಧದ ಕಠೋರ ಗೌರಿ ಪೈ!. ಆದರೆ ಅಂತರಾಳದಲ್ಲಿ ಕೇವಲ ಪ್ರೀತಿ.ಆತ್ಮೀಯತೆ. ಅಷ್ಟೆ ತುಂಬಿಕೊಂಡಿರುವ ಅವರಿಗೆ ಮಾಡುತ್ತಿರುವ ಈ ಅಭಿನಂದನೆ. ಬೇರೆಯವರಿಗೂ ಆದರ್ಶವಾಗ ಬೇಕು – ಇದು ಈ

ಅಭಿನಂದನೆಯ ಉದ್ದೇಶ.

[illegible]

[illegible]

[illegible]

[illegible]

[illegible]





ನನ್ನ ಪ್ರೀತಿಯ ಗೌರಿಯಕ್ಕ

✍ ಶಕುಂತಳಾ ಟಿ. ಶೆಟ್ಟಿ
ಮಾಜಿ ಶಾಸಕಿ, ಪುತ್ತೂರು

ಡಾ. ಗೌರಿ ಪೈಯವರಿಗೂ ನನಗೂ ಸುಮಾರು 40–48 ವರ್ಷಗಳ ಪರಿಚಯ. ಪರಿಚಯ ಆತ್ಮೀಯತೆಗೆ ತಿರುಗಿದ್ದೂ ಉತ್ತಮ ಸಂದರ್ಭದಲ್ಲಿ. ನಾನು ವೈವಾಹಿಕ ಜೀವನಕ್ಕೆ ಕಾಲಿಟ್ಟು 5–6 ವರ್ಷವಾಗಿತ್ತು. ನಾನಿದ್ದುದ್ದು ಪುತ್ತೂರು ತಾಲೂಕಿನ ಪುತ್ತೂರಿನಿಂದ ಬಹಳ ದೂರದ ಹಳ್ಳಿ ಕುಂತೂರು ಗ್ರಾಮದಲ್ಲಿ. ಆಗ ವಿದ್ಯಾವಂತರು ಬಹಳ ವಿರಳ. ನನ್ನ ಮನೆ ಹಿಂದೆ ಕಾಡು, ಎದುರು ಹಾಗೂ ಸುತ್ತಲೂ ಗದ್ದೆ, ತೋಟ. ಅಲ್ಲಿಯ ನನಗೂ ಪುತ್ತೂರಿನ ಗೌರಕ್ಕನಿಗೂ ಸಂಬಂಧ ಬೆಳೆದದ್ದು ಪಕ್ಕದ ಮನೆಯಿಂದ.

ನಾನು ಬಾಣಂತಿಯಾಗಿದ್ದೆ. ಎದುರು ಮನೆಯಾಕೆ ತುಂಬು ಗರ್ಭಿಣಿ. ಮನೆ ಕಿಟಕಿಯಿಂದ ನೋಡಿದರೆ ಜಗಲಿಯಲ್ಲಿ ಕುಳಿತಿದ್ದ ಗರ್ಭಿಣಿ ಶಾಂತಳ ಕಾಲು ಊದಿಕೊಂಡು ದಪ್ಪವಾಗಿತ್ತು. ಮುಖವೆಲ್ಲಾ ಬಂಥರಾ ಕಾಣ್ತಿತ್ತು. ನಾನೇನೋ ಆಕೆಯನ್ನು ಕರೆದು 'ಡಾಕ್ಟ್ರಲ್ಲಿ ಹೋಗ್ಬೇಕಿತ್ತು' ಅಂದೆ ಆಕೆ 'ಇಲ್ಲಕ್ಕಾ' ಮಂತ್ರಿಸಿ ನೂಲು ಕಟ್ಟಿದ್ದಾರೆ ಎಂದು ಬಿಟ್ಟು. ಅವಳ ಅತ್ತೆ, ಗಂಡನಿಗೆ ಹೇಳಿದರೆ ಅವರ ನಂಬಿಕೆಗೆ ನನ್ನ ಮಾತು ಅರ್ಥವೇ ಆಗಿಲ್ಲ. ಅದೆ ಆಗ ತಾನೆ ಬಂದ ಅವಳ ಅಪ್ಪ ಅಮ್ಮ ನನ್ನ ಬಳಿ ಬಂದು 'ಎಲ್ಲಿ ಹೋಗಲಿ' ಎಂದು ಕೇಳಿದು. ನನಗಂತು ಪುತ್ತೂರಲ್ಲಿ ಇದ್ದುದು ಮಾತ್ರ ಗೊತ್ತು. ಡಾ. ಸಕಿನ ರೈ ಮತ್ತು ಡಾ. ಗೌರಿ ಪೈ ಅದೂ ನಾನು ಪರೀಕ್ಷೆಗಾಗಿ ಹೋಗಿರೋದಷ್ಟೇ. ಅದೆ ನಾವು ಹೋಗೇಕಾದರೆ ನೀವೊಂದು ಪತ್ರ ಕೊಡಬೇಕೆಂದು, ನಾನು ಕೊಟ್ಟೆ, ಅವರು ಹೋದ್ರು. ಅದೆ ಪರೀಕ್ಷೆ ಮಾಡಿದ ಡಾ. ಗೌರಿ ಪೈಯವರು ಅಪಾಯ ಸ್ಥಿತಿಯಲ್ಲಿದ್ದರೂ ನಾನು ಯಾರೆಂದೇ ಪರಿಚಯವಿಲ್ಲದಿದ್ದರೂ ನನ್ನ ಪತ್ರಕ್ಕೆ ಬೆಲೆಕೊಟ್ಟು ಆಸ್ಪತ್ರೆಯಲ್ಲಿ ದಾಖಲಿಸಿ ತಾಯಿ ಮಗು ಜೀವಂತವಾಗಿ ಉಳಿಯುವುದಕ್ಕೆ ಕಾರಣರಾದರು. ಅಂದಿನಿಂದ ಅವರ ಪರಿಚಯ ಆತ್ಮೀಯತೆಗೆ ತಿರುಗಿತು.

ನಾನೂ ಸಮಾಜಸೇವೆ, ರಾಜಕೀಯ ಹೋರಾಟಗಳಲ್ಲಿ ತೊಡಗಿದಂತೆ ಡಾ. ಗೌರಿ ಪೈ ನಾನೂ ಇನ್ನೂ ಹತ್ತಿರವಾದೆವು. ಡಾ. ಗೌರಿ ಪೈ ಗೌರಿಯಕ್ಕನಾದರು. ಮಹಿಳಾ ಒಕ್ಕೂಟದ ಅಧ್ಯಕ್ಷರಾಗಿದ್ದಾಗ ಮಹಿಳೆಯರಿಗೆ ಮಾಹಿತಿ ಶಿಬಿರ ಕೊಡಿಸ್ತಾ ಇದ್ದೆವು. ಅನಂತರದ



“ಆಲದ ಮರದಂತೆ ಗೌರಕ್ಕ”

ಸೋದರಿ ವನಿತಾ
ಬೆಂಗಳೂರು

ಗೌರಕ್ಕ ಅಂದರೆ: – ಗೌರಕ್ಕನವರ ವ್ಯಕ್ತಿತ್ವ, ವಿಶಾಲವಾದ ಬೃಹತ್ ಆಲದ ಮರದಂತೆ. ಸನಿಹ ಬಂದವರ ಹೃದಯಕ್ಕೆ ತಂಪಾದ ನೆರಳಿನ ತಾಯಿ ಮಡಿಲ ವಾತ್ಸಲ್ಯ, ತಂದೆಯ ಸುಭದ್ರ ಸುರಕ್ಷಿತತೆಯ ಅನುಭವ ಸಹಜವಾಗಿ ದೊರೆತು, ಧೈರ್ಯ, ಆತ್ಮವಿಶ್ವಾಸ, ಅಂಕುರಿಸಿ, ಜ್ಞಾನಸುಧೆಯಲ್ಲಿ ಮಿಂದು ಮಡಿಯುಟ್ಟು, ಸಮಾಜದಲ್ಲಿ ಉತ್ತಮ ದಕ್ಷ ವ್ಯಕ್ತಿಯಾಗಿ ಜೀವನ ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗುವರು. ಇಂತಹ ಸಾವಿರಾರು ಮಂದಿ ಗೌರಕ್ಕನ ಆತ್ಮೀಯ ಬಳಗದಲ್ಲಿ ನಾನೂ ಒಬ್ಬಳು ಮತ್ತು ನನಗದು ಹೆಮ್ಮೆ. ಗೌರಕ್ಕ ತಮ್ಮ ಕರ್ತವ್ಯವನ್ನು ಕುಟುಂಬಕ್ಕಷ್ಟೇ ಸೀಮಿತವಾಗಿಸದೇ ಸಮಾಜಕ್ಕೂ ವಿಸ್ತರಿಸಿ ಹಲವು ಸಾಮಾಜಿಕ ಕಾರ್ಯಗಳಿಗೆ, ಸಾಮಾಜಿಕ ಕಾರ್ಯಕರ್ತರಿಗೆ, ಪರಿವಾರದವರಿಗೆ, ಪ್ರೇರಣಾ ಶಕ್ತಿಯಾದವರು.

ನನ್ನ ಇವರ ಮಧುರ ಬಾಂಧವ್ಯ:– ಸುಮಾರು 48 ವರ್ಷಗಳ ಹಿಂದೆ ಅಂತಃ ಪ್ರೇರಣೆಗೆ ಗೌರವಿಸಿ ಸಮಾಜ ಕಾರ್ಯದೊಂದಿಗೆ ಯೋಗ ಜೀವನವನ್ನು ವ್ರತದಂತೆ ಸ್ವೀಕರಿಸಿದ ನನಗೆ ಯಾವುದೇ ರೀತಿಯ ಅನುಭವವಿರಲಿಲ್ಲ, ಮೇಲ್ಪಂಕ್ತಿ ಇರಲಿಲ್ಲ, ತಂದೆ-ತಾಯಿ, ಬಂಧು ಮಿತ್ರರ ನೈತಿಕ ಬೆಂಬಲವಿರಲಿಲ್ಲ. ಹೊಸ ರೀತಿಯ ಕಠಿಣ ಶ್ರಮ ಜೀವನ, ಹೆಜ್ಜೆ ಹೆಜ್ಜೆಗೂ ಪರೀಕ್ಷೆಗಳು, ಸಮಾಜದಿಂದ ಅನುಮಾನದ ಸಂದೇಹದ ದೃಷ್ಟಿ: ಕುತೂಹಲದ ಕಿರಿಕಿರಿ ಪ್ರಶ್ನೆಗಳು ಇವೆಲ್ಲ ಮನಸ್ಸನ್ನು ಕುಗ್ಗಿಸುವಂತೆ ಮಾಡಿದ ಸಂದರ್ಭದಲ್ಲಿ ಭಯದ ಬೇಸರದ ಮರಳುಗಾಡಿನಲ್ಲಿ ತಂಪಿನ ವಾತ್ಸಲ್ಯದ ಹಸಿರು ಮಡಿಲು ದೊರೆಯಿತು. ಆ ಪುಣ್ಯ ಮಾತೆಯರೇ– ಶ್ರೀಮತಿ ಶಾರದಾ ಪಥು, ಮೀರಕ್ಕ ಹಾಗೂ ಗೌರಕ್ಕನವರು. ಕುಸಿದು ಬೀಳುವ ಮನಕ್ಕೆ ಭದ್ರವಾಗಿ ಆಸರೆಯಾಗಿ ನಿಂತರು. ಧೈರ್ಯ ಆತ್ಮವಿಶ್ವಾಸ ತುಂಬಿದರು. ಇದೀಗ ಈ ಹಾದಿಯಲ್ಲಿ 48 ವಸಂತಗಳು ಕಳೆದಿವೆ. ಇವರ ಹಿಂದಿನ ಸ್ಫೂರ್ತಿ, ಭರವಸೆ ಇವರೇ ಎಂದರೆ

ಅತಿಶಯೋಕ್ತಿ ಅಲ್ಲ.

ಗೋರಕ್ಷನ ಮೊದಲ ಭೇಟಿ:- [illegible] ಕೊಂಡಿಯಾಗಿದೆ.

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ:- [illegible]

ಸದಾ ಉತ್ಸಾಹದ ಬುಗ್ಗೆ, ಎಲ್ಲದರಲ್ಲಿ ಆಸಕ್ತಿ:- [illegible]

ಸೇವೆಯ ವಿವಿಧ ಮುಖಗಳು:- [illegible] ಶಿಬಿರಗಳನ್ನೂ ನಡೆಸಿದವರು.

ಆನಂದಾಶ್ರಮ:- ಆನಂದಾಶ್ರಮ ಇವರ ಐದು ವರ್ಷದ ಕನಸಿನ ಕೂಸು. ನನ್ನೊಂದಿಗೆ ತಮ್ಮ ಇಂಗಿತವನ್ನು, ಆಶಯವನ್ನು ಅನೇಕ ಬಾರಿ ಹಂಚಿಕೊಂಡಿದ್ದರು. ಚಿಕ್ಕ ಮಕ್ಕಳನ್ನು ಸಹಜವಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಯೌವನದಲ್ಲಿ ಶರೀರ, ಮನಸ್ಸು ಸದೃಢವಾಗಿರುತ್ತದೆ. ಆದರೆ ವೃದ್ಧಾಪ್ಯ! ಮನುಷ್ಯನಿಗೆ ಸವಾಲಿನಂತೆ. ಅತ್ಯಂತ ಚಿಂತಾಜನಕವಾದುದು, ಹಿಂಡಿ ಹಿಪ್ಪೆ ಮಾಡುವುದು. ಆಗ ಖಂಡಿತವಾಗಿಯೂ ಆಸರೆಬೇಕು. ವೃದ್ಧರು ಸಂತೋಷದಿಂದ ನೆಮ್ಮದಿಯಿಂದ ಬಾಳಬೇಕು. ಅದಕ್ಕಾಗಿ ಆನಂದಾಶ್ರಮ! ಇವರ ಕನಸು ಈಗ ನನಸಾಗಿದೆ. ಅತ್ಯಂತ ಸುಂದರ ಪ್ರಕೃತಿಯ ತಾಣದಲ್ಲಿದ್ದು ಸುವ್ಯವಸ್ಥಿತವಾಗಿದೆ. ಪ್ರತಿ ಕ್ಷಣವೂ ಅಲ್ಲಿನ ವೃದ್ಧ ಬಂಧುಗಳ ಸಂತೋಷ ನೆಮ್ಮದಿಗೆ ಇವರ ಮನಸ್ಸು, ಹೃದಯ ಸದಾ ಮಿಡಿಯುತ್ತಿರುತ್ತದೆ. ಹಲವು ರೀತಿಯ ಸಮಾಜಕಾರ್ಯಗಳಿಗೆ, ವಿದ್ಯಾಲಯಗಳಿಗೆ, ವಿದ್ಯಾರ್ಥಿಗಳಿಗೆ ಇವರ ಸಹಾಯ ಹಸ್ತ ಸದಾ ಇರುತ್ತದೆ.

ಯೋಗ, ಆಧ್ಯಾತ್ಮ, ಭಕ್ತಿ:-ಇಷ್ಟೆಲ್ಲ ಸಮಾಜದ ಅನೇಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಯಶಸ್ಸು ಪಡೆದ ಮೂಲ ಸೂತ್ರ, ಶಕ್ತಿ ಎಂದರೆ ತಂದೆ, ತಾಯಿಯಿಂದ ಪಡೆದ ಉತ್ತಮ ಸಂಸ್ಕಾರ. ತಂದೆ ತಾಯಿಯರ ಬಗ್ಗೆ, ಹಿರಿಯರ ಬಗ್ಗೆ, ಅಪಾರ ಗೌರವ ಗೌರಕ್ಕನವರಿಗೆ. ಆಧ್ಯಾತ್ಮ, ಯೋಗ, ದೈವೀಭಕ್ತಿ, ಸತ್ಯತೆ, ಪ್ರಾಮಾಣಿಕತೆ, ಇವುಗಳು ಇವರ ಅಂತಃ ಶಕ್ತಿ, ಯೋಗ, ಪ್ರಾಣಾಯಾಮ, ಧ್ಯಾನಾದಿಗಳು, ದೇವರ ಪೂಜೆ, ಭಜನೆ ಇವರ ದೈನಂದಿನ ಕಾರ್ಯದಲ್ಲಿ ಹಾಸುಹೊಕ್ಕಾಗಿದೆ. ಸಾಕಷ್ಟು ಯೋಗ, ಆಧ್ಯಾತ್ಮ ಗ್ರಂಥಗಳ ಸಂಗ್ರಹವಿದೆ. ಸಾಕಷ್ಟು ಅಧ್ಯಯನವನ್ನೂ ಮಾಡಿದ್ದಾರೆ. ಯೋಗ, ಆಧ್ಯಾತ್ಮ ಸಾಧಕರೊಂದಿಗೆ ಆ ಬಗ್ಗೆ ಚರ್ಚಿಸಿ ಸತ್ಯ ತಿಳಿಯುವ ಬಗ್ಗೆ ಗೌರವವಿದೆ. ಪವಿತ್ರ ಸ್ಥಳಗಳಿಗೆ ಯಾತ್ರೆ ಮಾಡುವುದೂ ಇವರಿಗೆ ತೃಪ್ತಿ ಸಮಾಧಾನವನ್ನು ನೀಡಿದೆ. ಎಂದೂ ಕ್ಷಯವಾಗದ ಸ್ಫೂರ್ತಿಯ ಅಕ್ಷಯ ಚೈತನ್ಯದ ಚಿಲುಮೆ ಗೌರಕ್ಕ! ಸಹಸ್ರಾರು ಹೃದಯ ಮಂದಿರಗಳಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸಿ ಬಾಳಿಗೆ ಬೆಳಕನ್ನು ನೀಡಿದ್ದೀರಿ. ತಮ್ಮ ಈ ಸಾರ್ಥಕ ಶ್ರೀಮಂತ ಬಾಳು ಕಿರಿಯರೆಲ್ಲರಿಗೆ ಮಾರ್ಗದರ್ಶಿಯಾಗಿ ಬಾಳಿಗೆ ಭರವಸೆ ನೀಡುವ ಬಾಳಗೀತೆಯಾಗಿದೆ.



ಮರುಜನ್ಮ ನೀಡಿದ ನನ್ನ ತಾಯಿ–ಗೌರಕ್ಕ!!

ಪಿ. ಸದಾಶಿವ ಪೈ
ಪುತ್ತೂರು

ಸಂಬಂಧದಲ್ಲಿ ನಾನು ಗೌರಕ್ಕನವರಿಗೆ ಅವರ ಕೊನೆಯ ಅಣ್ಣನ ಮಗ–ಅವರೆ ನನಗವರು ಹೆತ್ತ ಅಮ್ಮನಂತೆ!

[illegible] 1998ರಲ್ಲಿ [illegible]. 2012ರ ತನಕ [illegible]

[illegible]

[illegible]


[illegible]

ನ್ನುವುದು. ಯಾರನ್ನೂ, ಯಾವುದೇ ಕಾರಣಕ್ಕೂ, ದುರುಪಯೋಗ ಮಾಡುವುದೆಂದರೆ ೌರಕ್ಕನವರಿಗಾಗುತ್ತಲೇ ಇರಲಿಲ್ಲ. ಈಗಲೂ ಅವರು ಹಾಗೆಯೇ. ಉದಾಹರಣೆಗೆ ನಮ್ಮನೆಯ ದಸ್ಯನಂತೆಯೇ ಇರುವ ಡ್ರೈವರ್ ಬಾಲಣ್ಣ ರಜೆ ಹಾಕಿದಾಗಲೂ, ಅವರು ಟೋದಲ್ಲಾದರೂ ಓಡಾಡುತ್ತಾರೆ. ತಪ್ಪಿಯೂ ನನ್ನನ್ನು ಕರೆಯುವುದಿಲ್ಲ. ಈ ಬಗ್ಗೆ ಕೇಳಿದರೆ ನಗಿರುವ ಒಂದು ಭಾನುವಾರವನ್ನೂ, ನಾನು ಕಸಿಯುವುದಿಲ್ಲ ಮಾರಾಯ, ಆರಾಮವಾಗಿರು ನ್ನುತ್ತಾರೆ!!. ಇದು ಗೌರಕ್ಕನ ವಿಶೇಷತೆ.

ಹೀಗೆ ನನಗೆ ಗೌರಕ್ಕನವರು ಸರಳವಾಗಿ ಮತ್ತು ನನ್ನ ಜೀವನಚಕ್ರದಲ್ಲಿ ದಾಖಲಾಗುವ ೀತಿಯಲ್ಲಿ ಕೆಲಸಗಳನ್ನು ಹೇಳಿಕೊಡುತ್ತಾ ಬಂದವರು. ಇವರು ಯಾವಾಗಲೂ ಹೇಳುವ ಮಾತೆಂದರೆ, ಆಶ್ರಮ ಇರಬಹುದು ಅಥವಾ ಯಾವುದೇ ಸೇವಾ ಕಾರ್ಯವಿರಬಹುದು, ಲ್ಲವೂ ನಡೆಯುವುದು ಇದರ ಬೆನ್ನೆಲುಬಾಗಿರುವ ಪೋಷಕರಿಂದ-ನಾವಿಲ್ಲಿ ನಿಮಿತ್ತ ಮಾತ್ರ ಬಹುದು!. ಗೌರಕ್ಕನವರು ಹಿಂದಿನ ಪೀಳಿಗೆಯವರು. ಅವರಿಗೆ ಕಂಪ್ಯೂಟರ್, ಟೈಪಿಂಗ್ ಲ್ಲಾ ನಾನೇ ಮಾಡಿಕೊಡುವುದು. ಅವರು ಯಾವುದೇ ಪತ್ರವನ್ನು ಅಥವಾ ಬರಹವನ್ನು ಮಾಡಬೇಕೆಂದು ಕೊಟ್ಟರೆ, ಕೆಲ ಸಂದರ್ಭದಲ್ಲಿ ಯಾವುದಾದರೂ ಒಂದು ಶಬ್ದ, ಅವರು ಕೊಟ್ಟದ್ದಕ್ಕಿಂತ ಹೀಗಿದ್ದರೆ ಚೆನ್ನ ಎಂದು ನಾನು ತಿದ್ದುತ್ತಿದ್ದೆ. ಆದರೆ ಅವರು ಅದನ್ನು ಯಾವ ಕಾರಣಕ್ಕೂ ಒಪ್ಪುತ್ತಿರಲಿಲ್ಲ! ಅವರ ಬರಹದಲ್ಲಿರುವ ಪ್ರತೀ ಶಬ್ದಕ್ಕೂ ಅವರೊಳಗೇ ಒಂದು ಭಾವನಾತ್ಮಕ ಅರ್ಥವಿರುತ್ತದೆ ಮತ್ತು ಅದರಲ್ಲೂ ಮುಖ್ಯವಾಗಿ ಆರ್ಥಿಕವಾಗಿ ಮಹಾ ಪೋಷಕರಿಗೆ ಬರೆಯುವ ಪತ್ರದಲ್ಲಿ ತಾನು ಉಪಯೋಗಿಸುವ ಪತೀ ಶಬ್ದದಲ್ಲೂ ಒಂದು ಅರ್ಥ, ಕೃತಜ್ಞತೆ ಇರುತ್ತದೆ-ಹಾಗಾಗಿ ಅದನ್ನು ಬದಲಾಯಿಸಲೇಬಾರದೆನ್ನುತ್ತಿದ್ದರು!.

ಯಾರಿಗೂ ಯಾವುದೇ ಕಾರಣದಿಂದ ನೋವಾಗಬಾರದು ಎಂಬ ಕಾಳಜಿ, ಸರಳತೆ, ಸ್ನೇಹಶೀಲತೆ, ಸಮಯ ಪ್ರಜ್ಞೆ, ಪ್ರೀತಿಯಿಂದ ಕರೆದವರಿಗೆ ಓಗೊಡುವ ಆತ್ಮೀಯತೆ-ಇವುಗಳನ್ನೆಲ್ಲಾ ಗೌರಕ್ಕನವರಲ್ಲಿ ನೋಡಿ ಕಲಿಯಬೇಕು-ಅದನ್ನು ವರ್ಣಿಸಲು ನಾನೂ ಅಸಮರ್ಥ. ಇಂತಹ ಎಲ್ಲಾ ಗುಣಗಳನ್ನು ನಾವೂ ಮೈಗೂಡಿಸಿಕೊಳ್ಳಬೇಕೆಂಬುದು ನಾನವರಿಂದ ಕಲಿತ ಪಾಠ. ಯಾವುದೇ ಒಂದು ಪ್ರಯಾಣ ಇರಬಹುದು, ಶುಭಾಶುಭ ಕಾರ್ಯಕ್ರಮಗಳಿರಬಹುದು, ಪೂರ್ವ ತಯಾರಿಯೊಂದಿಗೆ ಹೊರಡುವುದು ಅವರ ಪರಿಪಾಠ. ಎಷ್ಟು ಮುಂಜಾಗರೂಕತೆ ಎಂದರೆ ಒಂದು ಪ್ರಯಾಣ ಇದ್ದರೆ ಟಿಕೆಟ್‌ನ ಎರಡೆರಡು ಪ್ರತಿಗಳನ್ನು ತೆಗೆದಿಟ್ಟುಕೊಳ್ಳುತ್ತಿದ್ದರು!.

ಇನ್ನು ಸಹಾಯ ಹಸ್ತ ನೀಡುವ ಬಗ್ಗೆ! ಇವರಲ್ಲಿಗೆ ಸಹಾಯ ಹಸ್ತ ಕೇಳಿ ಬಂದ ಒಬ್ಬರೂ ಬರಿಗೈಯಲ್ಲಿ ಹೋಗಿದ್ದನ್ನು ನಾನಂತೂ ಕಂಡಿಲ್ಲ!. ಅದರಲ್ಲೂ ಆರೋಗ್ಯದ ಸಮಸ್ಯೆಯಿಂದ



ಸೇವೆಯೇ ಧರ್ಮವೆಂಬ ಗೌರಕ್ಕ

✍ **ಡಾ.ಶಾಂತರಾಜ್**
ಬಿ.ಸಿ.ರೋಡ್

ನಾನು ನೇತ್ರಾಧಿಕಾರಿಯಾಗಿ ಉತ್ತರ ಕನ್ನಡ ಜಿಲ್ಲೆಯ ಕುಮಟಾದಿಂದ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಆಸ್ಪತ್ರೆಗೆ 1992-93 ನೇ ಸಾಲಿನಲ್ಲಿ ಬಂದಂತಹ ದಿನಗಳಲ್ಲಿ ಪರಿಯಲ್ತಡ್ಕ ಎಂಬ ಗ್ರಾಮೀಣ ಪ್ರದೇಶದಲ್ಲಿ 'ಬೃಹತ್ ಕಣ್ಣಿನ ಶಿಬಿರ'ವೊಂದು ನಡೆಯಿತು. ಆ ಶಿಬಿರಕ್ಕೆ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳು ಹಾಗೂ ಇಂದಿನ ಕೇಂದ್ರ ಸರ್ಕಾರದ ಮಾನ್ಯ ಶ್ರೀ ಡಿ.ವಿ.ಸದಾನಂದ ಗೌಡರು ಮತ್ತು ಪ್ರಸ್ತುತ ಕ್ಯಾಂಪ್ಕೋ ಅಧ್ಯಕ್ಷರಾಗಿರುವ ಮಾನ್ಯ ಶ್ರೀ ಸತೀಶ್ಚಂದ್ರರವರು ಭಾಗವಹಿಸಿದ್ದರು. ಬೃಹತ್ತಾಗಿ ಸಂಘಟಿಸಲ್ಪಟ್ಟಿದ್ದ ಆ ಶಿಬಿರದಲ್ಲಿ ಸರ್ಕಾರದ ಆರೋಗ್ಯ ಇಲಾಖೆಯ ವತಿಯಿಂದ ನನ್ನ ತಂಡದೊಂದಿಗೆ ಭಾಗವಹಿಸಿ ಕಾರ್ಯ ನಿರ್ವಹಿಸಿದ್ದೆ. ಈ ಶಿಬಿರಕ್ಕೆ ಅತಿಥಿಗಳಾಗಿ ಡಾ। ಗೌರಿ ಪೈಯವರು ಭೇಟಿ ನೀಡಿದ್ದರು. ಅದು ನನ್ನ ಮತ್ತು ಪೂಜ್ಯ ಗೌರಕ್ಕನವರ ಪ್ರಥಮ ಭೇಟಿ. ಇಲ್ಲಿಗೆ ಸುಮಾರು 26 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಗೌರಕ್ಕನವರ ಆನಂದಾಶ್ರಮದಿಂದ ನೂರಾರು ಶಿಬಿರಗಳು (1998 ರಿಂದ) ಗ್ರಾಮೀಣ ಜನರ ಕಣ್ಣಿನ ಆರೋಗ್ಯಕ್ಕಾಗಿ ಹಾಗೂ ದೃಷ್ಟಿದೋಷ ಪರಿಹಾರಕ್ಕಾಗಿ ನಡೆದಿವೆ. ಸಾವಿರಾರು ಜನರ ಪೊರೆ ಶಸ್ತ್ರ ಚಿಕಿತ್ಸೆ, ಔಷಧಗಳು ಹಾಗೂ ಲಕ್ಷಾಂತರ ಜನರಿಗೆ ದೃಷ್ಟಿ ದೋಷ ಪರಿಹಾರಕ್ಕಾಗಿ ಕನ್ನಡಕಗಳನ್ನು ನೀಡಿರುತ್ತಾರೆ.

ಶಾಲಾ ಮಕ್ಕಳಿಗಾಗಿ ಶಿಬಿರಗಳನ್ನು ಸಂಘಟಿಸಿ ದೃಷ್ಟಿಮಾಂದ್ಯ ಮಕ್ಕಳಿಗೆ ದಕ್ಷಿಣ ಕನ್ನಡ ಅಂಧತ್ವ ನಿಯಂತ್ರಣ ಕಾರ್ಯಕ್ರಮದ ಸಹಯೋಗದಿಂದ ದೃಷ್ಟಿಯನ್ನು ನೀಡಿರುತ್ತಾರೆ. ಗೌರಕ್ಕನವರ ಈ ಎಲ್ಲ ಕಾರ್ಯಕ್ರಮಗಳಲ್ಲಿ ಅವರು ನನಗೆ ಸೇವೆ ಸಲ್ಲಿಸಲು ಅವಕಾಶ ನೀಡಿದ್ದು ನನ್ನ ಪುಣ್ಯ ಎಂದು ಭಾವಿಸುತ್ತೇನೆ.

ಗೌರಕ್ಕನವರನ್ನು ನೆನಪಿಸಿಕೊಂಡಾಗಲೆಲ್ಲ ನನ್ನ ಮನದಲ್ಲಿ ಶ್ರೇಷ್ಠ ವ್ಯಕ್ತಿಯ ಜೀವನ ತೆರೆದುಕೊಳ್ಳುವುದು. 'ಮದರ್ ತೆರೇಸಾ' ಅವರ ಬದುಕನ್ನು ನಾನು ಓದಿಕೊಂಡಂತೆ ಈ

ಪ್ರದೇಶದ 'ಮದರ್ ತೆರೇಸಾ' ನಮ್ಮ ಗೌರಕ್ಕನವರು. ಅನಾಥ ಮಕ್ಕಳ, ಅಬಲೆಯರ ಹಾಗೂ ನಿರ್ಗತಿಕರಿಗೆ ಆಸರೆ ನೀಡುವಂತಹದ್ದು, ವೃದ್ಧರಿಗೆ ಹಾಗೂ ರೋಗಿಗಳಿಗೆ ಆಶ್ರಯದಾತರಾಗಿರುವುದು ಅವಿಸ್ಮರಣೀಯ. ಗೋವುಗಳಿಗೆ ಸಹ ಆರೈಕೆ ನಡೆಯುವ ಆನಂದಾಶ್ರಮದಲ್ಲಿ 'ಆನಂದಮಯ' ಜೀವನಕ್ಕೆ ಕೊರತೆ ಇಲ್ಲ. ವಿದ್ಯಾವಂತ ಹೆಣ್ಣುಮಕ್ಕಳಿಗೆ ಉಚಿತವಾಗಿ 'ಹೋಂ ನರ್ಸ್' ತರಬೇತಿ ನೀಡಿ ರೋಗಿಗಳ ಮನೆಗೇ ವೈದ್ಯಕೀಯ ಸೇವೆಯನ್ನು ತಲುಪಿಸಿ ತಮ್ಮ ಬದುಕಿನಲ್ಲಿ ಸಾರ್ಥಕ್ಯ ಕಂಡುಕೊಂಡಿರುವುದು ಗೌರಕ್ಕನವರ ಹೃದಯ ವೈಶಾಲ್ಯ ವಿಸ್ತಾರವನ್ನು ತೋರಿಸುತ್ತದೆ.

ಸ್ತ್ರೀ ಸ್ತ್ರೀರೋಗ ತಜ್ಞೆಯಾಗಿ ಕೆ.ಎಂ.ಸಿ.ಯಲ್ಲಿ ಸೇವೆ. ನಂತರ ಪುತ್ತೂರಿನಲ್ಲಿ 'ಗಿರಿಜಾ ಕ್ಲಿನಿಕ್' ಸ್ಥಾಪಿಸಿ ಅನೇಕ ದಶಕಗಳು ರೋಗಿಗಳ ಸೇವೆ ನಡೆಸಿದ್ದರೂ ಈ ದಿನಗಳಲ್ಲಿ ಚಿಕಿತ್ಸಾ ಕೆಲಸಗಳನ್ನು ಸಮಾಜ ಸೇವೆಯ ಕಾರಣದಿಂದ ನಿಲ್ಲಿಸಿರುವುದಾಗಿ ನಾನು ತಿಳಿದಿದ್ದೇನೆ. ಜಗದ ವೈಶಾಲ್ಯತೆಯಲ್ಲಿ ಪ್ರತಿಯೊಂದು ಕ್ಷೇತ್ರವು ತನ್ನದೇ ಆದ ಗತಿ ಹಾಗೂ ವೇಗದಲ್ಲಿ ಬೆಳೆಯುತ್ತಾ ಸಾಗಿದೆ. ಆದರೆ ಕ್ಷೀಣಿಸುತ್ತಿರುವುದು ಮಾನವೀಯತೆ. ಆದರೆ ಗೌರಕ್ಕರಂತಹ ವ್ಯಕ್ತಿತ್ವದವರು ಕೆಲವರಾದರೂ ನಮ್ಮೊಡನಿದ್ದಾರೆ. ಅವರುಗಳು ಭರವಸೆ, ಜೀವನೋತ್ಸಾಹಕ್ಕೆ ಸ್ಫೂರ್ತಿಕರ. ಈ ಕಿರಣಗಳು ಹೆಚ್ಚು ಹೆಚ್ಚು ಪ್ರಖರತೆಯನ್ನು ಪಡೆದುಕೊಳ್ಳುವ ಮೂಲಕ ನೊಂದು, ಬೆಂದು, ಬಸವಳಿದ ಅನಾಥರ, ವೃದ್ಧರ, ಅಬಲೆಯರ ಹಾಗೂ ಅಸಹಾಯಕರ ಆಪತ್ತಿಗೆ ನೆರವಾಗುವ ದಾರಿದೀಪವಾಗಿ ಬೆಳಗಲಿ. ಆ ಬೆಳಕು ಜಗದ್ವ್ಯಾಪಿಯಾಗಲಿ.

ತಾಯಿಯಂತೆ ನನ್ನನ್ನು ಈ 26 ವರ್ಷಗಳಲ್ಲಿ ಸಲಹಿದ ಗೌರವಾನ್ವಿತ ಗೌರಕ್ಕನವರು ಬಾಳಿ ನೂರ್ಕಾಲ ಈ ಬದುಕಿನ ಪಯಣದಲ್ಲಿ ನಮಗೆ ಮಾರ್ಗದರ್ಶನ ಮಾಡುತ್ತಿರಲಿ ಹಾಗೂ ಗ್ರಾಮೀಣ ಸಮಾಜಕ್ಕೆ ವೈದ್ಯಕೀಯ ಮತ್ತು ಕಣ್ಣಿನ ಶಿಬಿರಗಳನ್ನು ನೀಡುತ್ತಿರಲಿ ಎಂದು ಮನದಾಳದ ಹಾರೈಕೆ.





ಹೂಮನಸ್ಸಿನ ಗೌರಕ್ಕ

✍ ಎನ್. ಸುಬ್ರಹ್ಮಣ್ಯ ಕೊಳತ್ತಾಯ
ಅಧ್ಯಕ್ಷರು, ಶ್ರೀ ರಾಮಕೃಷ್ಣ ಸೇವಾ ಸಮಾಜ, ಪುತ್ತೂರು

ವೃತ್ತಿ ಕೌಶಲ್ಯ ಮತ್ತು ಜ್ಞಾನ ಸಮಯ ಹಾಗೂ ಸಂಪತ್ತನ್ನು ಸಮಾಜದ ಸೇವೆಗಾಗಿ ಉಪಯೋಗಿಸುತ್ತಾ ಬಂದಿರುವುದು ಡಾ.ಗೌರಿ ಪೈ ಅವರ ಹೆಗ್ಗಳಿಕೆ.

ಹಿರಿಯ ನಾಗರಿಕರಿಗಾಗಿ, ಅವರ ಸಂಧ್ಯಾಕಾಲದ ಬದುಕು ಚೆನ್ನಾಗಿರಿಸಲು 'ಆನಂದಾಶ್ರಮ ಸೇವಾ ಟ್ರಸ್ಟ್' ಮೂಲಕ ಅವರು ಸ್ಥಾಪಿಸಿದ 'ಆನಂದಾಶ್ರಮ' ಮತ್ತು ಇದಕ್ಕೆ ಪೂರಕವಾದ ವಾತಾವರಣವನ್ನು ಸುಮಾರು 5 ಎಕ್ರೆ ಸ್ಥಳದಲ್ಲಿ ನಿರ್ಮಿಸಿ ಅಲ್ಲಿ ತಾನು ದಿನದ 24 ಗಂಟೆಯೂ ಆ ಸಂಸ್ಥೆಯನ್ನು ಸ್ಥಾಪಕ ಅಧ್ಯಕ್ಷರಾಗಿ ನಿರ್ವಹಿಸಿಕೊಂಡು ಬರುವುದು ಒಂದು ವಿಸ್ಮಯ ಹಾಗೂ ಹೆಮ್ಮೆಯ ವಿಚಾರ.

ಇಲ್ಲಿ ಶಾಂತವಾದ ಮನಸ್ಸು
ಇದು ಆನಂದದ ತೌರು ಮನೆ
ಶಾಂತಿಯೇ ಆನಂದ
ಆನಂದವೇ ಶಾಂತಿ

ಹಲವು ವರ್ಷಗಳಿಂದ ಸತತವಾಗಿ ಪುತ್ತೂರು ಆಸುಪಾಸು ಪ್ರದೇಶಗಳಲ್ಲಿಯೂ ಕೂಡ ಇದೇ ಟ್ರಸ್ಟ್ ಮೂಲಕ ಉಚಿತ ಕಣ್ಣಿನ ಶಿಬಿರಗಳನ್ನು ನಡೆಸಿಕೊಂಡು ಬಂದು ಸಾವಿರಾರು ಮಂದಿಗೆ ದೃಷ್ಟಿ ನೀಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರತೀ ವರ್ಷ ಶ್ರೀ ರಾಮಕೃಷ್ಣ ಸೇವಾ ಸಮಾಜದ ಜೊತೆ ಸೇರಿಕೊಂಡು ಒಂದಾದರೂ ಇಂತಹಾ ಕ್ಯಾಂಪ್ ನಡೆಸಿಕೊಂಡು ಬರುತ್ತಾರೆ.


ಡಾ। ಗೌರಿ ಪೈಯವರು ಬಿರ್ದ ಕೊಡುಗೈ ದಾನಿಗಳಾಗಿದ್ದಾರೆ. ಸಂಕಷ್ಟದಲ್ಲಿರುವವರಿಗೆ ಅವರ ನೆರವು, ಕ್ಯಾನ್ಸರ್ ರೋಗಿಗಳಿಗೆ ಔಷಧಿ, ವಿದ್ಯಾಭ್ಯಾಸಕ್ಕೆ ನೆರವು, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಹಾಗೂ ಸಹಾಯ ಹಸ್ತ ಇದ್ದೇ ಇದೆ.

ತ್ತೂರಿನಲ್ಲಿ ಏರ್ಪಡಿಸಿ ಈ ಮೂಲಕ ಕಟ್ಟಡ ರಚನೆಗೆ ಬೇಕಾದ ಹೆಚ್ಚಿನ ಮೊತ್ತವನ್ನು ಂಗ್ರಹಿಸಲು ಡಾ। ಗೌರಿ ಪೈಗಳು ಮುಖ್ಯರಾಗಿದ್ದಾರೆ. ಹಾಗೆಯೇ ಈ ಸಂಸ್ಥೆಯು ಡೆಸಿಕೊಂಡು ಬರುತ್ತಿರುವ ಉದ್ಯೋಗಸ್ಥ ಮಹಿಳೆಯರ ವಸತಿಗೃಹಕ್ಕೆ ಬೇಕಾಗುವ ಕಟ್ಟಡ ಚನೆಯ ಸಂದರ್ಭ ಸಹಾ ಅಷ್ಟೇ ಸಂಪನ್ಮೂಲವನ್ನು ಒದಗಿಸುವಲ್ಲಿ ಸಹಾ ಡಾ। ಗೌರಿ ಪೈಗಳು ಮುಖ ಪಾತ್ರ ವಹಿಸಿದ್ದಾರೆ.

ಕೆಲವು ಕಠಿಣ ಪರಿಸ್ಥಿತಿಗಳಲ್ಲಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ಆಗಲೀ ಈ ಸಂಸ್ಥೆಯ ಮಕ್ಕಳ ಆರೋಗ್ಯ ಸಮಸ್ಯೆ ಬಂದಾಗ ಅಥವಾ ಆಡಳಿತಾತ್ಮಕ ಸವಾಲುಗಳು ಎದುರಾದಾಗ ಡಾ। ಗೌರಿ ಪೈಗಳು ನಮ್ಮ ಸಂಸ್ಥೆಯ ಸಹಾಯಕ್ಕೆ ಬರುತ್ತಾರೆ. ಎಂತಹಾ ಪರಿಸ್ಥಿತಿಗಳಾದರೂ ಅದನ್ನು ಧೈರ್ಯದಿಂದ ಎದುರಿಸಿ ನಿಭಾಯಿಸುವ ಸಾಮರ್ಥ್ಯ ಅವರಿಗಿದೆ. ಇದೇ ಧೈರ್ಯವನ್ನು ಸಂಸ್ಥೆಯ ಆಡಳಿತ ಮಂಡಳಿಗಾಗಲೀ ಸಿಬ್ಬಂದಿಗಳಿಗಾಗಲೀ ಅವರು ತುಂಬುತ್ತಾರೆ.

ಈ ಸಂಸ್ಥೆಯ ಮೇಲೆ ಡಾ। ಗೌರಿ ಪೈಗಳಿಗೆ ಅಪಾರ ಪ್ರೀತಿ, ಅಭಿಮಾನ, ಕಾಳಜಿ ಮತ್ತು ಅಷ್ಟೇ ಜವಾಬ್ದಾರಿಯಿಂದ ಸಂಸ್ಥೆಗೆ ನೆರವಾಗುತ್ತಾರೆ. ಅವರೇ ಹೇಳುವಂತೆ ಆನಂದಾಶ್ರಮ ಅವರ ಒಂದು ಕಣ್ಣಾದರೆ ಶ್ರೀ ರಾಮಕೃಷ್ಣ ಸೇವಾ ಸಮಾಜ ಅವರ ಇನ್ನೊಂದು ಕಣ್ಣು. ಅವರು ಈ ಎರಡೂ ಸಂಸ್ಥೆಗಳ ಕಣ್ಮಣಿ.

ಡಾ। ಗೌರಿ ಪೈಗಳಿಗೆ ಆರೋಗ್ಯ ಭಾಗ್ಯವನ್ನು ನೀಡುವಂತೆಯೂ ಸಮಾಜ ಸೇವಾ ಕಾರ್ಯಗಳನ್ನು ಮುನ್ನಡೆಸುವ ಶಕ್ತಿ ನೀಡಲೆಂದೂ, ಎಲ್ಲರ ಪ್ರೀತಿ ಪಾತ್ರಗಳಿಗೆ ಭಾಜನರಾಗುವಂತೆಯೂ ಸರ್ವಶಕ್ತನಾದ ಶ್ರೀ ಭಗವಂತನು ಕರುಣಿಸಲಿ ಎಂದು ಶುಭ ಹಾರೈಸುತ್ತಿದ್ದೇನೆ.





ಔದಾರ್ಯತೆಯ ಮೂರ್ತಿ-ಸೇವೆಯ ಶಿಖರ

✍ ಭಾರತಿ ಕಾಮತ್
[illegible]

[illegible]

[illegible] ಹಾಗೂ ಶ್ರದ್ಧೆ ಕಂಡುಬರುತ್ತಿತ್ತು.

[illegible] ಗೌರಕ್ಷನವರು.

[illegible]

ಸರಿಯಾಗಿ ನೆನಪಿಲ್ಲ.

ಪ್ರವಾಸ, ಸಿನೆಮಾ, ಪುಸ್ತಕ, ಆಧ್ಯಾತ್ಮ ಹೀಗೆ ಎಲ್ಲಾ ಒಳ್ಳೆಯ ಹವ್ಯಾಸಗಳ ಕಡೆಗಿನ ಒಲವು ನನ್ನಲ್ಲಿ ಹೆಚ್ಚಿಸಿದವರೇ ಗೌರಕ್ಕ. ಅವರು ತರುತ್ತಿರುವ ಆಂಗ್ಲ ಸಾಹಿತ್ಯದ ಪುಸ್ತಕಗಳನ್ನು ಕದ್ದು ತಪ್ಪು ಓದುತ್ತಿದ್ದೆ. ಕೇಳಿದರೆ ಕೊಡುತ್ತಿದ್ದರೋ ಏನೋ. ಆವಾಗ ಅವರನ್ನು ಕೇಳಲಿಕ್ಕೆ ಸಂಕೋಚ ಹಾಗೂ ಗೌರವ ಮಿಶ್ರಿತ ಹೆದರಿಕೆ ಆಗ್ತಾ ಇತ್ತು.

ಸ್ವತಃ ವೈದ್ಯೆ ಅದರಲ್ಲೂ ಪ್ರಸೂತಿ ತಜ್ಞೆಯಾಗಿರುವ ಗೌರಕ್ಕನವರು ನಮ್ಮ ಕುಟುಂಬದ ಸುಮಾರು 50-55 ಮಕ್ಕಳನ್ನು ಈ ಭೂಮಿಗೆ ತಂದಿದ್ದಾರೆ. ಅದಕ್ಕಾಗಿ ನಾನು ಹಾಗೂ ನಮ್ಮ ಇಡೀ ಕುಟುಂಬ ಅವರಿಗೆ ಕೃತಜ್ಞರಾಗಿದ್ದೇವೆ. ಆ ಮಕ್ಕಳಿಗೂ ತಾವು ಗೌರಕ್ಕನ ಆಸ್ಪತ್ರೆಯಲ್ಲಿ ಹುಟ್ಟಿದ್ದೆವು ಎಂದು ಈಗಲೂ ಹೆಮ್ಮೆ ಇದೆ. ನಮ್ಮ ಮನೆಯಲ್ಲಿ ಯಾರಿಗಾದರೂ ಅಸೌಖ್ಯವಾದರೆ ಅಥವಾ ಶಸ್ತ್ರ ಚಿಕಿತ್ಸೆಯಾದರೆ ನಮಗೇನೂ ಭಯವಿಲ್ಲ. ನಮ್ಮ ಜೊತೆ ಗೌರಕ್ಕನವರು ಇದ್ದಾರೆ ಎಂಬ ನಂಬಿಕೆ. ಆ ನಂಬಿಕೆ ಎಷ್ಟು ಪ್ರಬಲವಾಗಿದೆ ಎಂದರೆ ನಮ್ಮ ಮನೆಯಲ್ಲಿ ಯಾರಿಗಾದರೂ ಏನಾದರೂ ಅಸೌಖ್ಯವಾದರೆ ನಾನು ಧೃತಿಗೆಡುವುದಿಲ್ಲ.

ಗೌರಕ್ಕನವರ ಉದಾರತೆಯ ಇನ್ನೊಂದು ನಿದರ್ಶನವೆಂದರೆ ನಾನು ಮೊದಲನೆಯ ವರ್ಷದ ಬಿ.ಎಸ್ಸಿ ಓದುತ್ತಿದ್ದಾಗ ನಮ್ಮ ಕಾಲೇಜಿನಲ್ಲಿ ಓದುತ್ತಿದ್ದ ಬಡ ಹುಡುಗಿಗೆ ಧನ ಸಹಾಯ ಮಾಡುತ್ತಿದ್ದರು. ಅದು ಯಾರಿಗೂ ಗೊತ್ತಿರಲಿಲ್ಲ. ನಾನು ಅವಳನ್ನು ಯಾವುದೋ ಕಾರಣಕ್ಕೆ ಆಸ್ಪತ್ರೆಯಲ್ಲಿ ಭೇಟಿ ಮಾಡಿದ್ದೆ. ಹೀಗೆ ಮಾತು-ಕತೆ ನಡೆಯುವಾಗ ಅವಳು ಬಂದ ಕಾರಣವನ್ನು ಹೇಳಿದಳು. ಪ್ರತಿ 3 ತಿಂಗಳಿಗೊಮ್ಮೆ ಬಂದು ಫೀಸ್ ತಗೊಂಡು ಹೋಗುತ್ತಿದ್ದಳು. ಇನ್ನೆಷ್ಟು ಮಂದಿಗೆ ಸಹಾಯ ಮಾಡಿದ್ದಾರೋ ಗೊತ್ತಿಲ್ಲ. ಅವರ ಆಸ್ಪತ್ರೆಯಲ್ಲಿ ಸುಮಾರು ನಾಲ್ಕೈದು ಗಂಡು ಮಕ್ಕಳು ಕಾಲೇಜು ಓದುವವರು ಮಧ್ಯಾಹ್ನ ಹಾಗೂ ರಾತ್ರಿ ಊಟ ಕ್ಯಾಂಟೀನ್‌ನಲ್ಲಿ ಮಾಡುತ್ತಿದ್ದರು. ವಿಷಯ ನಮಗೆ ಹೊರಗಿನವರಿಂದ ತಿಳಿಯಿತೇ ಹೊರತು ಅವರಾಗಿ ಒಂದೇ ಒಂದು ದಿನ ನಮ್ಮಲ್ಲಿ ಹೇಳಲಿಲ್ಲ.

ವೈದ್ಯಕೀಯ ಜಗತ್ತಿನ ಜತೆ ಅವರ ಪ್ರಿಯವಾದ ಹವ್ಯಾಸಗಳೆಂದರೆ ಪ್ರವಾಸ, ಚಿತ್ರಕಲೆ, ಎಂಬ್ರಾಯಿಡರಿ, ಹಾಗೂ ಜನಸೇವೆ. ಅವರ ಚಿತ್ರಕಲೆಗಳೆಲ್ಲವೂ ಆನಂದಾಶ್ರಮದ ಗೋಡೆಗಳಲ್ಲಿ ರಾರಾಜಿಸುತ್ತಿವೆ. ಪ್ರವಾಸದ ಫೋಟೋಗಳು, ಅವೆಷ್ಟು ಇವೆಯೋ ತಿಳಿದಿಲ್ಲ. ಅವರ ಜನಸೇವೆಯ ವಿಷಯವಾಗಿ ನಾನು ಏನೂ ಬರೆಯಬೇಕಿಲ್ಲ. ಅದು ಎಲ್ಲರಿಗೂ ಗೊತ್ತು. ಸುಮಾರು ಮೂರು, ನಾಲ್ಕು ದಶಕಗಳಿಂದ ಅವರು ರಾಮಕೃಷ್ಣ ಆಶ್ರಮದಲ್ಲಿ ಕೆಲಸ ಮಾಡುತ್ತಿದ್ದರು. ಹಾಗೆಯೇ ಎಷ್ಟೋ ಬ್ರಾಂಚ್‌ಗಳನ್ನು ಹುಟ್ಟುಹಾಕಿದ್ದಾರೆ. ಅವರಿಗೆ ಜನರ ಭಾವನೆಗಳಿಗೆ ಸ್ಪಂದಿಸುವುದು ದೊಡ್ಡ ವಿಷಯವೇನೂ ಅಲ್ಲ.





ಸಮಾಜಮುಖಿ ಡಾ॥ ಗೌರಿ

ಡಾ. ಡಿ ಆರ್ ವಾಲ್ಮೀಕಿ
ಡೋರ್ ನಂ-1, ರಾಮಕುಟೀರ,
ಎರಡನೇ ಬಸ್ ಸ್ಟಾಪ್,ವಿದ್ಯಾನಗರ, ದಾವಣಗೆರೆ

ಡಾ। ಗೌರಿ ಪೈಯವರು ನನಗೆ ಪರಿಚಯವಾದದ್ದು ಸುಮಾರು 46–47 ವರ್ಷಗಳ ಹಿಂದೆ. ಅದು ನನ್ನ ದಿವಂಗತ ಪತ್ನಿ ಶ್ರೀಮತಿ ಸುಶೀಲಾ ಅವರಿಂದ. ಸುಶೀಲಾ ಮತ್ತು ಗೌರಿ ಅವರು ಪುತ್ತೂರಿನವರು. ಇಬ್ಬರೂ ಜೊತೆಗೆ ಓದಿದವರು. ಸಹಪಾಠಿಗಳು ಹಾಗೂ ಒಡನಾಡಿಗಳು. ಅಲ್ಲದೇ ಅಚ್ಚುಮೆಚ್ಚಿನ ಅಕ್ಕತಂಗಿಯರು. ಭೇಟಿಯಾದಾಗಲೆಲ್ಲ ಬಂಧುಗಳನ್ನು ಕುರಿತು, ವೈದ್ಯಕೀಯ ವಿಷಯಗಳನ್ನು ಕುರಿತು, ಸಾಮಾಜಿಕ ವಿಷಯಗಳನ್ನು ಕುರಿತು ಗಂಟೆಗಟ್ಟಲೆ, ದಿವಸಗಟ್ಟಲೆ ಮಾತನಾಡುತ್ತಿದ್ದುದುಂಟು.

ನಾನು ಮೊದಲು ಪುತ್ತೂರಿಗೆ ಹೋದದ್ದು 1986ರಲ್ಲಿ. ನಾನಾಗಲೇ ದಾವಣಗೆರೆಯ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಉಪಾಧ್ಯಾಯನಾಗಿದ್ದೆ. ನನ್ನ ಮಗಳು ಸಪ್ನಾ ಸಣ್ಣ ಮಗು. ನಾನು, ಪತ್ನಿ ಸುಶೀಲಾ, ಮಗು ಹೋಗಿದ್ದೆವು. ಡಾ। ಗೌರಿ ಪೈಯವರು ಆದೇ ತಾನೇ ಎಂ.ಡಿ. ಪದವಿ ಮುಗಿಸಿ ತಮ್ಮ ನರ್ಸಿಂಗ್ ಹೋಂ ಸೇರಿದ್ದರು. ಆಗ ನರ್ಸಿಂಗ್ ಹೋಂ ತುಂಬಾ ಹೆಸರು ಮಾಡಿತ್ತು. ಉತ್ತಮ ಆರೋಗ್ಯ ಸೇವೆಯನ್ನು ಸಲ್ಲಿಸಿತ್ತು. ಬಡ ರೋಗಿಗಳಿಗೂ ಅದು ಆಶ್ರಯ ತಾಣವಾಗಿತ್ತು. ಆಗ ಡಾ। ಗೌರಿ ಅವರ ಅಣ್ಣನವರು ಮನೆಯಲ್ಲಿದ್ದರು. ಮನೆಯ ಆಗುಹೋಗುಗಳನ್ನು ಅಣ್ಣನ ಜೊತೆಗೆ ಡಾ। ಗೌರಿ ಪೈಯವರೇ ನೋಡಿಕೊಳ್ಳುತ್ತಿದ್ದರು.


ಡಾ। ಗೌರಿಯವರು ಆರೋಗ್ಯ ಸೇವೆಯ ಜೊತೆಗೆ ಸಮಾಜಸೇವೆಯನ್ನು ಮಾಡಲು ನಿರ್ಧರಿಸಿದರು. ತಮ್ಮ ಸುತ್ತಮುತ್ತಲಿನ ಜನರ ನೋವುಗಳನ್ನು ಕಂಡು ಮರುಗಿದರು. ಜನತೆಗೆ ಏನಾದರೂ ಒಳ್ಳೆಯದನ್ನು ಮಾಡಬೇಕು ಎಂದು ಮನಸ್ಸಿತ್ತು. ಅದಕ್ಕೆ ನರ್ಸಿಂಗ್ ಹೋಂ ಅವಕಾಶವನ್ನು ಕಲ್ಪಿಸಿತ್ತು. ಅವರಿಗೊಂದು ವಿಶಾಲವಾದ ಸೇವಾ ಕ್ಷೇತ್ರ ಬೇಕಾಗಿತ್ತು. ಅದಕ್ಕಾಗಿ

ಅವರು ಅಲ್ಲಿಯೇ 'ಅನಾಥಾಶ್ರಮ'ವನ್ನು ತೆರೆದರು. ಸಮಾಜದ ನೊಂದವರ, ಬೆಂದವರ ನೋವು ಬವಣೆಗಳಿಗೆ ನೆರವು ತರಲು ಸಾಧ್ಯವೇ? ಎಂದು ಶ್ರಮಿಸಿದರು. ಅನಾಥಾಶ್ರಮ ಆ ಕಾರ್ಯವನ್ನು ಶ್ರದ್ಧೆಯಿಂದ ಮಾಡಿತು. ಡಾ। ಗೌರಿಯವರು ಹೀಗೆ ಸಮಾಜಸೇವೆಯಿಂದ ಮಹೋನ್ನತ ಸಮಾಜಮುಖಿಯಾದರು. ಈ ಬಗ್ಗೆ ಅವರ ವಿಷಯದಲ್ಲಿ ನನಗೆ ಬಹಳ ಹೆಮ್ಮೆಯಿದೆ.

ನನ್ನ ಪತ್ನಿ ಸುಶೀಲಾ ಕೊನೆ ದಿವಸಗಳಲ್ಲಿ ತುಂಬಾ ಅನಾರೋಗ್ಯದಿಂದ ಬಳಲಿದರು. ಅಲ್ಜೈಮರ್ ಖಾಯಿಲೆಯಿಂದ ಬಳಲಿದರು. ಆಗ ಡಾ। ಗೌರಿಯವರು ನನ್ನ ಪತ್ನಿಯನ್ನು ಮಾತನಾಡಿಸಲು 2014ರಲ್ಲಿ ದಾವಣಗೆರೆಗೆ ಬಂದು ಹೋದರು. ತಮ್ಮ ಗೆಳತಿಯ ಬಗೆಗೆ ಅತ್ಯಂತ ಕಾಳಜಿಯನ್ನು ಮತ್ತು ಆತ್ಮೀಯತೆಯನ್ನು ತೋರಿಸಿದರು. ಅಲ್ಜೈಮರ್‌ನಿಂದ ಬಳಲುತ್ತಿದ್ದ ಸುಶೀಲಾ ಅವರನ್ನು ತಾವು ಕರೆದುಕೊಂಡು ಹೋಗಿ ಶುಶ್ರೂಷೆ ಮಾಡುವುದಾಗಿ ಹೇಳಿದರು. ಆದರೆ ನಾನು ಒಪ್ಪಲಿಲ್ಲ. ಕಾರಣ ಡಾ। ಗೌರಿಯವರಿಗೆ ತುಂಬ ತೊಂದರೆಯಾಗುತ್ತದೆ ಎಂದು ಅವರು ಬಲವಂತಪಡಿಸಲಿಲ್ಲ.

ನಾನು ಕಂಡಂತೆ ಡಾ। ಗೌರಿಯವರು ದೃಢ ಸ್ವಭಾವದವರು ಮತ್ತು ಶಾಂತ ಸ್ವಭಾವದವರು. ಎಲ್ಲರಿಗೂ ಒಳ್ಳೆಯದನ್ನು ಬಯಸುವ ಹಿರಿಯ ಮನಸ್ಸಿನವರು. ಅನಾಥಾಶ್ರಮದ ಸಂಸ್ಥೆಯನ್ನು ತಮ್ಮ ಕುಟುಂಬದಂತೆ ಬಹಳ ಅಕ್ಕರೆಯಿಂದ ನೋಡಿಕೊಂಡರು. ತಮ್ಮ ಶ್ರೀಮಂತಿಕೆಯನ್ನು ಸಮಾಜದ ಜೊತೆಗೆ ಹಂಚಿಕೊಂಡವರು. ಅವರಿಗೀಗ 80 ವರ್ಷ ತುಂಬಿದೆ. ತುಂಬು ಬಾಳನ್ನು ಬಾಳಿದ್ದಾರೆ. ಸಾರ್ಥಕವಾಗಿ ಕಾರ್ಯಗಳನ್ನು ಮಾಡಿದ್ದಾರೆ. ಡಾ। ಗೌರಿಯವರಿಗೆ ಶ್ರೀ ದೇವರು ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲಿ ಎಂದು ಬೇಡುತ್ತೇನೆ.







ಶುಭಾಶಯಗಳು

✍ **ಕೆ ರಾಮ ಭಟ್**, ಉರಿಮಜಲು
ಮಾಜಿ ಶಾಸಕರು, ಪುತ್ತೂರು

ಡಾಕ್ಟರ್ ಗೌರಿ ಪೈ ತನ್ನ 80 ವರ್ಷಗಳ ಸಾರ್ಥಕ ಜೀವನವನ್ನು ಇದೇ ಆಗೋಸ್ತ್ 21ರಂದು ಪೂರ್ತಿಗೊಳಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವೂ ಅರ್ಥಗರ್ಭಿತವೂ ಆಗಿದೆ. ತಾನು ವಿವಾಹವಾಗದೇ ಇದ್ದರೂ ಅನೇಕ ಮಂದಿ ವೃದ್ಧರನ್ನೂ ಅವರು ತಾವು ನಡೆಸಿಕೊಂಡು ಬರುತ್ತಿರುವ ಆನಂದಾಶ್ರಮದಲ್ಲಿ ಆಶ್ರಯ ನೀಡಿ ಊಟೋಪಚಾರಗಳನ್ನು ನೀಡಿ, ಆರೋಗ್ಯ ರಕ್ಷಣೆಯನ್ನೂ ಮಾಡುತ್ತಿದ್ದ ರೀತಿ ಪ್ರಶಂಸನೀಯ. ಈ ಎಲ್ಲಾ ಕೆಲಸಗಳನ್ನು ಮಾಡುತ್ತಿರುವಾಗ ಅವರಿಗೆ ಆತಂಕ ಎದುರಾದಾಗಲೂ, ಡಾ। ಗೌರಿ ಪೈಗಳು ಶಾಂತರಾಗಿದ್ದು ಅವನ್ನೆಲ್ಲ ಮರೆತು ಬಿಡುವ ಔನ್ನತ್ಯ ಅವರಿಗಿತ್ತು. ಆದ್ದರಿಂದಲೇ ಗೌರಿ ಪೈಗಳು ಒಬ್ಬ ಆದರ್ಶ ಮಹಿಳೆ. ಆದರ್ಶ ಡಾಕ್ಟರ್ ಮತ್ತು ಆದರ್ಶ ಪಾಲಕರಾಗಿದ್ದಾರೆ.

ಅವರಿಗೆ ಈ ಸಂದರ್ಭದಲ್ಲಿ ಅರ್ಹವಾಗಿಯೇ ಅಭಿನಂದನಾ ಸಮಾರಂಭ ಇಟ್ಟುಕೊಳ್ಳಲಾಗಿದ್ದು, ಅವರಿಗೆ ನನ್ನ ಶುಭಾಶಯಗಳು






ಚೈತನ್ಯದ ಚಿಲುಮೆ

- ನಾರಾಯಣ ತೋಳ್ಪಾಡಿ
[illegible]

ಡಾ। ಗೌರಿ ಶೆಣೈಯವರ ಪರಿಚಯ ನಮಗೆ ಬಹಳ ಹಿಂದಿನದ್ದು. 'ಗಿರಿಜಾ ಕ್ಲಿನಿಕ್'ನ ಪ್ರಾರಂಭೋತ್ಸವದ ಛಾಯಾಚಿತ್ರ ತೆಗೆಯುವ ಅವಕಾಶ ನನ್ನದಾಗಿತ್ತು. ಅಂದಿನ ಸ್ನೇಹ ಇಂದಿನವರೆಗೂ ಮುಂದುವರೆದಿದೆ.

ಡಾ। ಗೌರಿ ಶೆಣೈ ಎಂದರೆ ಚೈತನ್ಯದ ಚಿಲುಮೆ. ಅದು ಯಾವಾಗಲೂ ಬತ್ತಿಲ್ಲ. ಅವರಲ್ಲಿ ಬೇಸರ ಅಥವಾ ದಣಿವಿನ ಚಿಹ್ನೆ ನನಗೆ ಇದುವರೆಗೂ ಗೋಚರಿಸಿದ್ದಿಲ್ಲ. ಆರೋಗ್ಯದ ವಿಷಯದಲ್ಲಂತೂ ಅವರು ನಮ್ಮ ಕುಟುಂಬಕ್ಕೆ ಮಾಡಿದ ಸಹಾಯ, ಸಲಹೆ ಮರೆಯುವಂತಿಲ್ಲ. ಅವರಿಂದ ನಾವು ಕಲಿಯಬೇಕಾದ ಪಾಠ ಅಪಾರ. ಈ ಪ್ರಾಯದಲ್ಲೂ ಆನಂದಾಶ್ರಮ ನಡೆಸುತ್ತಿರುವುದು ಶ್ಲಾಘನೀಯವೇ. ತನಗಾಗಿ ಜೀವಿಸದೆ ಅನಾಥರಿಗಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ. ಅಂಥ ಸರಳ ವ್ಯಕ್ತಿಯನ್ನು ನಾನು ಜೀವಮಾನದಲ್ಲಿ ನೋಡಿಲ್ಲ.





"ಡಾಕ್ಟರ್ ಗೌರಿ ಪೈ- ಇವರ ಸಾರ್ಥಕ ಜೀವನ"

✍ ಸಿ ಶಿವಶಂಕರ್ ಕಾಮತ್
"ಜೆಮಿನಿ" ಪುತ್ತೂರು

ಆತ್ಮ-ಸಾಕ್ಷಾತ್ಕಾರವೇ ಮಾನವ ಜನ್ಮದ ಉದ್ದೇಶ. ಜನ್ಮ ಸಾರ್ಥಕತೆಗಾಗಿ ಇರುವ ಅತ್ಯಂತ ಸಮರ್ಪಕವಾದ ವಿಧಾನವೇ "ಸತ್ಕರ್ಮ, ಸದ್ಭಾವನೆ, ಸದ್ವಾಕ್ಯ ಪರಿಪಾಲನೆ"ಅಂದರೆ, ಮಾತು-ಮನಸ್ಸು-ಕೃತಿಯಿಂದ ತ್ರಿಕರಣಪೂರ್ವಕವಾಗಿ ಸತ್ಕರ್ಮಗಳಲ್ಲಿ ನಿರತರಾಗುವುದು!

ಡಾಕ್ಟರ್‌ಗೌರಿ ಪೈಯವರ ಜೀವನದಲ್ಲಿ ಅದೇನು ದೈವ ಪ್ರೇರಣೆಯೋ, ಪವಾಡವೋ ಎಂಬಂತೆ, ಈ ಎಲ್ಲಾ ವಿಚಾರಗಳಲ್ಲಿಯೂ ಸೇವಾ ನಿರತರಾಗಿ ಜೀವನವನ್ನು ಪರಿಪೂರ್ಣವಾಗಿ ಸಾರ್ಥಕಗೊಳಿಸಲು ಸಾಧ್ಯವಾಗುವಂತಹ ಅವಕಾಶಗಳು, ಪರಮಾತ್ಮನ ಅನುಗ್ರಹದಿಂದಲೂ, ಗುರುಹಿರಿಯರ ಆಶೀರ್ವಾದದಿಂದಲೂ, ತನ್ನಿಂದ ತಾನಾಗಿ ಒದಗಿ ಬಂದುವು ಎಂದರೆ ತಪ್ಪಾಗಲಾರದು.

ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಲು ಎಂತಹ ಸತ್ಕಾರ್ಯಗಳು, ಸತ್ಕರ್ಮಗಳು, ಸೇವೆಗಳು, ಆರಾಧನೆಗಳು, ಸಾಮಾಜಿಕ-ಧಾರ್ಮಿಕ-ಪಾರಮಾರ್ಥಿಕ-ಆಧ್ಯಾತ್ಮಿಕ ಚಿಂತನೆಗಳು ಅವಶ್ಯಕವೋ ಅದೆಲ್ಲವುಗಳೂ ತನ್ನಿಂದ ತಾನಾಗಿ ಡಾಕ್ಟರ್ ಗೌರಿ ಪೈಯವರಿಗೆ ಒಂದುಗೂಡಿ ಬಂದಿರುವುದು ಅವರ ಪೂರ್ವ ಜನ್ಮದ ಭಾಗ್ಯವೆಂದೇ ಹೇಳಬಹುದು.

ತಮ್ಮ ವೈದ್ಯಕೀಯ ಸೇವೆಯೊಂದಿಗೆ ಹಲವಾರು ಸಂಘ ಸಂಸ್ಥೆಗಳಿಗಾಗಿ ಸೇವೆ ಸಲ್ಲಿಸಲು, ತಮ್ಮ ಅಮೂಲ್ಯವಾದ ಸಮಯವನ್ನು ವಿನಿಯೋಗಿಸಲು ಆರಂಭಿಸಿದರು. ಪುತ್ತೂರಿನ ಶ್ರೀರಾಮಕೃಷ್ಣ ಸೇವಾಶ್ರಮದ ನಿವಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ಉಚಿತವಾಗಿ ವೈದ್ಯಕೀಯ ಹಾಗೂ ಇತರ ಸೇವೆಯನ್ನು ನೀಡುತ್ತಾ ಬಂದರು.

"ಆನಂದಾಶ್ರಮ ಸೇವಾ ಟ್ರಸ್ಟ್" ಎಂಬ ಹೆಸರಲ್ಲಿ ವೃದ್ಧಾಶ್ರಮವನ್ನು ಸ್ಥಾಪಿಸಿದರು. 1970ರ ದಶಕದಲ್ಲಿ ವೃದ್ಧಾಶ್ರಮ ಸಂಪ್ರದಾಯಗಳು ಕೇವಲ ವಿದೇಶಗಳಲ್ಲಿ ಮಾತ್ರವಿದ್ದಿತು. ಹಾಗಾಗಿ ನಮ್ಮ ಈ ಪುತ್ತೂರಿಗೆ ವೃದ್ಧಾಶ್ರಮದ ಅವಶ್ಯಕತೆಯಾದರೂ ಏನಿದೆ? ಎಂಬ ಪ್ರಶ್ನೆ ಹಲವರಲ್ಲಿ

ಇತ್ತು. ಅದರ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವೋ ಎಂಬಂತೆ, ಕೆಲವೇ ಸಮಯದಲ್ಲಿ ಅನಾಥಾಶ್ರಮ ಸೇವಾ ಟ್ರಸ್ಟ್ ಆಶ್ರಮದಲ್ಲಿ 20 ರಿಂದ 25 ಜನ ವೃದ್ಧರು ಸೇರ್ಪಡೆಗೊಂಡರು.

"ಅನಾಥಾಶ್ರಮ ಸೇವಾ ಟ್ರಸ್ಟ್" ರೋಟರಿ ಇತ್ಯಾದಿ ಸೇವಾ ಸಂಸ್ಥೆಗಳ ಸಹಯೋಗದಲ್ಲಿ, ಬಡ ಜನರಿಗೆ ಉಚಿತ ಆರೋಗ್ಯ ತಪಾಸಣೆ, ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸೆ, ಉಚಿತ ಕನ್ನಡಕ ವಿತರಣೆ ಇತ್ಯಾದಿ ಅನೇಕ ಬಗೆಯ ಸೇವೆಗಳನ್ನು ಆರಂಭದಿಂದ ಇಂದಿನವರೆಗೆ ನೀಡುತ್ತಾ ಬಂದಿರುವುದು ಗಮನಾರ್ಹವಾಗಿದೆ.

ಅನಾಥಾಶ್ರಮದಲ್ಲಿ ಇಲ್ಲಿಯ ನಿವಾಸಿಗಳಿಗಾಗಿ ಪಾಠ-ಪ್ರವಚನಗಳು, ಮನೋರಂಜನೆಗಾಗಿ ಸಂಗೀತ-ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿಗಳ ವ್ಯವಸ್ಥೆಯಿದೆ. ಅವುಗಳೊಂದಿಗೆ ಸಾಂಪ್ರದಾಯಿಕ ಚಿಂತನೆಗೆ ಅವಕಾಶವಾಗುವಂತೆ, ಭಜನೆ-ಧ್ಯಾನಗಳಿಗೂ ಅನುಕೂಲವಾಗುವಂತೆ ಅಮೃತಶಿಲೆಯ ಸುಂದರವಾದ ಶ್ರೀ ಗೋಪಾಲಕೃಷ್ಣ ವಿಗ್ರಹವಿರುವ ಧ್ಯಾನಮಂದಿರವನ್ನು ನಿರ್ಮಿಸಿರುವುದು ಉಲ್ಲೇಖನೀಯವಾಗಿದೆ.

ಡಾಕ್ಟರ್ ಗೌರಿ ಪೈ ಅವರ [illegible]

ಡಾಕ್ಟರ್ ಗೌರಿ ಪೈ [illegible]

[illegible] ಡಾಕ್ಟರ್ ಗೌರಿ ಪೈ [illegible] "500 [illegible]" [illegible]




ನನ್ನ ಚಿಕ್ಕಮ್ಮ ಗೌರಿ ಪೈಗೊಂದು ಆತ್ಮೀಯ ಓಲೆ

✍ **ಶ್ರೀಮತಿ ನಳಿನಿ ಕಾಮತ್**
ಮತ್ತು ಕುಟುಂಬಸ್ಥರು
ಅರಂಬೂರು ಕೃಷ್ಣನಗರ, ಸುಳ್ಯ ದ.ಕ.

ಚಿಕ್ಕಮ್ಮಾ

ಇಂದು ನೀವು 80 ಸಂವತ್ಸರವನ್ನು ಪೂರೈಸಿ 81ನೇ ವರ್ಷಕ್ಕೆ ಕಾಲಿಟ್ಟಿದ್ದೀರಿ. ಸಂಬಂಧದ ವಿಚಾರದಲ್ಲಿ ಹೇಳುವುದಾದರೆ ನಿಮ್ಮ ಕುಟುಂಬದ ಎಲ್ಲಾ ಸದಸ್ಯರನ್ನು, ಮಕ್ಕಳನ್ನು, ಮೊಮ್ಮಕ್ಕಳನ್ನು ತುಂಬಾ ಪ್ರೀತಿಯಿಂದ ಕಾಣುತ್ತೀರಿ. ಅವರ ಕಷ್ಟಗಳಿಗೆ ಸ್ಪಂದಿಸುತ್ತೀರಿ.

ನನ್ನ ಮತ್ತು ನಿಮ್ಮ ವೈಯಕ್ತಿಕ ಸಂಬಂಧದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನಾನಿಲ್ಲಿ ಉಲ್ಲೇಖಿಸಲೇಬೇಕು. ಚಿಕ್ಕಮ್ಮಾ ನೀವು ನನಗೆ ಜನ್ಮತಾಳಿದ ಅಮ್ಮನಿಗೆ ಸಮಾನ. ನಾನು ನಿಮ್ಮ ಪ್ರೀತಿಯ ಮಗಳು. ನನ್ನ ವಿವಾಹದಲ್ಲೂ ಸಕ್ರಿಯವಾಗಿ ಭಾಗವಹಿಸಿ ಹರಸಿದ್ದೀರಿ. ನಿಮ್ಮ ಹರಕೆಯ ಫಲವಾಗಿ ನಾನಿಂದು ಸುಖೀ ಗೃಹಿಣಿಯಾಗಿ ಸಮಾಜದಲ್ಲಿ ಸುಖ ಸಂತೋಷದಲ್ಲಿದ್ದೇನೆ. ನನ್ನ ಹೆರಿಗೆ ಸಮಯದಲ್ಲೂ ನನ್ನನ್ನು ಸಾಕಿ ಎಲ್ಲಾ ರೀತಿಯ ಸಹಕಾರ ಮಾಡಿದ್ದೀರಿ. ಹೆರಿಗೆ ಸಮಯದಲ್ಲಿ ರಾತ್ರಿ ಇಡೀ ನನ್ನ ಬಳಿಯಲ್ಲಿ ಕೂತು ನನ್ನ ಮತ್ತು ನನ್ನ ಮಕ್ಕಳ ಆರೈಕೆ ಮಾಡಿದ್ದೀರಿ. ಇದನ್ನು ನಾನು ಜೀವದಲ್ಲಿ ಇರುವ ತನಕವೂ ಮರೆಯಲಿಕ್ಕಿಲ್ಲ. ನೀವು ನಮ್ಮನ್ನು ಎಷ್ಟು ಪ್ರೀತಿಯಿಂದ ನೋಡಿದರೂ ನಿಮ್ಮ ಮುಂದೆ ನಿಂತು ಮಾತನಾಡುವ ಧೈರ್ಯ ನಮಗಿಲ್ಲ. ಕಾರಣ ಇಷ್ಟೇ! ನಿಮ್ಮಲ್ಲಿ ಇರುವ ಶಿಸ್ತು. ಇದರಿಂದಾಗಿ ನಾವು ನಿಮ್ಮ ಮುಂದೆ ನಿಲ್ಲಲಾರೆವು. ಚಿಕ್ಕಮ್ಮಾ ,ನಮ್ಮ ನಿಮ್ಮ ಸಂಬಂಧ, ಪ್ರೀತಿ ಶಾಶ್ವತವಾಗಿ ಉಳಿಯಲಿ. ನಿಮ್ಮ ಮಾರ್ಗದರ್ಶನ ನಮಗೆ ಸದಾ ದೊರೆಯಲಿ. ನಿಮ್ಮ ಸೇವೆ ಮಾಡುವ ಮಹಾಭಾಗ್ಯ ದೊರೆಯಲಿ ಎಂದು ಹಾರೈಸುತ್ತೇನೆ. ನೀವು ಶತಾಯುಷಿಯಾಗಿ ಬಾಳಿ. ನಿಮಗೆ ಆರೋಗ್ಯ ಭಾಗ್ಯ ಶ್ರೀ ಪರಮಾತ್ಮ ಕರುಣಿಸಲಿ ಎಂದು ನಿಮ್ಮ ಮಗಳಾದ ನಾನು, ನನ್ನ ಪತಿ ಮತ್ತು ನನ್ನ ಮಕ್ಕಳು ಹಾಗೂ ಮರಿಮಕ್ಕಳು ಶ್ರೀದೇವರಲ್ಲಿ ಪ್ರಾರ್ಥಿಸುತ್ತೇವೆ. ಹಾಗೂ 81ನೇ ವರ್ಷಕ್ಕೆ ಕಾಲಿಡುವ ನಿಮಗೆ ಅಭಿನಂದನೆಗಳನ್ನು, ಶುಭ ಹಾರೈಕೆಯನ್ನು ಸಲ್ಲಿಸುತ್ತೇವೆ.



ಮಹಾ ತಾಯಿ ಡಾ॥ ಗೌರಕ್ಕ

ಓ. ವಾಮನ್ ಪೈ
[illegible]


[illegible] ಅರಿತವರೇ ಎಲ್ಲ.

[illegible]

[illegible] 1980ರ [illegible]

ಹಾರ್ಡ್‌ವೇರ್ ಅಂಗಡಿಯನ್ನು ಹಾಕಿ ಕೊಟ್ಟರು. ನನ್ನ ವ್ಯವಹಾರದ ಏರುಪೇರುಗಳನ್ನು, ನನ್ನನ್ನು, ನನ್ನ ತಂದೆಯವರ ಜೊತೆಗೂಡಿ ಆದರಿಸಿ ನಡೆಸಿಕೊಂಡು ಬಂದವರು ನನ್ನ ಈ ಗೌರಕ್ಕ. ಇಂದು ನಾನು ಈ ಸಮಾಜದಲ್ಲಿ ಉತ್ತಮ ಸ್ಥಾನ ಪಡೆದುಕೊಳ್ಳುವಲ್ಲಿ ಗೌರಕ್ಕ ಅವರ ಶ್ರಮ ಅಪಾರ. ನನ್ನ ಅಭಿಮತದಲ್ಲಿ ಗೌರಕ್ಕ ನನಗೆ ಮಾತ್ರವಲ್ಲ, ಇನ್ನೂ ಹಲವರನ್ನು ಆದರಿಸಿದ ಮಹಾ ತಾಯಿ! ಅವರನ್ನು ಹಲವು ಮಕ್ಕಳ ತಾಯಿಯೆಂದರೂ ತಪ್ಪಾಗದು ಅಲ್ಲವೇ?!






ನನ್ನ ಗೌರಕ್ಕ...

ಡಾ॥ ಯು.ಪಿ.ಶೆಣೈ

[illegible]






ಡಾ। ಗೌರಿ ಪೈ ನನ್ನ ಅನುಭವ

✍ **ಡಾ। ಜೆ.ಸಿ. ಅಡಿಗ**
ಪುತ್ತೂರು

ನಾನು ಪುತ್ತೂರಿಗೆ 1984ರಲ್ಲಿ ಬಂದೆ ಹಾಗೂ ಅಂದಿನಿಂದಲೂ ಡಾ। ಗೌರಿ ಪೈ ನನಗೆ ಚಿರ ಪರಿಚಿತರು. ಅವರು ಮೊದಲ ಹಂತದಲ್ಲಿ, ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞೆಯಾಗಿ ಪುತ್ತೂರಿನ ತಜ್ಞ ವೈದ್ಯೆಯರಲ್ಲಿ ಮೊದಲಿಗರು. ಸ್ತ್ರೀರೋಗ ತಜ್ಞೆಯಾಗಿ ಪ್ರಸಿದ್ಧಿ ಪಡೆದು ಗಿರಿಜಾ ಕ್ಲಿನಿಕ್‌ನ ರೂವಾರಿಯಾಗಿದ್ದರು. ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞೆಯಾಗಿ ಪ್ರಸಿದ್ಧಿ ಪಡೆದ ವೈದ್ಯರಲ್ಲಿ ಅವರೂ ಒಬ್ಬರು. ಪ್ರಸೂತಿಯಲ್ಲೂ ಅವರು ಎತ್ತಿದ ಕೈ, ಎಲ್ಲವೂ ಕರಾರುವಾಕ್ಕಾಗಿ ಆಗಬೇಕೆನ್ನುವುದು ಅವರ ಇಚ್ಛೆಯಾಗಿತ್ತು. ತನ್ನಿಂದಾಗದ ರೋಗಿಯನ್ನು ಚಿಕಿತ್ಸೆಗಾಗಿ ಸೂಕ್ತ ಕಾಲದಲ್ಲಿ ಮಂಗಳೂರಿಗೆ ಕಳುಹಿಸುವುದನ್ನು ಮಾಡುತ್ತಿದ್ದರು. ಇವರ - ರೋಗಿಗಳೊಳಗಿನ ಸಂಭಾಷಣೆ ಕರಾರುವಾಕ್ಕಾಗಿರುತ್ತಿತ್ತು. ನಾನು ಅವರ ಸ್ವಂತ ತಜ್ಞ ವೈದ್ಯನಾಗಿಯೂ ಅವರ ಕುಟುಂಬದ ಹೆಚ್ಚಿನವರಿಗೆ ವೈದ್ಯನಾಗಿಯೂ ಕೆಲಸ ಮಾಡಿದ್ದೇನೆ.

ಅವರ ಎರಡನೇ ಹಂತದ ವೃತ್ತಿ, ಸಮಾಜಸೇವೆಯದ್ದು ಹಾಗೂ ಅದನ್ನು ನಿಷ್ಠಾವಂತರಾಗಿ ನಿರ್ವಹಿಸಿ ಹೆಸರುಗಳಿಸಿರುತ್ತಾರೆ. ಇದರ ಜೊತೆಗೆ ಮನೆಯ ದಾದಿಯರಿಗೆ ತರಬೇತಿ ಕೊಟ್ಟು ಸಾಕಷ್ಟು ಜನರಿಗೆ ಉಪಕಾರ ಮಾಡಿರುತ್ತಾರೆ. ಇವರ ನೇರ ನುಡಿಗಳು ಕೆಲವರಿಗೆ ನಿಷ್ಠುರವೆನಿಸಿದರೂ ಅದು ಅವಶ್ಯಕವೆನಿಸುತ್ತಿತ್ತು. ಇವರ ಎರಡನೇ ಘಟ್ಟದ 'ಆನಂದಾಶ್ರಮ'ದಿಂದ ಇವರು ವೈದ್ಯ ವೃತ್ತಿಗಿಂತಲೂ ಜಾಸ್ತಿ ಜನಪ್ರಿಯಗೊಂಡರು. ವೈದ್ಯರಾಗಿ ಮಾಡಿದ ಕೆಲಸ ಸಮಾಜಸೇವೆಯ ಮೂಲಕ ಮಾಡಿದ ಅವರ ನಿಸ್ವಾರ್ಥಸೇವೆ ಸಮಾಜದ ಎಲ್ಲಾ ವರ್ಗದವರಿಗೆ ತಲುಪಿ ಜನೋಪಯೋಗಿಯಾಗಿದೆ. ಇವರ ಜೀವನ ಸಾಕಾರಗೊಂಡು ಇನ್ನೂ ಕೆಲವು ವರ್ಷ ಅವರ ಸೇವೆ ಸಮಾಜದ ಎಲ್ಲರಿಗೂ ಸಿಗಲಿ ಎಂದು ಹಾರೈಸುತ್ತಾ ನನ್ನ ಲೇಖನವನ್ನು ಕೊನೆಗೊಳಿಸುತ್ತೇನೆ.



ಸಂಬಂಧದಲ್ಲಿ ಅಜ್ಜಿ, ಬಾಂಧವ್ಯದಲ್ಲಿ ಅಮ್ಮ

✍ ಕೆ.ಆರ್. ಶೆಣೈ
ಕನ್ಸಲ್ಟೆಂಟ್ ಇಂಜಿನಿಯರ್


ಡಾಕ್ಟರ್ ಗೌರಿ ಪೈಯವರು ಸಂಬಂಧದಲ್ಲಿ ನಮಗೆ ಅಜ್ಜಿಯೆನಿಸುತ್ತಾರೆ. ಅಂದರೆ ನನ್ನ ಅಜ್ಜಿಯವರು (ತಾಯಿಯ ತಾಯಿ) ಅವರ ಹಿರಿಯ ಅಕ್ಕ. ನಾನು ಪ್ರಾಯದಲ್ಲಿ ಡಾ। ಗೌರಿ ಪೈಯವರಿಗಿಂತ ಬರೇ ಹನ್ನೆರಡು ವರ್ಷ ಕಿರಿಯವನು. ನನ್ನ ಸಣ್ಣ ವಯಸ್ಸಿನ ಎರಡು ಕಿರು ಘಟನೆಗಳು ಅವರ ಬಗ್ಗೆ ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ. ಒಂದನೆಯದು ಡಾ। ಗೌರಿ ಪೈಯವರು ಮಣಿಪಾಲದಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿದ್ದಾಗ ನಡೆದ ಘಟನೆ. ಅವರು ನಗರದ ಬಸ್ಸೊಂದರಲ್ಲಿ ಪ್ರಯಾಣಿಸುತ್ತಿದ್ದರು. ನಾನು ನನ್ನ ಅಜ್ಜನ ಜೊತೆ ವೆಂಕಟರಮಣ ದೇವಸ್ಥಾನಕ್ಕೆ ತೆರಳುವಾಗ ಬಸ್ಸಲ್ಲಿ ಇವರನ್ನು ನೋಡಿದೊಡನೆ ಗೌರಿ ಮಾಮಮ ಗೌರಿ ಮಾಮಮ ಎಂದು ಗಟ್ಟಿಯಾಗಿ ಕರೆದೆನು. ಬಸ್ಸಲ್ಲಿದ್ದ ಸಹ ಪ್ರಯಾಣಿಕರೆಲ್ಲಾ ಯಾರಪ್ಪಾ ಮಾಮಮ ಇದ್ದಾರೆ ಬಸ್ಸಲ್ಲಿ ಎಂದು ನೋಡುತ್ತಿದ್ದರು. ಇದನ್ನು ಕಂಡ ಗೌರಿ ಪೈಯವರಿಗೆ ಒಂದು ಕ್ಷಣ ಮುಜುಗರವಾಯಿತು. ಎರಡನೆಯದು, ಆಗಿನ ಹಂಪನಕಟ್ಟೆ ಬಸ್‌ಸ್ಟಾಂಡಲ್ಲಿ ಬಸ್ಸಲ್ಲಿದ್ದಾಗ ಅಲ್ಲಿಯೂ ಗೌರಿ ಮಾಮಮ ಎಂದು ನಾನು ಕರೆಯುವಾಗ ಬಸ್ ಕಂಡಕ್ಟರ್ ಬಸ್ಸಲ್ಲಿ ಅಜ್ಜಿಯನ್ನು ಹುಡುಕುತ್ತಿದ್ದರು. ಅವರು ಸಂಬಂಧದಲ್ಲಿ ಅಜ್ಜಿಯಾಗಿದ್ದರೂ ವಿದ್ಯಾರ್ಥಿ ಪ್ರಾಯದವರಾಗಿದ್ದರು.

ನನ್ನ ತಾಯಿ ವರದಕ್ಕ ಮತ್ತು ತಂದೆ ವಿಶ್ವಭಾವಜೀ ಅವರಿಗೂ ಪುತ್ತೂರಿನ ಸಂಬಂಧಿಕರಿಗೆಲ್ಲಾ ತುಂಬಾ ಪ್ರೀತಿ. ಇದು ಒಂದು ಘಟನೆ ನನ್ನ ಬಾಲ್ಯದಲ್ಲಿ ನಡೆದದ್ದು. ಮಂಗಳೂರಿನಲ್ಲಿ ಸಿನಿಮಾ ಮಂದಿರದಲ್ಲಿ ಹೊಸ ಸಿನಿಮಾ ಬಂದಾಗ ಎಂಬಾಸಿಡರ್ ಕಾರಲ್ಲಿ ಹಿರಿಯರು ಕಿರಿಯರು ಸೇರಿ ಸುಮಾರು ಹದಿನೈದು ಮಂದಿ ಸಿನಿಮಾ ಮುಗಿಸಿ ನಮ್ಮ ಮನೆಗೆ ಕಾರಿನಿಂದ ಇಳಿಯುತ್ತಿದ್ದರು. ನನಗೆ ಕನ್ನಡ ಚಲನಚಿತ್ರ ಪದ್ಯಗಳೆಂದರೆ ಬಹಳ ಇಷ್ಟ ಅದರಲ್ಲೂ ಅಂದಿನ ಕಾಲದ ಪದ್ಯಗಳು ಅಚ್ಚುಮೆಚ್ಚು. ಆಗ ನಾನು ದುಬ್ಯಾಯಲ್ಲಿ

ಉದ್ಯೋಗದಲ್ಲಿದ್ದೆ. ಆಗ ಡಾ। ಗೌರಿ ಪೈಯವರು ಕ್ಯಾಸೆಟ್‌ಗಳನ್ನು ನನಗೋಸ್ಕರವೇ ಸಿದ್ಧಪಡಿಸಿ ಕಳುಹಿಸಿಕೊಡುತ್ತಿದ್ದರು. ನಾನು ಬಿಲ್ಡರ್ ಆಗಿದ್ದಾಗ ಕೆಲವು ಸಮಯ ಹಣದ ಅಡಚಣೆ ಉಂಟಾದಾಗ ಅವರ ಸಹಾಯಹಸ್ತವೇ ನನಗೆ ರಕ್ಷೆಯಾಗಿತ್ತು. ಹೆಮ್ಮೆಯ ವಿಷಯವೆಂದರೆ ಅವರು ತೋರಿಸಿದ ಪ್ರೀತಿ. ಆದರಕ್ಕೆ ನಾನು ತೆಗೆದುಕೊಂಡ ಹಣವನ್ನು ಕ್ಲಪ್ತ ಸಮಯಕ್ಕೆ ಪಾವತಿ ಮಾಡಿರುವೆ.

ಡಾ। ಗೌರಿ ಪೈ ಮತ್ತು ಕೆ.ಸಿ.ಪ್ರಭು ಬಳಗದಿಂದ ಉತ್ತರ ಹಾಗೂ ದಕ್ಷಿಣ ಭಾರತದ ಅನೇಕ ಯಾತ್ರಾ ಸ್ಥಳಗಳ ಭೇಟಿ ಮಾಡುವ ಅವಕಾಶ ಒದಗಿದ್ದಕ್ಕೆ ಇಂದಿಗೂ ನಾನು ಅವರಿಬ್ಬರಿಗೂ ಚಿರಋಣಿ. ಹಿಂದೊಮ್ಮೆ ಡಾ। ಗೌರಿ ಪೈ, ವಾಮನ ಪೈ ಮತ್ತು ನಾನು ಮಾನಸ ಸರೋವರ, ಕೈಲಾಸ ಯಾತ್ರೆಗೆ ಹೊರಟಿದ್ದೆವು. ಅಕಸ್ಮಾತ್ತಾಗಿ ದಾರಿಯಲ್ಲಿ ಅಪಾಯಕಾರಿ ಭೂಕುಸಿತವಾಗಿ ಹಲವು ಅಡಚಣೆಗಳು ದಾರಿಯಲ್ಲಿ ಎದುರಾದರೂ ಅವರ ಧೈರ್ಯ-ಸ್ಥೈರ್ಯ ನಮಗೆಲ್ಲಾ ಅನುಕರಣೀಯವಾಗಿತ್ತು. ಯಾತ್ರೆಯ ಕಡೆಯಂಚಿನಲ್ಲಿ ನದಿಯೊಂದು ಉಕ್ಕೇರಿ ಹರಿದು ಬಂದು ಪ್ರಯಾಣವನ್ನು ಮೊಟಕುಗೊಳಿಸಿ ಮಾನಸ ಸರೋವರ ಕೈಲಾಸ ಯಾತ್ರೆ ಪೂರ್ಣಗೊಳಿಸಲಾಗಲಿಲ್ಲ.

ಆನಂದಾಶ್ರಮ ಎಂಬ ಹಿರಿಯರ ವೃದ್ಧಾಶ್ರಮ ಅವರ ಮನಸಿನ ಇಚ್ಛೆ ಸಾಕಾರಗೊಂಡಂತಹ ಉದಾಹರಣೆಯಾಗಿದೆ. ಇದರಿಂದ ಸಮಾಜದ ಅನೇಕ ಅಸಹಾಯಕ ವಯೋವೃದ್ಧರಿಗೆ ತಮ್ಮ ಜೀವನ ಸಂಜೆಯನ್ನು ಸಂತೋಷದಿಂದ, ತೃಪ್ತಿಯಿಂದ ಕಳೆಯುವಂತಾಗಿದೆ. ಇತ್ತೀಚಿನ ದಿನಗಳಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕಾರ ಸಿಕ್ಕವರೆಲ್ಲಾ ದಿನಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ತಮ್ಮ ಬಗ್ಗೆ ಪ್ರಕಟಿಸುತ್ತಾರೆ. ಆದರೆ ಡಾ। ಗೌರಿ ಪೈಯವರು ತಮಗೆ ಹಲವು ರಾಜ್ಯ ಪ್ರಶಸ್ತಿ ಪುರಸ್ಕಾರಗಳು ಸಂದರೂ ತಮ್ಮ ಸ್ವಂತ ಇಚ್ಛೆಯಿಂದ ಅವುಗಳನ್ನು ಪ್ರಚಾರಪಡಿಸಲಿಲ್ಲ. ಇದು ಅವರ ನಿಸ್ವಾರ್ಥ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಸಮಾಜದ ಏಳಿಗೆಗಾಗಿ ನಾಡಿನ ಜನರ ಅಭಿವೃದ್ಧಿಗಾಗಿ ಅಸಹಾಯಕ ಜನರ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಡಾ। ಗೌರಿ ಪೈಯವರು ನಮಗೆಲ್ಲಾ ದಾರಿದೀಪವಾಗಿದ್ದಾರೆ. ಸರಳ ಸಜ್ಜನಿಕೆಯ ಮಹಾ ಧೀಮಂತ ವ್ಯಕ್ತಿತ್ವ ಅವರದ್ದು. ನಾವೆಲ್ಲಾ ಪ್ರೀತಿಯಿಂದ ಐಕ್ಯಮತದಿಂದ ಇರಬೇಕು. ಸಮಾಜದಲ್ಲಿ ಶಾಂತಿ, ಸುಖ, ಸಮಾಧಾನ ನೆಲೆಸಬೇಕು. ಎಂದು ಅವರು ಶ್ರಮಿಸುತ್ತಿದ್ದಾರೆ. ಅವರಿಗೆ ಶ್ರೀ ಭಗವಂತನು ಒಳ್ಳೆಯ ಆರೋಗ್ಯ ದೀರ್ಘಾಯುಷ್ಯ ಕೊಡಲಿ. ಅವರಿಂದ ನಮ್ಮ ನಾಡಿಗೆ ಇನ್ನಷ್ಟು ಸೇವೆಗಳು ಸಲ್ಲುವಂತಾಗಲಿ ಎಂದು ಶ್ರೀ ವೆಂಕಟರಮಣ ದೇವರಲ್ಲಿ ಪ್ರಾರ್ಥಿಸುತ್ತೇನೆ.



ಸೇವಾ ಸಾಧಕಿ.... ಡಾ.ಗೌರಿ ಪೈ

✍ ಕುಡ್ಗಿ ರತ್ನಾಕರ ಶೆಣೈ
ಪುತ್ತೂರು


ಧರೆಗೆ ಬಂದಳೋ ಗೌರಿ ಧರೆಗೆ ಬಂದಳೋ
ಗಿರಿಜಾ ಗೋಪಾಲ ಪುತ್ರಿಯಾಗಿ ಬಂದಳೋ
ಮುಕ್ತಿಪುರದ ಜನರ ಸೇವೆಗಾಗಿ ಬಂದಳೋ
ಇಳೆಗೆ ಬಂದಳೋ ಗೌರಿ ಇಳೆಗೆ ಬಂದಳೋ

ನಾಲ್ಕು ದಶಕದ ಸೇವಾ ಸಾಧನೆ
ರೋಗಿಗಳ ಸೇವೆಗಾಗಿ ಗಿರಿಜಾ ಸ್ಥಾಪನೆ
ಎರಡು ದಶಕದ ಅಪಾರ ಶ್ರಮ
ವೃದ್ಧರ ವಿಶ್ರಾಮದ ಆನಂದಾಶ್ರಮ

ನೀಗಿಸಲು ಜನರ ದೃಷ್ಟಿ ದೋಷವ
ನಡೆಸುವರು ಉಚಿತ ನೇತ್ರ ಶಿಬಿರವ
ಮನೆ ದಾದಿಯರ ವಿದ್ಯಾಧಾರ
ಅಬಲೆ ಸ್ತ್ರೀಯರಿಗಿದು ಆಧಾರ

ದೀನರ ಸೇವೆಗಾಗಿ ಈ ಕುವರಿಯು
[illegible]
[illegible]
[illegible]

[illegible] ರೋಗಿಗಳ ಸೇವೆಗೆಂದು
ಜೀವನ ಮುಡಿಪಾಗಿದೆ ಇಂದು
ಎಂಬತ್ತರ ಸಂಭ್ರಮದ ಈ ಸಮಯ
ಶತಾಯುವಾಗಿರಿ ನಿರಾಮಯ



ಗೌರಕ್ಕನಿಗೆ ಗೌರಕ್ಕನೇ ಸಾಟಿ

✍ ಇಂದುಮತಿ ಪೈ
ಬೆಂಗಳೂರು

ಡಾ। ಗೌರಿ ಪೈ ಇವರು ನಮ್ಮ ಕಿರಿಯ ಸೋದರತ್ತೆ. ಗೌರಕ್ಕ ಎಂದಾಕ್ಷಣ ನನಗೆ ಭಗವದ್ಗೀತೆಯ ಈ ಶ್ಲೋಕವು ನೆನಪಾಗುತ್ತದೆ. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷುಕದಾಚನ। ಯಾಕೆಂದರೆ ಅವರು ಯಾವುದೇ ಫಲಾಪೇಕ್ಷೆ ಇಲ್ಲದೆ ತಮ್ಮ ಆಯುಷ್ಯವನ್ನು ಜನತೆಯ ಸೇವೆಗಾಗಿಯೇ ಮೀಸಲಿಟ್ಟಿದ್ದಾರೆ. ಅವರಿಗೆ' ಜನತೆಯ ಸೇವೆಯೇ ಜನಾರ್ಧನ ಸೇವೆ' ಆಗಿದೆ. ಇದೇ ಅವರ ಜೀವನದ ಗುರಿ. (Motto in life) ಆಗಿದೆ. ಅವರ ಬಗ್ಗೆ ಎಷ್ಟು ಬರೆದರೂ ಸಾಲದು.

ಯಾವ ಮತ ಭೇದ ಇಲ್ಲದೆ ಎಲ್ಲರನ್ನೂ ಪ್ರೀತಿಸುತ್ತಾರೆ ನಮ್ಮ ಗೌರಕ್ಕ. ಎಲ್ಲರಿಗೂ ಯಾವ ಹೊತ್ತಿನಲ್ಲಿಯೂ ಸಹಾಯ ಮಾಡುವುದರಲ್ಲಿ ಎತ್ತಿದ ಕೈ. ಚಿಕ್ಕಂದಿನಿಂದಲೂ ನಮ್ಮನ್ನೆಲ್ಲಾ ಕಟ್ಟಿಕೊಂಡು ಪ್ರವಾಸಕ್ಕೆ ಹೋಗುತ್ತಿದ್ದರು. ಅದೂ ಬಸ್ಸು ಮಾಡಿ ಶಾಲೆಯ ಮಕ್ಕಳಂತೆ. ನಾಗರಹೊಳೆ, ಗೋವಾ, ಶಿವಮೊಗ್ಗ ಈ ಎಲ್ಲಾ ಸ್ಥಳಗಳನ್ನು ನಾನು ಅವರೊಟ್ಟಿಗೇ ಹೋಗಿ ನೋಡಿದ್ದು.ಆ ಸಿಹಿ ನೆನಪು ನನ್ನ ಮನಸ್ಸಿನಲ್ಲಿ ಇನ್ನೂ ಹಚ್ಚಹಸುರಾಗಿದೆ.

ನನಗೆ ಬುದ್ಧಿ ಬಂದಾಗ ನಮ್ಮ ಅಜ್ಜಿ, ತಾತನವರ ಅನಾರೋಗ್ಯದ ಸಮಯದಲ್ಲಿ ಗೌರಕ್ಕನವರು ಅವರ ಸೇವೆ ಮಾಡುವುದನ್ನು ನೋಡಿದ್ದೇನೆ. ಆ ಸಮಯದಲ್ಲಿ ತಮ್ಮ ತಾಯಿಯನ್ನು ಬೊಂಬಾಯಿಗೆ ಕರೆದುಕೊಂಡು ಹೋದದ್ದು ಕಂಡಿದ್ದೇನೆ. ಬಹುಶಃ ಆಗ ಪಾಕಿಸ್ತಾನ ಯುದ್ಧ ಇರಬಹುದು. ಗೌರಕ್ಕನವರು ಎಮ್.ಬಿ.ಬಿ.ಎಸ್., ಎಮ್.ಡಿ. ಕಲಿಯುತ್ತಿದ್ದರು. ಅದರೂ ತಮ್ಮ ವಿದ್ಯಾಭ್ಯಾಸವನ್ನು ಬದಿಗಿಟ್ಟು ತನ್ನ ಹೆತ್ತವರನ್ನು ಚೆನ್ನಾಗಿಯೇ ನೋಡಿಕೊಂಡಿದ್ದರು. ಅವರ ಆರೈಕೆಯನ್ನು ಮಾಡಿದ್ದರು. ತಮ್ಮ ಹೆತ್ತವರ ಬಗ್ಗೆ ಅದೆಷ್ಟು ಕಳಕಳಿ ಇತ್ತು ಅವರಿಗೆ!.

ಅವರ ಗಿರಿಜಾ ಕ್ಲಿನಿಕ್ ನಮಗೆ ಮಾತ್ರ ಅಲ್ಲಾ, ಹತ್ತಿರದ ಹಳ್ಳಿ, ಊರುಗಳಿಗೂ ಒಂದು

'ವರದಾನ' ಆಯಿತು. ಎಲ್ಲೆಂದಲೋ (ಪಾಣಾಜೆ, ಸುಳ್ಯ, ಬೆಳ್ಳಾರೆ, ಸುಬ್ರಹ್ಮಣ್ಯ, ವಿಟ್ಲದ ಕಡೆಗಳಿಂದ) ಹಗಲು ರಾತ್ರಿ ಎನ್ನದೆ ಜನರು ಬರುತ್ತಿದ್ದರು. "ಬಾಣಂತನ" ಅವರ ಸ್ಪೆಶಾಲಿಟಿ ಆಗಿತ್ತು. ಆದರೆ ಮಕ್ಕಳು, ವೃದ್ಧರು, ವಯಸ್ಕರು, ಎಲ್ಲಾ ತರಹದ ರೋಗಿಗಳು ಬರುತ್ತಿದ್ದರು. ಆಗಿನ ಕಾಲದಲ್ಲಿ Children specialist, diabetologist ಎಂದು ಹೆಚ್ಚು ಪ್ರಚಲಿತ ಇರಲಿಲ್ಲ ತಾನೇ!? ಯಾರು ಬಂದರೂ ಅವರನ್ನು ನೋಡಲೇಬೇಕು, ಮದ್ದು ಕೊಡಲೇಬೇಕು ಅಲ್ಲವೇ!?

ಪ್ರತಿರೋಗಿಯನ್ನೂ ಕೂಲಂಕಷವಾಗಿ ಪರೀಕ್ಷಿಸಿ ಅವರಿಗೆಲ್ಲಾ ಟ್ರೀಟ್‌ಮೆಂಟ್ ಕೊಡುತ್ತಿದ್ದರು. ಆದ್ದರಿಂದ ನಮಗೆ ಡಾಕ್ಟ್ರು ಅಂದರೆ ನಮ್ಮ ಪಾಲಿನ "ದೇವರು" ಅವರು. ಪ್ರತಿಯೊಂದು ರೋಗಿಯ ಹತ್ತಿರ ಅವರ ಸುಖ ದುಃಖವನ್ನು ವಿಚಾರಿಸಿ ನಂತರವೇ ಅವರನ್ನು ಪರೀಕ್ಷಿಸುತ್ತಿದ್ದರು. ರೋಗಿ ಮತ್ತು ಡಾಕ್ಟ್ರ ಸಂಬಂಧ ಎಷ್ಟು ಚೆನ್ನಾಗಿತ್ತು. ರೋಗಿಗಳಿಗೆ ಅವರ ಮೇಲೆ ಎಷ್ಟು ವಿಶ್ವಾಸ!! ಅವರ ಸಮಯದಲ್ಲಿ ಸ್ಕ್ಯಾನಿಂಗ್ ಇರಲಿಲ್ಲ. ಮಗುವಿನ ಸ್ಟ್ರೆಸ್‌ಟೆಸ್ಟ್ ಮಾಡುವ ಉಪಕರಣಗಳೂ ಇರಲಿಲ್ಲ. ಈಗಿನ ಹಾಗೆ ಯಾವ ಸೌಕರ್ಯಗಳೂ ಇರಲಿಲ್ಲ. ಅಂಥ ಸಮಯದಲ್ಲಿ ರೋಗಿಯ ಸ್ಥಿತಿ, Symptoms ಗಳನ್ನೆಲ್ಲಾ ನೋಡಿಯೇ ಅವರು ಮಗುವಿಗೆ ಅಪಾಯ ಇದೆ ಎಂದು ಕಂಡು ಹಿಡಿದು ಆಪರೇಷನ್ ವ್ಯವಸ್ಥೆ ಮಾಡುತ್ತಿದ್ದರು. ರೋಗಿಯ ಬಗ್ಗೆ ತುಂಬಾ ಜಾಗ್ರತೆ ತೆಗೆದುಕೊಳ್ಳುತ್ತಿದ್ದರು.

ಜನರಲ್ ವಾರ್ಡ್‌ನಲ್ಲಿ ಒಂದು ಬೆಡ್ ಬಡ ರೋಗಿಗಾಗಿಯೇ ಮೀಸಲಾಗಿತ್ತು. ಅಂತಹ ರೋಗಿಗಳಿಗೆ ತಮ್ಮ ಕೈಯಿಂದ ಖರ್ಚು ಮಾಡುತ್ತಿದ್ದರು. ಎಷ್ಟೊಂದು ದೊಡ್ಡ ಮನಸ್ಸು ಅವರದು. ಈಗಿನ ಕಾಲದಲ್ಲಿ ದುಡ್ಡಿದ್ದರೆ ಮಾತ್ರ ಡಾಕ್ಟ್ರ ಹತ್ತಿರ ಹೋಗಬೇಕು. ಇಲ್ಲದಿದ್ದರೆ ಸಾವೇ ಗತಿ. ಮನುಷ್ಯತ್ವ ಎಲ್ಲಿ ಹೋಗಿದೆಯೋ ಗೊತ್ತಿಲ್ಲ.

ಆಸ್ಪತ್ರೆಯಲ್ಲಿ ದೂರ ದೂರದಿಂದ ಬಂದು ಬಾಣಂತಿಯಾದ ಮಹಿಳೆಯರಿಗೆ ಹಾಗೂ ಅವರೊಟ್ಟಿಗೆ ಇದ್ದವರಿಗೂ ಊಟ ತಿಂಡಿಯ ವ್ಯವಸ್ಥೆ ಇತ್ತು. ಉತ್ತಮ ದರ್ಜೆಯ, ಹೊಟ್ಟೆ ತುಂಬಾ ಊಟ ಬಹಳ ಕಡಿಮೆ ಕ್ರಯದಲ್ಲೇ ಸಿಗುತ್ತಿತ್ತು. ನಾವು ಬಾಣಂತಿಗೆ ಎಲ್ಲಿಂದ ಊಟ ತರುವುದೆಂಬ ಯೋಚನೆಯೇ ಇರಲಿಲ್ಲ. ನಾನೂ ಆ ಊಟ ಮಾಡಿದ್ದೇನೆ. ನಮ್ಮ ಮನೆಯ ಹಾಗೇ ಇತ್ತು ಆ ಊಟ.

ಹೀಗೆ 30 ವರ್ಷಗಳ ತನಕ ಗೌರಕ್ಷನವರು ಡಾಕ್ಟರರಾಗಿ ಜನರ ಸೇವೆ ಮಾಡಿದರು. ಅವರು ಯಾವತ್ತೂ ದುಡ್ಡಿಗಾಗಿ ಕೆಲಸ ಮಾಡಲೇ ಇಲ್ಲ. ಅವರೊಂದು "ಕರ್ಮಯೋಗಿ". ತಮ್ಮ ಕರ್ತವ್ಯವನ್ನು, ತಮ್ಮ ಜವಾಬ್ದಾರಿಯನ್ನೂ ಚೆನ್ನಾಗಿ ನಿಭಾಯಿಸಿದ್ದಾರೆ. ಆ 'ಗಿರಿಜಾ ಕ್ಲಿನಿಕ್'

ಸ್ಪತ್ರೆಯಲ್ಲಿ ಶರಣುಹೋದ ಎಷ್ಟೋ ಜನರು ಸಂತೋಷದಿಂದ ಗುಣಮುಖರಾಗಿ ಹೋಗಿದ್ದಾರೆ. ನಮಗೆಲ್ಲಾ ಅದು ಒಂದು 'ದೇವಾಲಯ'ವೇ ಆಗಿತ್ತು.

ತಮ್ಮ 60ನೇ ವರ್ಷದಲ್ಲಿಒಂದು ವೃದ್ಧಾಶ್ರಮವನ್ನು ಕಟ್ಟುವುದು ಸುಲಭದ ಕೆಲಸವೇನಲ್ಲ ಎಂಬಾ ಜವಾಬ್ದಾರಿಯುತ ಕೆಲಸ. It requires lot of dedication, courage and hard work ಅಂತಹ ಒಂದು ಪುಣ್ಯದ ಕಾರ್ಯವನ್ನು ಕೈಗೊಂಡರು. ಅವರ ದೃಢ ನಿರ್ಧಾರವೇ ಅವರನ್ನು ಈ ಕಾರ್ಯ ಮಾಡಲು ಪ್ರೇರೇಪಿಸಿತು. ಅವರದ್ದು One man show. ನಾವು 60ನೇ ವರ್ಷದಲ್ಲಿ ರಿಟೈರ್ ಆಗುತ್ತೇವೆ. ಗೌರಕ್ಕನವರು 60ನೇ ವರ್ಷದಲ್ಲಿಯೂ Fully Occupied ಆಗಿದ್ದರು. ಪುರುಸೊತ್ತೇ ಇರಲಿಲ್ಲ.

ಆಶ್ರಮದ ಜಾಗ ಒಂದು ಗುಡ್ಡೆಯಾಗಿತ್ತು. ಅಲ್ಲಿ ನಾವು ಕುಂಟಲು ಹಣ್ಣು ತಿನ್ನಲು ಹೋಗುತ್ತಿದ್ದೆವು. ಅಲ್ಲಿ ಗಾಳಿ ಹೊರತು ಬೇರೇನೂ ಇರಲಿಲ್ಲ. ಅಂತಹ ಒಂದು ಗುಡ್ಡೆಯಲ್ಲಿ, ಇಷ್ಟು ಸುಂದರವಾದ, ವಿಶಾಲವಾದ ಆಶ್ರಮವನ್ನು ಕಟ್ಟಿಸಿದರು ಮಾತ್ರವಲ್ಲ, ಆ ಗುಡ್ಡೆಗೆ ಹೋಗುವ ದಾರಿಯನ್ನೂ ಮಾಡಿಸಿಕೊಂಡರು. ಹೀಗೆ 'ಮನಸ್ಸಿದ್ದಲ್ಲಿ ಮಾರ್ಗ' ಎಂಬ ಗಾದೆಯನ್ನು ಪುಷ್ಟೀಕರಿಸಿದರು. ಅದಲ್ಲದೆ ಆ ಗುಡ್ಡೆಯಲ್ಲಿ ಹಣ್ಣು-ಹಂಪಲು, ಹೂ ತರಕಾರಿಗಳನ್ನೂ ಬೆಳೆಸಿದ್ದಾರೆ. ಇದಕ್ಕೇ ಹೇಳುವುದು 'ಕಾಯಕವೇ ಕೈಲಾಸ' ಎಂದು. ನೀವು ಬೇರೊಂದು ಕೈಲಾಸವನ್ನು ಹುಡುಕುವ ಅಗತ್ಯವೇಇಲ್ಲ. ಅಲ್ಲಿಯ ಶಾಂತ, ನಿರ್ಮಲವಾದ ವಾತಾವರಣವೇ ಸಾಕು.ಮನಸ್ಸಿಗೆ ತುಂಬಾ ಆನಂದ ಆಗುತ್ತದೆ. 'ಆನಂದಾಶ್ರಮ'ದ ಸ್ಥಾಪನೆಯೇ ನಮಗೊಂದು ಹೆಮ್ಮೆಯ ವಿಷಯ. ಇದಕ್ಕಾಗಿ ಗೌರಕ್ಕನವರು ಹಗಲು ರಾತ್ರಿ ಎನ್ನದೇ ಎಷ್ಟು ಕಷ್ಟ ಪಟ್ಟಿದ್ದಾರೋ!? ಅವರು ನಮಗೆ ಯಾವಾಗಲೂ ಅವರ ಕಷ್ಟಗಳನ್ನು ಹೇಳಿಕೊಳ್ಳುವುದೇ ಇಲ್ಲ.

ಈಗಿನ ಕಾಲದಲ್ಲಿ ಮಕ್ಕಳು ತಾಯಿ, ತಂದೆಯವರನ್ನು, ವೃದ್ಧರನ್ನು ತುಂಬಾ ನಿರ್ಲಕ್ಷಿಸುತ್ತಾರೆ. ಮಕ್ಕಳಿಗೆ ಅವರನ್ನು ನೋಡುವ ಮನಸ್ಸೂ ಇಲ್ಲ. ಪುರುಸೊತ್ತೂ ಇಲ್ಲ. ಅಂದ ಮೇಲೆ ಈ ವೃದ್ಧರು ಎಲ್ಲಿಗೆ ಹೋಗುವುದು? ಪಾಪ – ಈ ವಿಚಾರ ಅವರ ತಲೆಗೆ ಹೋಗಿತ್ತು. ಗೌರಕ್ಕನವರಿಗೆ, ವೃದ್ಧರಿಗಾಗಿ ಒಂದು ವೃದ್ಧಾಶ್ರಮ ಇರಲೇಬೇಕು, ಅದು need of the hour ಎಂದು ಕಂಡಿತು. ಅಂಥಾ ಸಮಯದಲ್ಲಿ ಈ 'ಆನಂದಾಶ್ರಮ' ಸ್ಥಾಪಿಸಿ ಎಷ್ಟೋ ವೃದ್ಧರಿಗೆ ಆಶ್ರಯ ಕೊಡುವಂತೆ ಮಾಡಿದರು. What a meaningful thought?

ಆಶ್ರಮದ ಶಿಸ್ತು ನಿಯಮಗಳು ತುಂಬಾ ಚೆನ್ನಾಗಿವೆ. ಅವರು ಆಶ್ರಮವಾಸಿಗಳ ಸುಖ

[illegible] Age is only number. Where there is a will, there is a way.

7 [illegible] Intestinal obstruction [illegible] 10 [illegible] Rib [illegible]

[illegible] May be it is financial, emotional or moral support.

Moral support: [illegible] moral support [illegible] ಸೌಭಾಗ್ಯ ಸಿಕ್ಕಿತು.


[illegible]

ರ್ಥ ಮಾಡಿಕೊಂಡಿಲ್ಲ. ಅವರು ಒಂದು ಶ್ರೀಫಲದ (ತೆಂಗಿನಕಾಯಿ) ಹಾಗೆ. ಹೊರಗೆ ಗಟ್ಟಿ. ಒಳಗೆ ತುಂಬಾ ಮೆದು. ಮತ್ತೆ ಸ್ವಲ್ಪ ರಫ್ ಎಂಡ್ ಟಫ್. ಇಲ್ಲದಿದ್ದರೆ ಈಗಿನ ಕಾಲದಲ್ಲಿ ಜೀವನ ಮಾಡಲಾಗುತ್ತದೆಯೇ!? ಮತ್ತೆ ಕೆಲವರಿಗೆ ಅವರೆಂದರೆ 'ಗರ್ ಕಾ ಮುರ್ಗೀ ದಾಲ್ ಬರಾಬರ್' ಬಹುಶಃ ಕನ್ನಡದಲ್ಲಿ ಈ ಗಾದೆಗೆ ಏನು ಹೇಳುತ್ತಾರೋ 'ಹಿತ್ತಲ ಗಿಡ ಮದ್ದಲ್ಲ' ಇದನ್ನೆಲ್ಲಾ ಅವರವರಿಗೆ ಬಿಟ್ಟು ಕೊಡಬೇಕು. ಅದು ಏನೇ ಇರಲಿ. ಅವರ ಮನೆ ನಮಗೊಂದು ತವರುಮನೆ ಇದ್ದ ಹಾಗೆ. ಯಾವಾಗಲೂ ತೆರೆದ ಬಾಗಿಲು. ಓಪನ್ ಇನ್ವಿಟೇಶನ್ ಇದ್ದೇ ಇದೆ.

ಅವರು ತುಂಬಾ ಸರಳ ಜೀವಿ: ನಾನು ಅವರಿಗೆ ಗಿಫ್ಟ್ (ಉಡುಗೊರೆ) ಕೊಟ್ಟಾಗ ಹೇಳುತ್ತೇನೆ– ಗೌರಕ್ಕಾ ಇದು ತುಂಬಾ ಸಿಂಪಲ್ ಸೀರೆ ನೀವು ಉಡುತ್ತೀರೋ ಇಲ್ಲವೋ? (ನಾವು ಮಿಡಲ್ ಕ್ಲಾಸ್ ಫ್ಯಾಮಿಲಿ) ಕೂಡಲೇ ಅವರ ಉತ್ತರ ಹೀಗಿದೆ– 'ನಾನು ನಿನ್ನ ಸೀರೆಯ ಬೆಲೆ ನೋಡುವುದಿಲ್ಲ. ಅದರ ಹಿಂದೆ ಇರುವ ನಿನ್ನ ಪ್ರೀತಿಗೆ ಬೆಲೆ ಕೊಡುತ್ತೇನೆ. ಖಂಡಿತಾ ಉಡುತ್ತೇನಮ್ಮಾ' ಎಷ್ಟೊಂದು ನಮ್ರತೆ. ಎಷ್ಟೊಂದು ಸರಳತೆ ಅಲ್ಲವೇ? ಅವರು ಅನ್ಯಾಯವನ್ನು ಸಹಿಸುವುದಿಲ್ಲ. ಕಂಡದ್ದನ್ನು ಕಂಡ ಹಾಗೇ ಹೇಳುತ್ತಾರೆ. ಅದು ಅವರ ಸ್ವಭಾವ.

ಇನ್ನು ಎಷ್ಟೇ ಬರೆದರೂ ಅದು ಕಮ್ಮಿಯೇ. ರಾಮಕೃಷ್ಣ ಸೇವಾ ಸಮಾಜಕ್ಕೂ ತಮ್ಮ ಕೈಯಲ್ಲಿ ಆದಷ್ಟು ಸಹಾಯ ಮಾಡಿದ್ದಾರೆ. ಈಗಲೂ ಐ ಕ್ಯಾಂಪ್ ಕಂಡಕ್ಟ್ ಮಾಡುತ್ತಾರೆ. ಸುಮಾರು 50 ವರ್ಷದಿಂದ ತಮ್ಮ ಜೀವನವನ್ನು ಜನತೆಯ ಸೇವೆಗಾಗಿಯೇ ಗಂಧದ ಹಾಗೆ ಸವೆಸಿದ್ದಾರೆ. ಅವರನ್ನು ಸೋದರತ್ತೆಯಾಗಿ ಪಡೆದ ನಾವು ತುಂಬಾ ಭಾಗ್ಯವಂತರು. 'ಜನತೆಯ ಸೇವೆಯೇ ಜನಾರ್ದನನ ಸೇವೆ' ಎಂದು ನಮಗೆ ತೋರಿಸಿ ಕೊಟ್ಟ ಅವರು ನಮಗೆ ಕುಟುಂಬದ ಒಂದು "ಸೂರ್ಯ"ನಂತೆ ಇದ್ದಾರೆ. ಅಂಥ ನಿಸ್ವಾರ್ಥದಿಂದ ಸೇವೆ ಮಾಡುವ ಸೂರ್ಯನ ಒಂದು ಕಿರಣವಾದರೂ ಆಗಲು ನಾವು ಪ್ರಯತ್ನಿಸೋಣ.





ನಾನು ಕಂಡ ಗೌರಿ ಪೈ

ಸಂಸಾರದಲಿ ರಕ್ತಿ ದೇವರಲಿ ಭಕ್ತಿ
ಸತ್ಸಂಗದಾಸಕ್ತಿ ಸೇವಾ ಪ್ರವೃತ್ತಿ


ಭಾಗವಹಿಸುವಿಕೆ, ನಮ್ಮ ಮನೆಯಲ್ಲಿ ಜರಗುವ ಶ್ರೀ ಲಲಿತಾ ಪಂಚಮೀ ಜಾಗರಣೆ, ಶ್ರೀ ರಾಮನವಮೀ ಉತ್ಸವಗಳಲ್ಲಿ ತಪ್ಪದೇ ಪಾಲ್ಗೊಳ್ಳುವುದು ಅವರ ದೈವ ಭಕ್ತಿಯ ಸಂಕೇತ.

ತನ್ನ ಆರೋಗ್ಯವನ್ನೂ ಕಡೆಗಣಿಸಿ ವಿದೇಶಗಳಲ್ಲಿ ಸಂಚರಿಸಿ ದಾನಿಗಳಿಂದ ಧನ ಸಂಚಯಿಸಿ ಸಮಾನ ಮನಸ್ಕರ ಸಹಕಾರ, ಸಹಾಯ ಹಸ್ತಗಳ ನೆರವಿನಿಂದ ಪುತ್ತೂರಿನ ಬಿರುಮಲೆಗಿರಿಯ ಸೆರಗಿನ ರಮಣೀಯವಾದ ತಾಣದಲ್ಲಿ ಭವ್ಯವಾದ ಕಟ್ಟಡವನ್ನು ನಿರ್ಮಿಸಿ 'ಆನಂದಾಶ್ರಮ'ವೆಂಬ ಸೇವಾಸಂಸ್ಥೆಯನ್ನು ಪ್ರಾರಂಭಿಸಿ ಆಸರೆ ವಂಚಿತ ವೃದ್ಧರಿಗೆ ಆಶ್ರಯದಾತರಾಗಿದ್ದಾರೆ. ಈ ಆಶ್ರಮದಲ್ಲಿ ಹಲವು ಹಿರಿಯರು ನೆಮ್ಮದಿಯಿಂದ ವಾಸ ಮಾಡುತ್ತಿದ್ದಾರೆ. ಸನಿಹದಲ್ಲಿ ಅಂಗನವಾಡಿಗಾಗಿ ಒಂದು ಕಟ್ಟಡವನ್ನು ನಿರ್ಮಿಸಿಕೊಟ್ಟು ಮಕ್ಕಳ ಪ್ರೀತಿಗೆ ಪಾತ್ರರಾಗಿರುತ್ತಾರೆ. ಆಶ್ರಮವಾಸಿಗಳ ಸಂತೋಷಕ್ಕಾಗಿ ಆಗಾಗ ಭಜನೆ, ಸತ್ಸಂಗ, ವಿಚಾರ ಸಂಕಿರಣ, ಸಂಗೀತ ಕಛೇರಿ ವರ್ಷಕ್ಕೊಮ್ಮೆ ಹಿರಿಯರಿಗೆ ಗೌರವಾರ್ಪಣೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿರುವುದು ಇತರರಿಗೊಂದು ಆದರ್ಶ. ಆಶ್ರಮವಾಸಿಗಳನ್ನು ಆಗಾಗ ಸಂದರ್ಶಿಸಿ ಪ್ರೀತಿ, ವಾತ್ಸಲ್ಯದ ಮಾತುಗಳಿಂದ ರಮಿಸುತ್ತಿರುವುದು ಪೈಗಳವರ ಹೃದಯ ವೈಶಾಲ್ಯತೆಗೆ ಸಾಕ್ಷಿ.

ವೃತ್ತಿಯಲ್ಲಿ ಪರಿಣತಿ ಅನುಭವದಲ್ಲಿ ಹಿರಿಮೆ, ನಡೆ ನುಡಿಗಳಲ್ಲಿ ವಿನಯ ಸಂಸಾರದಲ್ಲಿ ದೀನರಿಗೆ ಸಹಾಯ ಹಸ್ತ. ಇವು ಪೈಗಳವರ ಗರಿಮೆ. ಸುಮಾರು 47 ವರ್ಷಗಳಿಂದ ಅವರ ಪರಿಚಿತನಾದ ನಾನು ಹಾಗೂ ನನ್ನ ಹಲವು ಬಂಧುಗಳು ಅವರಿಂದ ಪ್ರೀತಿಯ ಸವಿಯುಂಡವರು. ಅವರ ಪ್ರೀತಿ ಭ್ರಾತೃತ್ವ ಅವಿಸ್ಮರಣೀಯವೆನಿಸಿದೆ.

ಹಲವು ಕಡೆ ಸನ್ಮಾನಿಸಲ್ಪಟ್ಟಿರುವ ಪೈಯವರ ಸಮಾಜ ಸೇವಾ ಪ್ರವೃತ್ತಿಯನ್ನು ಗುರುತಿಸಿ ಅಂತರಾಷ್ಟ್ರೀಯ ಆರ್ಯಭಟ ಪ್ರಶಸ್ತಿಯೊಂದಿಗೆ ಸನ್ಮಾನಿಸಿರುವುದು ಪುತ್ತೂರಿನವರಾದ ನಮಗೆ ಹೆಮ್ಮೆಯ ವಿಷಯ. "ಬಣ್ಣ ಬದಲಾಗದ" ಅತ್ಯಂತ ಸರಳವಾದ ಏಕರೂಪವಾದ ಉಡುಪಿನಲ್ಲಿ ನಿತ್ಯ ಕಾಣಿಸುತ್ತಿರುವ ಡಾ। ಪೈಯವರು ಸರಳತೆಗೊಂದು ಸಾಕಾರ.

ಎಂಬತ್ತು ವಸಂತಗಳನ್ನು ಕಂಡಿರುವ ಡಾ। ಗೌರಿ ಪೈಯವರು ನೂರು ವಸಂತಗಳನ್ನು ಕಾಣುವಂತಾಗಲಿ. ಅವರಿಗೆ ಆಯುರಾರೋಗ್ಯ ಭಾಗ್ಯವನ್ನು ಕರುಣಿಸುವಂತೆ ಶ್ರೀರಾಮಚಂದ್ರಸ್ವಾಮಿಯನ್ನು ಪ್ರಾರ್ಥಿಸುತ್ತಾ ವಿರಮಿಸುತ್ತೇನೆ.



ನನ್ನ ನೆಚ್ಚಿನ ಗೌರಿಯಕ್ಕ

✍ ಮಲ್ಲಿಕಾ ಪ್ರಸಾದ್
[illegible]

[illegible] ಗೌರವಾನ್ವಿತರಾಗಿದ್ದಾರೆ.

[illegible] ಬರಬೇಕೆಂದು ಹುರಿದುಂಬಿಸಿದವರು.

[illegible] ನೀಡಿದವರು.

[illegible]

[illegible]

ುಪಯೋಗಿಸಿ ತನ್ನ ಮಿತ್ರರ ಸಹಾಯ ಮತ್ತು ಸಂಸ್ಥೆಗಳ ಮೂಲಕ ಅವರನ್ನು ಸೇರಿಸಿ ುಂದರ ಮತ್ತು ಸುಸಜ್ಜಿತವಾದ ಆನಂದಾಶ್ರಮ ನಿಜವಾದ ಆನಂದದ ಆಶ್ರಮವೇ ಆಯಿತು.

ಕೊನೆಗೆ 1972ನೆ ಇಸವಿಯಲ್ಲಿ ನನ್ನ ಅತ್ತೆಯವರು, ತುಂಬಾ ರೋಗದಿಂದ ಬಳಲುತ್ತಿದ್ದಾಗ, ಮಂಗಳೂರಿನ ಚಿಕಿತ್ಸೆ ಫಲಕಾರಿಯಾಗದಿದ್ದಾಗ, ಡಾ। ಗೌರಿ ಪೈಯನ್ನು ಸಂಪರ್ಕಿಸಿದರು. ಅವರ ಚಿಕಿತ್ಸೆ ಎಷ್ಟು ಫಲಕಾರಿಯಾಯಿತೆಂದರೆ, ಅವರು ಈಗಲೂ ಬದುಕಿದ್ದಾರೆ. ಅಂತೂ ಗೌರಿಯಕ್ಕನಿಗೆ ದೇವರು ದೀರ್ಘಾಯುಷ್ಯನ್ನಿತ್ತು, ಅವರಿಂದ ಲೋಕ ಕಲ್ಯಾಣವಾಗಲಿ.







ವಜ್ರದಂತೆ ಕಠೋರ, ಹೂವಂತೆ ಮೃದು

✍ ನಂದಿನಿ ವಿ. ಶೆಣೈ
ಪುತ್ತೂರು

ಪಾಣೆಮಂಗಳೂರು ಪೈ ಕುಟುಂಬದ ಪುತ್ತೂರಿನಲ್ಲಿ ನೆಲೆಸಿದ್ದ ಕುಟುಂಬದಲ್ಲಿ ಜನ್ಮವೆತ್ತಿ ಬೆಳೆದವಳಾದ ನಾನು (ಡಾ। ಗೌರಿ ಪೈಯವರಿಗೆ) ಗೌರವಾರ್ಥ ಅರ್ಪಿಸಲ್ಪಡುವ ಅಭಿನಂದನೆಯಲ್ಲಿ ನನಗೆ ತಿಳಿದ ವಿಷಯಗಳನ್ನು ಪ್ರಕಟಿಸುವರೇ ಇಚ್ಛಿಸುತ್ತೇನೆ.

ಡಾ। ಗೌರಿ ಪೈಯವರು 1938ನೇ ಇಸವಿ ಆಗೋಸ್ತ್ 21ರಂದು ಪುತ್ತೂರಿನಲ್ಲಿ ಜನಿಸಿದರು. ಇವರ ತಂದೆ ಗೋಪಾಲ ಪೈಯವರ ಐದು ಗಂಡು ಮತ್ತು ನಾಲ್ಕು ಮಂದಿ ಹೆಣ್ಣು ಮಕ್ಕಳಲ್ಲಿ ಕೊನೆಯವರಾಗಿ ಜನಿಸಿದರು. 1969ರಲ್ಲಿ ತಮ್ಮ ತಾಯಿಯವರ ಸವಿನೆನಪಿಗಾಗಿ 'ಗಿರಿಜಾ ಕ್ಲಿನಿಕ್' ಎಂಬ ಆಸ್ಪತ್ರೆಯನ್ನು ಪುತ್ತೂರಿನ ಕಲ್ಲಾರೆ ದರ್ಬೆಯಲ್ಲಿ ಆರಂಭಿಸಿ ತಮ್ಮ ವೈದ್ಯ ವೃತ್ತಿಜೀವನವನ್ನು ಪ್ರಾರಂಭಿಸಿದರು. ಅವರ ವೃತ್ತಿನಿಷ್ಠೆ ಮತ್ತು ಕಠೋರ ನಿಲುವುಗಳಿಂದಾಗಿ ಪುತ್ತೂರಿನಲ್ಲಿ ಅನತಿ ಕಾಲದಲ್ಲೇ ಒಳ್ಳೆಯ ಹೆಸರು ಗಳಿಸಿದರು. ಎಲ್ಲರ ಆದರಕ್ಕೆ ಪಾತ್ರರಾದರು ಹಾಗೂ ಆಸುಪಾಸಿನ ಊರಲ್ಲಿ ಇಂದಿಗೂ ಪುತ್ತೂರಿನ ಜನತೆ ಅವರ ಸೇವಾದೃಷ್ಟಿಯನ್ನು ಸ್ಮರಿಸುತ್ತಿರುವುದನ್ನು ನೋಡಿದರೆ ಜನರಿಗೆ ಅವರ ಮೇಲೆ ಇರುವ ಪ್ರೀತಿ ವಿಶ್ವಾಸ ಎಷ್ಟು ಎಂಬುದು ಮನವರಿಕೆ ಆಗುತ್ತದೆ.

ಡಾ। ಗೌರಿ ಪೈಯವರನ್ನು ಒಂದು ಮುಖದಲ್ಲಿ ನೋಡಿದಾಗ ಅವರ ಕಠೋರ ನಿಲುವು ನಮಗೆ ಕಂಡುಬರುತ್ತಿದ್ದರೂ ಅವರ ಇನ್ನೊಂದು ಮುಖವಿತ್ತು, ಅದು ಔದಾರ್ಯತನದಿಂದ ತುಂಬಿತ್ತು. ಅವರು ಔದಾರ್ಯತೆಯನ್ನು ಎಲ್ಲೂ ತೋರಿಸಿಕೊಳ್ಳದೇ ಇದ್ದರೂ ಅವರ ಕುಟುಂಬ ಮತ್ತು ಪುತ್ತೂರಿನಲ್ಲಿ ಅವರಿಂದ ಸೇವೆ ಪಡೆದುಕೊಂಡ ಜನತೆಗೆ ಈ ವಿಷಯ ತಿಳಿದಿತ್ತು. ಇಂದಿಗೂ ಅವರು ತಮ್ಮ ಕಾರ್ಯದಲ್ಲಿ ದೃಢ ನಿಲುವನ್ನು ಹೊಂದಿ ತಾವು ಮಾಡುವ ಕಾರ್ಯದಲ್ಲಿ ಉತ್ತಮ ಫಲಿತಾಂಶ ಬರುವಂತೆ ಮುನ್ನಡೆಯುವುದು ಅವರ ವಿಶಿಷ್ಟ ಗುಣ. ತಮ್ಮ ಜೀವನವನ್ನು ಜನಸೇವೆಗಾಗಿಯೇ ಮುಡಿಪಾಗಿಡುವ ಇವರು ಸರ್ಕಾರಿ ಪಾಳಿ

ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಈ ಸಂದರ್ಭದಲ್ಲಿ ಡಾ। ಗೌರಿ ಪೈಯವರ ಹಿರಿಯರ ಬಗ್ಗೆ ತಿಳಿಸಲು ನಾನು ಇಚ್ಛಿಸುತ್ತೇನೆ. ಡಾ। ಗೌರಿ ಪೈಯವರ ತಂದೆ ಶ್ರೀಯುತ ಪಾಣೆಮಂಗಳೂರು ಗೋಪಾಲ ಪೈಯವರು ತಾ 23/12/1887 ರಂದು ಪಾಣೆಮಂಗಳೂರಿನಲ್ಲಿ ಜನಿಸಿದರು. ಮುಂದೆ ಕೆಲಸ ಕಾರ್ಯಗಳಿಗಾಗಿ ಅವರು ಪುತ್ತೂರಿಗೆ ಬರಬೇಕಾಯಿತು. ವಿವಾಹವಾಗುವ ಪ್ರಾಯದಲ್ಲಿ ಅವರಿಗೆ ಕೂಡಿಗೆ ಕುಟುಂಬದ ಶ್ರೀನಿವಾಸ ಶೆಣೈಯವರ ಮಗಳಾದ ಗಿರಿಜಾಬಾಯಿ (ಹು.ದಿ– 15/04/1898) ಇವರೊಂದಿಗೆ ವಿವಾಹವಾಯಿತು. ಇವರ ತಂದೆಯವರಿಗೆ ಎರಡು ವಿವಾಹವಾಗಿದ್ದು ಹಿರಿಯ ಹೆಂಡತಿಯ ಸಂಸಾರದ ಕೆಲವರು ಈಗಲೂ ಪಾಣೆಮಂಗಳೂರಿನಲ್ಲಿ ನೆಲೆಸಿರುತ್ತಾರೆ. ಶ್ರೀಯುತ ಗೋಪಾಲ ಪೈಯವರ ಸಹೋದರಿ ಕೊರಪುಳಕ್ಕ ಇವರಿಗೆ ಬಂಟ್ವಾಳ ಕಾಮತ್ ಕುಟುಂಬದ ವರನಿಗೆ ಮದುವೆ ಮಾಡಿಕೊಟ್ಟಿದ್ದು ಈಗ ಅವರ ಪೀಳಿಗೆಯವರು ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.

ನನ್ನ ಅಜ್ಜ ಶ್ರೀಯುತ ಗೋಪಾಲ ಪೈಯವರು ಬಹಳ ಶಿಸ್ತಿನ ಮನುಷ್ಯರಾಗಿದ್ದರು. ಅವರ ಎದುರು ನಿಂತು ಅವರ ಜತೆ ಮಾತಾಡಲು ಅವರ ಮಕ್ಕಳೂ ಭಯಪಡುತ್ತಿದ್ದರು. ಅವರ ಮೊಮ್ಮಗಳಾದ ನಾನು ಸಹಿತ ಇತರೆಲ್ಲಾ ಮೊಮ್ಮಕ್ಕಳೊಂದಿಗೆ ಅವರ ಮಗುವಾಗಿಯೇ ಆಟವಾಡಿಕೊಂಡಿದ್ದುದನ್ನು ನಾನು ನನ್ನ ಜೀವನದಲ್ಲಿ ಮರೆಯುವಂತೆಯೇ ಇಲ್ಲ. ತೋರ್ಪಡಿಕೆಗೆ ಕಠೋರ, ಹಾಗೂ ಕಟ್ಟುನಿಟ್ಟಾಗಿ ಕಾಣುತ್ತಿದ್ದರೂ, ಹೂವಿನ ಮನಸ್ಸಿನವರಾಗಿದ್ದರು. ಇದು ನನ್ನ ಅನುಭವ.

ಅವರ ಜೀವನದಲ್ಲಿ ನಡೆದ ಕೆಲವು ಆಗು ಹೋಗುಗಳ ಬಗ್ಗೆ ನಮ್ಮಲ್ಲಿ ಹೇಳಿದುದನ್ನು ಇಲ್ಲಿ ಬರೆಯುವರೇ ನಾನು ಇಚ್ಛಿಸುತ್ತೇನೆ. ನನ್ನ ಅಜ್ಜನವರು ಅವರ ಸಣ್ಣ ಪ್ರಾಯದಲ್ಲೇ ಜೀವನ ನಿರ್ವಹಣೆಗಾಗಿ ಕೆಲಸ ಹುಡುಕಿಕೊಂಡು ಪುತ್ತೂರಿಗೆ ಬಂದವರು. ಪ್ರಥಮವಾಗಿ ಜನಾರ್ದನ ಭಟ್ ಎಂಬವರ ಜವಳಿ ಅಂಗಡಿಯಲ್ಲಿ ಮಾಸಿಕ ಎರಡು ರೂಪಾಯಿ ಸಂಬಳದಲ್ಲಿ ಕೆಲಸ ಮಾಡಬೇಕಾಯಿತು. ಆ ಸಂದರ್ಭದಲ್ಲಿ ಯಾವುದೋ ಒಬ್ಬ ಜ್ಯೋತಿಷ್ಯರು ಇವರ ಜಾತಕ ನೋಡಿ ಸಂಬಳದ ಕೆಲಸ ಮಾಡಬೇಡ. ಸಣ್ಣದಾದರೂ ತೊಂದರೆಯಿಲ್ಲ ನಿನ್ನದೇ ಆದ ವ್ಯಾಪಾರ ಮಾಡಿದರೆ ಮುಂದೆ ನೀನು ಬಹಳವಾಗಿ ಅಭಿವೃದ್ಧಿ ಹೊಂದುತ್ತೀ ಎಂದು ಹೇಳಿದ ಪ್ರಕಾರ ಅವರು ಆ ಸಂಬಳದ ವೃತ್ತಿ ತೊರೆದು ಸಣ್ಣ–ಪುಟ್ಟ ವ್ಯಾಪಾರ ಮಾಡಲು ತೊಡಗಿದರು. ಅದರಿಂದಾಗಿ ಸ್ವಲ್ಪ ಸ್ವಲ್ಪವಾಗಿಯೇ ಅಭಿವೃದ್ಧಿ ಹೊಂದಿದ ಅವರು ಎತ್ತಿನ ಗಾಡಿಯೊಂದನ್ನು ಖರೀದಿಸಿದರು. ತದನಂತರ ಹಲವು ಗಾಡಿ (ಎತ್ತಿನ ಗಾಡಿ), ದನಗಳನ್ನು ಖರೀದಿಸಿ ದನಗಳ ಸಾಕಣೆಕೆ ಪ್ರಾರಂಭಿಸಿದರು. ಕಟ್ಟಿಗೆ ವ್ಯಾಪಾರವನ್ನೂ ಪ್ರಾರಂಭಿಸಿ ಮತ್ತೂ ಮುಂದುವರಿದು

ಮರಮಟ್ಟಿನ ವ್ಯಾಪಾರ ಪ್ರಾರಂಭಿಸಿದರು. ಆ ವ್ಯಾಪಾರದಲ್ಲಿ ಉನ್ನತಿ ಹೊಂದಿ, [illegible] ತಮ್ಮ ವ್ಯಾಪಾರವನ್ನು ವಿಸ್ತಾರವಾಗಿ ಬೆಳೆಸಿದರು. ಇದರಿಂದಾಗಿ ಪ್ರತಿಷ್ಠಿತರಲ್ಲಿ ಒಬ್ಬ ಶ್ರೀಮಂತ ವ್ಯಕ್ತಿ, ಗಣ್ಯರು ಎಂದು ಗುರುತಿಸಿಕೊಂಡರು.

ಈ ವೇಳೆಗಾಗಲೇ ಅವರು [illegible] ಎಂದು ತಿಳಿಸಿದ್ದರು.

[illegible]

[illegible] ತಂದೆಯ ಬಗ್ಗೆ ತಿಳಿಸಿದೆ.

[illegible] [illegible]



ಗೌರವದ ಗೌರಕ್ಕ

ಪಿ.ಅರವಿಂದ ಕುದ್ವ
ಪಾಣೆಮಂಗಳೂರು


ಬದುಕಿನಲ್ಲಿ ಜೀವಿಸಬೇಕಾದರೆ ಯಾವುದಾದರೊಂದು ಆಸಕ್ತಿಯು ಬೇಕಾಗುತ್ತದೆ. ಆ ವ್ಯಕ್ತಿಯೇ "ಗೌರಕ್ಕ". ಅವರು ಇಡೀ ಕುಟುಂಬದ ಅವಿಭಾಜ್ಯ ಅಂಗವೆಂದು ಹೇಳಿದರೆ ಇದೊಂದು ಅತಿಶಯೋಕ್ತಿ ಆಗಲಾರದು.

ನನ್ನ ಕಾಲೇಜು ಜೀವನದ 5 ವರುಷಗಳಲ್ಲಿ ಪರೀಕ್ಷೆ ಸಮಯದಲ್ಲಿ ಇವರ ಮನೆಯಲ್ಲಿ ನಿಲ್ಲುವಂತಹ ಯೋಗವು ನನಗೆ ಒದಗಿತ್ತು. ಬೆಳಗ್ಗೆ 4.30-5 ಗಂಟೆಗೆ ಪ್ರತಿದಿನ ಎಬ್ಬಿಸಿ ಚಾ ಕೊಟ್ಟು ಇವರು ವಾಕಿಂಗ್‌ಗೆ ವಾಮನ್ ಮಾಮ ಅವರೊಂದಿಗೆ ಹೋಗುತ್ತಿದ್ದರು. ಇವರೊಂದಿಗೆ ನಾನು ತಿರುಪತಿ, ಶಬರಿಮಲೈ, ಯಾತ್ರಾಗಳಲ್ಲಿ ಕಳೆದ ಸಮಯ ಅವಿಸ್ಮರಣೀಯ.

ನನ್ನ ಜೀವನದ ಒಂದು ಹಂತದಲ್ಲಿ ಬಂದ ಕಷ್ಟಕಾಲದಲ್ಲಿ ನನಗೆ ಆಸರೆಯಾಗಿ ನಿಂತವರು ದೈವರಾಗಿ, ಸ್ನೇಹಿಯಾಗಿ, ಸಂಬಂಧಿಯಾಗಿ ಹೀಗೆ ಹಲವು ರೂಪದಲ್ಲಿ ನನಗೆ ಧೈರ್ಯವನ್ನು ತುಂಬುತ್ತಾ ಇದ್ದ ಒಂದು ಆಧಾರ ಸ್ತಂಭ ಇವರು.

ಎಲ್ಲವನ್ನು ಒಂದು ಹಂತದಲ್ಲಿ ಹೇಳುವುದಾದರೆ ಜೀವನದ ಆಗು ಹೋಗುಗಳ ನಡುವಿನ [illegible] ಅನುಭವದಲ್ಲಿ ಇವರ ಪಾತ್ರವು ಅವಿಸ್ಮರಣೀಯವಾಗಿದೆ.





DR. GOWRI PAI

MY FRIEND PHILOSOPHER AND GUIDE

Dr. (Mrs.) Kumudini Ganguli
Bengaluru

A note of Respect, Regards and Love

My relationship with Dr. Gowri Pai started in 1962 when we were medical students in KMC. She was my mentor, my elder sister (Akka) and a great friend. We had adjacent rooms in the hostel, she was senior to me in the college and as a mentor like quality she always corrected me whenever I was wayward. She used to tap on our partition door whenever I played some mischief with my classmate friends and she warned me to study which I was not doing sincerely.

Whenever the time came to help me, she was always there. Thus we developed a lifetime friendship. Her relatives were very nice with me, also my relatives respected her. Whenever I went to Mangalore for any occasion in my relative's house, I always made it a point to meet my Dear Gowri for lunch or breakfast. But there were times when I couldn't make it, on such occasions; she used to travel from Puttur to meet me. Such magnanimous gestures came from a person of great calibre was truly heart touching.


I appreciate the society and the organisation to have made it a point to celebrate her 80th birthday and her work towards the overall health of society. There are very few people who give up their good

running practice and do only social service. I thank the association for giving me the opportunity of writing a few lines about my dear friend Gowri. My husband Dr Arun Ganguli joins me (He is very fond of her and addresses her as Gaurakka), congratulate all of you for making it an event to remember and respect Gowri Pai. May God bless her with many more years to come for continued dedicated service to society. She has done her good deeds behind the screen not expecting any returns.

I conclude this with a line from Bhagwat Gita: Karmanye Vadhikaraste, Ma PhaleshuKadachana which fits into Dr Gowri Pai's life and work.

Thank you Gowri, for retaining our friendship for so many years.





ಗೌರಕ್ಕನೆಂಬ ಮೇರು ವ್ಯಕ್ತಿತ್ವ

- ವಿಜಯಲಕ್ಷ್ಮೀ ಕುಡ್ವ

[illegible] (ರೋಲ್ ಮಾಡೆಲ್) ಗೌರಕ್ಕ.

[illegible]

ಗೌರಕ್ಕನವರಿಂದ ಹಾಗೇನೇ. ಸೂರ್ಯನಿಂದ ಹೇಗೆ ಸಕಲ ಚರಾಚರ ಜೀವರಾಶಿಗಳಲ್ಲಿ ಜೀವಸಂಚಲನವೋ ಹಾಗೆ ಗೌರಕ್ಕನವರಿಂದ ನಮಗೆಲ್ಲಾ.

ಗೌರಕ್ಕನವರೊಂದಿಗೆ ಕಳೆದ ಬಾಲ್ಯದ ನೆನಪುಗಳು ಚಿರಕಾಲ ನೆನಪಿನಂಗಳದಲ್ಲಿ ಉಳಿಯುವಂತಹವು. ನಮ್ಮ ಹೆತ್ತವರಿಗಿಂತ ಮಿಗಿಲಾಗಿ ತೋರುವ ವಾತ್ಸಲ್ಯ ನಮಗೆ ಕೊಟ್ಟ ಸಂತೋಷ. ನಮ್ಮ ಸಣ್ಣ-ಪುಟ್ಟ ಆಸೆ ಆಕಾಂಕ್ಷೆಗಳನ್ನು ಈಡೇರಿಸಿದ್ದಾರೆ. ನಮ್ಮನ್ನು ಎಲ್ಲಾ ಪ್ರೇಕ್ಷಣೀಯ ತಾಣಗಳಿಗೆ ಕರೆದೊಯ್ದು ಸಿನಿಮಾ, ಹೋಟೇಲ್‌ಗಳಿಗೂ ನೆಂಟರಿಷ್ಟರ ಮನೆಗೂ ಕರೆದೊಯ್ಯುತ್ತಿದ್ದರು. ಆ ಕಾಲದಲ್ಲಿ ಹೆತ್ತವರು ಮಾಡದ್ದನ್ನು ನಮಗೆ ಮಾಡಿದ್ದಾರೆ. ಅತ್ಯಂತ ಧಾರಾಳ ಮನಸ್ಸುಳ್ಳ ಅವರು ನಾವು ಏನನ್ನೂ ಕೇಳದಿದ್ದರೂ ಮನಸ್ಸು ಅರಿತು ಎಲ್ಲವನ್ನೂ ಕೊಡಿಸುತ್ತಿದ್ದರು ಅವರೊಂದಿಗೆ ಕಳೆದ ಪ್ರತಿ ಒಂದು ಕ್ಷಣ ನಮ್ಮ ಜೀವನದ ಸ್ವರ್ಣಯುಗವೆಂದರೂ ತಪ್ಪಾಗಲಾರದು.

ಅವರು ಎಲ್ಲಾ ವಿಷಯದಲ್ಲೂ ಪರಿಣತರು, ಎಲ್ಲಾ ವಿದ್ಯೆಯಲ್ಲೂ ಅಭಿರುಚಿ ಉಳ್ಳವರು ಅವರಿಂದ ಬಿಡಿಸಲ್ಪಟ್ಟ ಅಪೂರ್ವ ಕಲಾಕೃತಿಗಳು ಅವರ ಮನೆಯಲ್ಲಿ ನೋಡಲು ಲಭ್ಯ embroidery, ear ring, hot painting ಹಾಗೂ ತೈಲಚಿತ್ರ ಕಣ್ಣುಗಳಿಗೆ ಹಬ್ಬ. ಮಧ್ಯಾಹ್ನದ ಬಿಡುವಿನ ಸಮಯದಲ್ಲಿ ಟೀಚರನ್ನೇ ಕರೆಸಿ ಹೊಲಿಗೆ, ಎಂಬ್ರಾಯಿಡರಿ, ಕಸೂತಿ ಕೆಲಸಗಳನ್ನೂ ಕಲಿತವರು. ಎಲ್ಲವೂ ಸಾಧ್ಯವೆನ್ನುವುದೇ ಅವರ ಸಿದ್ಧಾಂತ. ಕೇವಲ ಡಾಕ್ಟರಾಗಿ ಅವರ ಪ್ರತಿಭೆ ಸೀಮಿತವಾಗಿಲ್ಲ. ಅವರ ಬಹುಮುಖದ ಪ್ರತಿಭೆ ಏನೆಂದು ಬಣ್ಣಿಸಲಿ. ಯಾವುದೇ ಕಲಾಕೃತಿ ನೋಡಿದರೆ ಅವರಿಂದ ಕಲಿತು ಕೂಡಲೇ ಅದೇ ರೀತಿ ಮಾಡುವರು. ಎಲ್ಲವೂ ಅಂದಿಗೆ. ನಾಳೆ ಎನ್ನುವ ಪ್ರಶ್ನೆಯೇ ಇಲ್ಲ. ಅವರ ಬಹುಮುಖದ ಪ್ರತಿಭೆಗೆ ಇಪ್ಪತ್ನಾಲ್ಕು ಗಂಟೆ ಸಾಲದೇನೋ? ಸ್ಫೂರ್ತಿಯ ಕಾರಂಜಿ ಅವರು.

ಚಿಕ್ಕಂದಿನಲ್ಲಿ ಬೇಕಾಬಿಟ್ಟಿಯಾಗಿ ಬೆಳೆದ ನಮಗೆ ಶಿಸ್ತು ಕಲಿಸಿದರು. ಶಿಸ್ತು, ಸ್ವಚ್ಛತೆ, ಧೈರ್ಯ, ಮೇಧಾವಿತನಕ್ಕೆ ಇನ್ನೊಂದು ಹೆಸರೇ ಗೌರಕ್ಕ. ಹೆತ್ತವರ ಸ್ಥಾನದಲ್ಲಿ ಇಟ್ಟು ಪ್ರೀತಿಸುತ್ತೇವೆ. ಗೌರವಿಸುತ್ತೇವೆ. ಹೆತ್ತವರ ಹಾಗೇ ಪ್ರೀತಿಸುವ, ದಂಡಿಸುವ ಅಧಿಕಾರ ತಪ್ಪುಗಳನ್ನು ನಮಗೆ ಮನವರಿಕೆ ಮಾಡುವ ಅಧಿಕಾರ ಅವರಿಗಿತ್ತು. ಎಲ್ಲಿ ಪ್ರೀತಿ ಇದೆಯೋ? ಅಲ್ಲಿ ದಂಡಿಸುವ ಅಧಿಕಾರವಿದ್ದೇ ಇರುತ್ತದೆ.

ಶ್ರೀ ಸಾಮಾನ್ಯರಿಗೆ ಅಸಾಧ್ಯವಾಗಿರುವ ಅನಾಥಾಶ್ರಮವನ್ನು ಕಟ್ಟಿ ಬೆಳೆಸಿದರು. ಬೇರೆ ಬೇರೆ ವಿಭಾಗಗಳಾದ ವೃದ್ಧಾಶ್ರಮ, ವಾನಪ್ರಸ್ಥಾಶ್ರಮ, ಅನಾಥ ಮಕ್ಕಳ ಆಶ್ರಮ, ಕೊನೆಯ ಹಂತದಲ್ಲಿರುವ ಕ್ಯಾನ್ಸರ್ ರೋಗಿಗಳಿಗೆ ಅಕ್ಕರೆಯಿಂದಲೂ, ನೋವು ನಿವಾರಕಗಳಿಂದಲೂ

ಅವರ ನೋವುಗಳಿಗೆ ಸ್ಪಂದಿಸುವ ಗೌರಕ್ಕ ಅವರಿಗೆಂದೇ ಒಂದು ವಿಭಾಗ ಮಾಡಿದರು. ಗೋಶಾಲೆಗಳನ್ನು ಕಟ್ಟಿಸಿ ಕ್ಷೀರ ಕ್ರಾಂತಿಯನ್ನು ಮಾಡಿದರು. ಅಲ್ಲಿ ಅವರಿಂದ ನಡೆಸಲ್ಪಡುವ ಗುಡಿ ಕೈಗಾರಿಕೆಗಳೂ ಹಾಗೂ ಅಲ್ಲಿ ಉತ್ಪನ್ನವಾಗುವ ಸಾಮಾನುಗಳಿಗೆ ಒಳ್ಳೆಯ ಮಾರುಕಟ್ಟೆಯನ್ನು ಒದಗಿಸಿದರು. ಅಸಹಾಯಕರಾಗಿ ಬಂದ ಹೆಣ್ಣು ಮಕ್ಕಳಿಗೆ ನರ್ಸ್ ತರಬೇತಿ ನೀಡಿ ಅವರ ಬಾಳಿಗೆ ದೀಪವಾಗಿದ್ದಲ್ಲದೇ ಅವರಿಂದ ಸಮಾಜ ಸೇವೆಯನ್ನು ಮಾಡಿಸಿದರು. ಹಬ್ಬಹರಿದಿನಗಳನ್ನು ಅವರೊಂದಿಗೆ ಆಚರಿಸಿ, ಅವರಿಗೆ ಸಂತೋಷ ಉಂಟು ಮಾಡಿದರು. ಆಗಾಗ ಮನೋರಂಜನೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಬೇರೆ ಬೇರೆ ಡಾಕ್ಟರುಗಳ ಸೇವೆ ಅವರಿಗೆ ಲಭ್ಯವಾಗುವಂತೆ ಮಾಡಿದರು. ಇದೆಲ್ಲ ಸ್ವಸಂತೃಪ್ತಿಯಿಂದ ಮಾಡಿ ಸಫಲರಾದರು. ದೇಶದಲ್ಲಿ ವಿದೇಶದಲ್ಲಿ ಅನುಯಾಯಿಗಳನ್ನೂ, ದಾನಿಗಳನ್ನು ಹೊಂದಿದರು. ಬೇರೆ ಬೇರೆ ಆಶ್ರಮಗಳಿಗೂ ದಾನ ಮಾಡಿರುವ ಅವರು ಎಲ್ಲವನ್ನೂ ಗೌಪ್ಯವಾಗಿ ಇಟ್ಟರು. ಇಷ್ಟೆಲ್ಲ ಅಸಾಮಾನ್ಯ ಕೆಲಸ ಮಾಡಿರುವ ಗೌರಕ್ಕನವರು ಕಠಿಣದಲ್ಲಿ ವಜ್ರಕ್ಕೆ ಸಮಾನರು.

ಈಗಿನ ಕಲುಷಿತ, ಸ್ವಾರ್ಥ, ಮೋಸ ತುಂಬಿದ ಸಮಾಜದ ನಡುವೆ ಅಪರೂಪವಾಗಿ ನಿಂತ ಅವರು ಸಮುದ್ರದ ನಡುವೆ ಇರುವ ಬಂಡೆಯಂತೆ ಯಾವ ಪರಿಸರಕ್ಕೂ ಬಗ್ಗದ ದೃಢ ವ್ಯಕ್ತಿ ಅವರನ್ನು ನೋಡಿದಂತೆ ನಡೆಯುವವರೂ, ಸ್ವಾರ್ಥರಹಿತರಾಗಿ ದುಡಿಯುವವರೂ. ಕಲುಷಿತ, ಮೋಸ, ಅನ್ಯಾಯದ ವಿರುದ್ಧ ಸಿಡಿದೇಳುವವರೂ ಆಗಿರುವರು. ಅವರ ಕೋಪ, ತಾಪಗಳು ಹೊರಗಿನಿಂದ ಕಾಣುವ ಮುಳ್ಳಿನ ಹಾಗೆ ಅವರೊಳಗೆ ಗಂಗೆಯಷ್ಟು ಪ್ರೀತಿ ತುಂಬಿದೆ, ನಿರ್ಮಲವಾದ ಅವರ ಮನಸ್ಸು ಕೇವಲ ಹಾಗೆಯೇ ಇರುವುದು.

ನಮ್ಮ ಗೌರಕ್ಕ ಸುಂದರ ವ್ಯಕ್ತಿಯೂ, ಸುಸಂಸ್ಕೃತ ವ್ಯಕ್ತಿತ್ವ ಹೊಂದಿದವರೂ ಆಗಿದ್ದಾರೆ. ಎಂಬತ್ತರ ಹೊಸ್ತಿಲಲ್ಲಿ ಕಾಲಿಟ್ಟ ಅವರು ಈಗಲೂ ಇಪ್ಪತ್ತರ ಉತ್ಸಾಹದಲ್ಲಿ ಇರುವವರ ಹಾಗೆ ಇದ್ದಾರೆ. ಇದಕ್ಕೆಲ್ಲ ಅವರ ಹೊಸ ಪ್ರಾಣದ ಬಲವೇ ಕಾರಣವಾಗಿರಬಹುದೇನೋ?

ಯಾವುದೂ ಅಸಾಧ್ಯವಾದುದಲ್ಲ ಎಂಬುದಕ್ಕೆ ಜೀವಂತ ಉದಾಹರಣೆ ಅವರು. ಎಲ್ಲರ ಕಷ್ಟ ಸುಖಗಳಿಗೆ ಸಮಾನವಾಗಿ ಸ್ಪಂದಿಸುವವರು. ಬಡವ ಬಲ್ಲಿದ ಎನ್ನುವ ಭೇದವನ್ನು ಇಡದೇ ಅವರ ಜೀವಮಾನವೆಲ್ಲಾ ಕೆಲಸದಲ್ಲಿ ಸದಾ ತೊಡಗಿಸಿ, ಸಭೆ ಸಮಾರಂಭಗಳಲ್ಲಿ ಭಾಗವಹಿಸಿ, ಅವರನ್ನು, ಸಂತೈಸುವವರು ಒಬ್ಬರೇ ಇರುವರು ಕಷ್ಟದಲ್ಲಿರುವವರಿಗೆ ಹಾಗೂ ಅನಾರೋಗ್ಯದಲ್ಲಿರುವವರಿಗೆ ಧೈರ್ಯ, ಶಕ್ತಿ, ನೀಡುವ ಧೀಮಂತ ವ್ಯಕ್ತಿ ಅವರು.

ಒಮ್ಮೆಗಾಗಿ ಅನಾರೋಗ್ಯದಿಂದ ಹಲ್ಲು ಬಾಯಿಯಲ್ಲಿ ನೋವಿನಿಂದ ಮುಖವೆಲ್ಲ ಊದಿಕೊಂಡು ಇದ್ದರೂ, ಆತ್ಮಬಲದಿಂದ ೭೦೪ ಜನ್ಮದಿನವನ್ನು ಆಚರಿಸಿದ ಅವರ ವ್ಯಕ್ತಿತ್ವವನ್ನು ಕಣ್ಣಾರೆ

ಂಡವರು ನಾವು.

ಡಾಕ್ಟರರಾಗಿ ಅವರ ವಿಷಯ ಹೇಳುವುದೆಂದರೆ ಅವರು ಅತ್ಯಂತ ಜನಪ್ರಿಯ ಡಾಕ್ಟರ್ ಆಗಿದ್ದರು. ಅವರ ಮೇಧಾಪಿತನ, ಕಾರ್ಯವೈಖರಿ, ನಿಖರತೆ ಹೊರ ರೋಗಿಗಳೊಂದಿಗೆ ಸೌಹಾರ್ದಯುತ ನಡವಳಿಕೆ, ನೇರಮಾತುಗಳಿಗೆ, ಸಮಯಪ್ರಜ್ಞೆಗೆ ಹೆಸರುವಾಸಿ ಆಗಿದ್ದರು. ಮುಖದಲ್ಲಿರುವ ಅನಿರ್ವಚನೀಯ ತೇಜಸ್ಸು ನಡೆಯಲ್ಲಿರುವ ಗಾಂಭೀರ್ಯ, ಉಡುಗೆ ತೊಡುಗೆಯ ಕಾಳಜಿ ಇವೆಲ್ಲಾ ರಾಜಹಂಸವನ್ನು ನೆನಪಿಗೆ ತರುವಂಥವು. ಅತ್ಯಂತ ಮೇಧಾವಿ, ಎಕ್ಸ್‌ರೇಯಂತ ಅವರ ತೀಕ್ಷ್ಣ ಕಣ್ಣುಗಳಿಂದ ಯಾವ ಕಾಯಿಲೆಗಳೂ ತಪ್ಪಿಸುವಂತಿಲ್ಲ. ಶಿಸ್ತು, ಸಂಯಮ, ಸ್ವಚ್ಛತೆಗೆ ಆದ್ಯತೆ ನೀಡುವ ಅವರು ಇವುಗಳಲ್ಲಿ ಲೋಪ ಉಂಟಾದಲ್ಲಿ ಸಿಡಿದೇಳುವರು ಮಾತ್ರವಲ್ಲದೇ ತಾವೇ ಸ್ವಚ್ಛತೆಗೆ ಮುಂದಾಗುವರು.

ಗೌರಕ್ಕನವರು ಜನಪ್ರಿಯತೆಯ ಉತ್ತುಂಗದಲ್ಲಿರುವಾಗಲೇ ಸಮಾಜ ಸೇವೆಗಾಗಿ ಆಶ್ರಮವನ್ನು ಸ್ವಪ್ರಯತ್ನದಿಂದ ಕಟ್ಟಿಸಿ ಬೆಳೆಸಿ ಅದಕ್ಕೆ ತಮ್ಮನ್ನು ಮುಡಿಪಾಗಿಟ್ಟಿದ್ದರು. ಪ್ರತಿ ಒಂದರಲ್ಲೂ ನೂರಕ್ಕೆ ನೂರು ಕೊಡುಗೆ ಅವರದ್ದು.

ಕಪಟ, ಮೋಸ ಹಾಗೂ ಸ್ವಾರ್ಥ ತುಂಬಿದ ಈಗಿನ ಸಮಾಜದಲ್ಲಿ, ನಿಸ್ವಾರ್ಥ ಸೇವೆಯನ್ನು ಮಾಡುವ ಗೌರಕ್ಕನವರಿಗೆ ಯಾವ ಪ್ರಶಸ್ತಿಯೂ ಕಡಿಮೆಯೇ. ಪ್ರಶಸ್ತಿಗಳ ಸರಮಾಲೆಯೇ ಅವರನ್ನು ಹುಡುಕಿ ಬಂದರೆ ಆಶ್ಚರ್ಯವೇನಿಲ್ಲಾ. ಅವರ ತೀಕ್ಷ್ಣ ದೃಷ್ಟಿಯಿಂದ ಎಲ್ಲರನ್ನೂ ಕ್ಷಣ ಮಾತ್ರದಲ್ಲಿ ಅಳೆಯಬಲ್ಲರು. ಆದರೆ ಯಾರಿಗೂ ಅವರ ಮನಸ್ಸನ್ನು ಅರಿಯುವುದಾಗಲೀ, ಭಾವನೆಗಳನ್ನು ಅಳೆಯುವುದಾಗಲೀ ಕಷ್ಟ ಸಾಧ್ಯ.

ಪ್ರಕೃತಿಯಂತೆ ನಿಗೂಢತೆ ಹಾಗೂ ನಿತ್ಯನೂತನಗಳಿಂದ ಕೂಡಿದ ವ್ಯಕ್ತಿ ಅವರು. ನೀಡುವುದೇ ಪ್ರಕೃತಿ ನಿಯಮವಲ್ಲದೇ ಪಡೆಯುವಂಥದಲ್ಲ. ನಾವು ಪ್ರಕೃತಿಯನ್ನು ಸಂಪೂರ್ಣವಾಗಿ ಅರಿತಿದ್ದೇವೆ ಎನ್ನುವುದು ಎಷ್ಟು ಮಿಥ್ಯವೋ ಹಾಗೆಯೇ ಗೌರಕ್ಕನವರನ್ನು ಸಂಪೂರ್ಣವಾಗಿ ಬಲ್ಲೆ ಎನ್ನುವುದೂ ಅಷ್ಟೇ ಮಿಥ್ಯ. ಸೋಲು, ಅಸಹಾಯಕತೆ ಅವರ ಬಳಿ ಸುಳಿಯಲಾರದು. ಅವರ ಜೀವನ ಚರಿತ್ರೆಯಲ್ಲಿ ಡಾಕ್ಟರಾಗಿಯೂ ಸಾಮಾನ್ಯ ಜೀವನದಲ್ಲೂ ಒಂದೇ ಒಂದು ಕಪ್ಪು ಚುಕ್ಕೆ ಗೋಚರಿಸದು.


ಈ ಎಲ್ಲಾ ವಿಷಯಗಳನ್ನು ಎಲ್ಲರೂ ಬಲ್ಲರು ನಮ್ಮ ಕುಟುಂಬದ ಸದಸ್ಯೆಯಾಗಿ ನಮ್ಮೊಡನೆ ನಡೆದ ಕೆಲವು ಘಟನೆಗಳನ್ನು ಇಲ್ಲಿ ವಿವರಿಸಿದ್ದೇನೆ. ತೀರಾ ಅನಾರೋಗ್ಯರಾಗಿ ಆ ರೋಗಕ್ಕೆ ಸಂಬಂಧಪಟ್ಟ ಬೇರೊಂದು ಆಸ್ಪತ್ರೆಯಲ್ಲಿ ದಾಖಲಾಗಿದ್ದ ನನ್ನ ತಮ್ಮನನ್ನು ಅವರ ಅಮೂಲ್ಯವಾದ ಸಮಯದ ನಡುವೆ ಬಿಡುವು ಮಾಡಿ ಆಗಾಗ ಭೇಟಿಯಾಗಿ ಧೈರ್ಯ,

ಆತ್ಮವಿಶ್ವಾಸವನ್ನು ತುಂಬಿಸಿದವರೂ, ನಮ್ಮೆಲ್ಲರ ಮುಂದಕ್ಕೆ ಸ್ಫೂರ್ತಿ, ನಮಗೆಲ್ಲಾ ಆತ್ಮಸ್ಥೈರ್ಯ ನೀಡಿ ಬೆನ್ನೆಲುಬಾಗಿ ನಿಂತ ಕರುಣಾಮಯಿ ಅವರು.

ಒಮ್ಮೆ ಅವರು ನಮ್ಮನ್ನೆಲ್ಲಾ ಸುಮಾರು ದೂರದ ತೋಟಕ್ಕೆ ಟ್ರಿಪ್‌ಗೆ ಕರೆದೊಯ್ದಿದ್ದರು. ನಮ್ಮೊಂದಿಗಿದ್ದ ದೊಡ್ಡಪ್ಪನೇ ಡ್ರೈವಿಂಗ್ ಮಾಡುತ್ತಿದ್ದರು. ಹಿಂದಿರುಗುವ ಸಮಯದಲ್ಲಿ ಅಚಾನಕ್ಕಾಗಿ ಸ್ವತಃ ಅಸ್ವಸ್ಥರಾಗಿ ಡ್ರೈವಿಂಗ್ ಮಾಡಲು ಅಸಾಧ್ಯವಾದಾಗ ಅವರೇ ಧೈರ್ಯ, ಸಾಹಸದಿಂದ ಆ ಕಠಿಣವಾದ ದಾರಿಯಲ್ಲಿ ಡ್ರೈವಿಂಗ್ ಮಾಡಿ ನಮ್ಮೆಲ್ಲರನ್ನೂ ಸುರಕ್ಷಿತರಾಗಿ ಮನೆಗೆ ಮುಟ್ಟಿಸಿದ ಅವರ ಧೈರ್ಯ ಸಾಹಸಕ್ಕೆ ಸಮನಾದವರು ಇರುವರೇ. ಅವರಿಗೆ ಜೊತೆಯಾಗಿ ಡ್ರೈವಿಂಗ್ ಬರುವುದು ನಮಗೆಲ್ಲಾ ತಿಳಿದದ್ದು ಅಂದೇ. ಇನ್ನೂ ಹಸಿರು ಮಧುರ ಅನುಭವವಾಗಿದೆ ಅವರ ಜೊತೆ.

ಗೌರಕ್ಕ ಮುಂದೊಂದು ಜನ್ಮ ಅನ್ನುವುದು ನಿಜವಾಗಿದ್ದರೆ ನಾನು ನಿಮ್ಮ ಕುಟುಂಬದಲ್ಲಿ ಜನಿಸಲು ಆಗದಿದ್ದಲ್ಲಿ, ನೀವಿದ್ದ ಊರಲ್ಲಿ ಜನಿಸಲು ಅಪೇಕ್ಷೆ ಉಳ್ಳವಳಾಗಿ. ನೀವು ಹಿಮಾಲಯದ ಎತ್ತರಕ್ಕೆ ಸಮವಾಗಿ ಅಗಾಧರಾಗಿ ಬೆಳೆಯುವುದನ್ನು ನೋಡುವ ಆಸೆ ಹೊಂದಿರುತ್ತೇನೆ.





Foot Prints On The Sand Bank of Time
The 80th Birthday of Dr. Gowri Pai

✍ **Swami Vinayakanandaji Maharaj**
Shree Ramakrishna Ashrama, Bailoor

Gladdened amidst the gladdened hearts, let me too offer my loving homage to the noble mother who has enshrined the great ideal of compassion and service in her heart and has been distributing the nectar of love to all those who could reach her. That has been the vow of her life. With the westering sun of life, to keep the lamp of sacrifice burning and for the stream of love and compassion to flow perennially, a service organization too has been established by her in the name of "Ananda Ashram". As the name suggests, it is a unique place and organization that is meant to radiate bliss and peace and bestow security to all who seek shelter in it. We heartily wish that a batch of dedicated souls appear to shoulder the legacy to keep ball rolling and glorify the glory it has gained.

